ಭಾನುವಾರ, ನವೆಂಬರ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 329 | ಪುಟ 20 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬೆಂಗಳೂರಿನಲ್ಲಿ 1996ರಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆ ಕಾಡಿದ್ದು, ನೆನಪು ಮೆಲುಕಾಡಿದ್ದು...



ಕೋವಿಡ್: 29.95 ಲಕ್ಷ ದಾಟಿದ ಸೋಂಕು 5

ಶೇಕಡ 40 ಲಂಚ ಪ್ರಕರಣ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹ

‘ಲಿಂಗಾಯತ ಕಾರ್ಡ್ ಬಳಸಿ ವ್ಯವಸ್ಥಿತ ಸಂಚು’ 5

ತನಿಖೆಗೆ ಸದನ ಸಮಿತಿ ರಚಿಸಲಿ 4

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿರಿಧಾನ್ಯ: ಸಂಸ್ಕರಣೆಯೇ ಸವಾಲು!

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೆಳವಣಿಗೆ (ಕೃಷಿ ವಿಸ್ತರಣೆ), ಬೇಡಿಕೆ, ಬಳಕೆ ಎಲ್ಲದರಲ್ಲೂ ಯಶಸ್ವಿಯಾಗಿ ಮುನ್ನಡೆಯುತ್ತಿರುವ ‘ಸಿರಿಧಾನ್ಯ ಕೃಷಿ’, ಬೆಳೆಸಿ–ಬಳಸುವ ನಡುವಿನ ಪ್ರಕ್ರಿಯೆಯಾದ ‘ಸಂಸ್ಕರಣೆ’ಯ ಹಂತದಲ್ಲಿ ಮಾತ್ರ ಹಲವು ಸವಾಲುಗಳನ್ನು ಎದುರಿಸುತ್ತಿದೆ.

ಇದು ರಾಜ್ಯದಲ್ಲಿನ ಸಿರಿಧಾನ್ಯ ಸ್ಥಿತಿ-ಗತಿಯ ಕುರಿತು ‘ಒಳನೋಟ’ ಬೀರಿದಾಗ ಸಿಗುವಂತಹ ಸ್ಥೂಲ ಚಿತ್ರಣ. ‘ಸಣ್ಣ ಹಿಡುವಳಿದಾರರು ಸಿರಿಧಾನ್ಯ ಕೃಷಿಯನ್ನು ಮುಂದುವರಿಸಲು ಹಿಂದೇಟು ಹಾಕಲು ಏನು ಕಾರಣ’ ಎಂದು ಹುಡುಕಲು ಹೊರಟರೆ, ಎರಡು ಪ್ರಮುಖ ತೊಡಕುಗಳು –ಉತ್ಪಾದನೆಗೆ ತಕ್ಕಂತೆ ಮಾರುಕಟ್ಟೆ ಸೌಲಭ್ಯದ ಅಭಾವ ಹಾಗೂ ‘ರೈತಸ್ನೇಹಿ’ ಸಂಸ್ಕರಣಾ ಯಂತ್ರಗಳ ಕೊರತೆ– ಎದ್ದು ಕಾಣುತ್ತವೆ.

ರಾಗಿ, ಜೋಳ ಎರಡೂ ಸಿರಿಧಾನ್ಯಗಳ ಗುಂಪಿಗೆ ಸೇರಿದ್ದರೂ ಈಗ ಸದ್ಯ ಹೆಚ್ಚು ಜನಪ್ರಿಯವಾಗಿರುವುದು ಅದೇ ಗುಂಪಿಗೆ ಸೇರಿದ ನವಣೆ, ಸಾಮೆ, ಹಾರಕ, ಸಜ್ಜೆ, ಕೊರಲೆ, ಬರಗು ಮತ್ತು ಊದಲು ಧಾನ್ಯಗಳು. ನಾಗರಿಕರಲ್ಲಿ ಹೆಚ್ಚಿದ ಆರೋಗ್ಯ ಕಾಳಜಿ ಮತ್ತು ಆಹಾರ ತಜ್ಞರು ಮೂಡಿಸಿದ ಅರಿವಿನಿಂದಾಗಿ ದಶಕದಿಂದ ಸಿರಿಧಾನ್ಯಗಳ ಬಳಕೆ–ಬೇಡಿಕೆ ಹೆಚ್ಚುತ್ತಿದೆ.

ಸಂಸ್ಕರಣಾ ಘಟಕಗಳು: ರಾಜ್ಯದಲ್ಲಿ ಅಂದಾಜು 50 ಸಿರಿಧಾನ್ಯ ಸಂಸ್ಕರಣಾ ಘಟಕಗಳಿವೆ. ಸರ್ಕಾರ ಮತ್ತು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ 15 ಘಟಕಗಳಿವೆ. ಕೆಲವರು ಸ್ವಂತವಾಗಿ ಮಾಡಿಕೊಂಡಿದ್ದಾರೆ. ಏಳೆಂಟು ಹೈಟೆಕ್ ಯಂತ್ರಗಳ ಘಟಕಗಳೂ ಇವೆ. ಸಣ್ಣ ಘಟಕಗಳ ಪ್ರಮಾಣ ಕಡಿಮೆ. ‘ರಾಜ್ಯದಲ್ಲಿನ ಸದ್ಯದ ಉತ್ಪಾದನೆಗೆ, ಈಗಿರುವ ಘಟಕಗಳು ಸಾಕು. ಆದರೆ, ರೈತರು ಮತ್ತು ಸಂಸ್ಕರಣಾ ಘಟಕದ ನಡುವೆ ಮಾಹಿತಿ ಕೊರತೆಯಿಂದಾಗಿ, ದೊಡ್ಡ ಘಟಕಗಳು ಕಚ್ಚಾ ವಸ್ತುಗಳ ಕೊರತೆ ಎದುರಿಸುತ್ತಿವೆ’ ಎನ್ನುತ್ತಾರೆ ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಕೊಯ್ಲೋತ್ತರ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಮತ್ತು ಸಿರಿಧಾನ್ಯಗಳ ಉತ್ಕೃಷ್ಟತಾ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ.ಸುರೇಶ್ ಕೆ.ಬಿ.


‘ಜಿಕೆವಿಕೆ ಆವರಣದಲ್ಲಿ ಗಂಟೆಗೆ 100 ಕೆಜಿ ಸಿರಿಧಾನ್ಯ ಸಂಸ್ಕರಣೆ ಮಾಡುವಂತಹ ಸಣ್ಣ ಘಟಕವೊಂದನ್ನು ಅಳವಡಿಸಿದ್ದೇವೆ. ವಿ.ವಿ. ವ್ಯಾಪ್ತಿಯ ನಾಲ್ಕು ಕೃಷಿ ವಿಜ್ಞಾನ ಕೇಂದ್ರಗಳಲ್ಲೂ ಇಂಥ ಯಂತ್ರಗಳಿವೆ. ಸುತ್ತಮುತ್ತಲಿನ ರೈತರಿಗೆ, ನಾಗರಿಕರಿಗೆ ಕೆ.ಜಿ.ಗೆ ₹5 ಶುಲ್ಕದೊಂದಿಗೆ ಧಾನ್ಯವನ್ನೂ ಸಂಸ್ಕರಿಸಿಕೊಡುತ್ತಿದ್ದೇವೆ. ಇಂಥ ಯಂತ್ರಗಳು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನವಾದರೆ, ಮಾರಾಟದ ವಿಧಾನಕ್ಕೆ ಕೆಎಂಎಫ್ ಮಾದರಿ ಅನುಸರಿಸಿದರೆ ಧಾನ್ಯಗಳ ಬೆಲೆಯೂ ಕಡಿಮೆಯಾಗುತ್ತದೆ; ಈಗಿರುವ ಸಮಸ್ಯೆ ಅರ್ಧ ಬಗೆಹರಿಯುತ್ತದೆ’ ಎನ್ನುತ್ತಾರೆ ಸುರೇಶ್.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6



ಪಡಿತರದಲ್ಲಿ ಸಿರಿಧಾನ್ಯ: ಶೀಘ್ರವೇ ಸಭೆ



ಸಿರಿಧಾನ್ಯ ಬೆಳೆಯುವ ಎಲ್ಲ ರೈತರಿಗೆ (ಸಣ್ಣ ಮತ್ತು ದೊಡ್ಡ ಹಿಡುವಳಿದಾರರು ಸೇರಿದಂತೆ) ಒಂದು ಹೆಕ್ಟೇರ್‌ಗೆ ₹10 ಸಾವಿರ ಪ್ರೋತ್ಸಾಹಧನ ಕೊಡುತ್ತಿದ್ದೇವೆ. ಈ ಹಿಂದೆ ಸ್ವಲ್ಪ ದಿನ ಈ ಪ್ರೋತ್ಸಾಹಧನ ಕೊಡುವುದು ನಿಂತಿತ್ತು. ಈಗ ಮತ್ತೆ ಮುಂದುವರಿಸಿದ್ದೇವೆ.

ಬಿಸಿಯೂಟ ಮತ್ತು ಪಡಿತರ ವ್ಯವಸ್ಥೆಯಲ್ಲಿ ಸಿaರಿಧಾನ್ಯ ಸೇರಿಸಿದರೆ ರೈತರಿಗೆ ಉತ್ತೇಜನ ಸಿಗುತ್ತದೆ ಎಂದು ನಾನೇ ಪ್ರಸ್ತಾವ ಸಲ್ಲಿಸಿದ್ದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಕಾನೂನು ಸಚಿವರೊಂದಿಗೆ ಶೀಘ್ರ ಸಭೆ ನಡೆಸಿ, ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ಹಾಸ್ಟೆಲ್ ಮತ್ತು ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ದೊರೆಯುತ್ತದೆ. ಅಪೌಷ್ಟಿಕತೆ ನಿವಾರಣೆಗೆ ನೆರವಾಗಲಿದೆ.

- ಬಿ.ಸಿ.ಪಾಟೀಲ, ಕೃಷಿ ಸಚಿವ

ಒಳನೋಟ

ಸಿರಿಧಾನ್ಯ ಧ್ಯಾನ

ಪ್ರತಿಕ್ರಿಯಿಸಿ: 9606038256
feedback@prajavani.co.in

ಟ್ರ್ಯಾಕ್ಟರ್ ರ‍್ಯಾಲಿ ಕೈಬಿಟ್ಟ ಎಸ್‌ಕೆಎಂ

ನವದೆಹಲಿ (ಪಿಟಿಐ): ಕೃಷಿಕರ ಬೇಡಿಕೆಗಳ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು, ನ.29ರಂದು ಸಂಸತ್ ಭವನದವರೆಗೆ ನಡೆಸಲು ಉದ್ದೇಶಿಸಿದ್ದ ಟ್ರ್ಯಾಕ್ಟರ್ ರ‍್ಯಾಲಿಯನ್ನು ಕೈಬಿಟ್ಟಿರುವುದಾಗಿ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಹೇಳಿದೆ. ಡಿ.4ರಂದು ಮತ್ತೊಮ್ಮೆ ಸಭೆ ಸೇರಿ, ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸುವುದಾಗಿ ಶನಿವಾರ ತಿಳಿಸಿದೆ.

8

ಕೊರೊನಾ ಹೊಸ ತಳಿ: ಎಲ್ಲೆಡೆ ದಿಗಿಲು

ಜೊಹಾನ್ಸ್‌ಬರ್ಗ್/ ಲಂಡನ್/ ಬರ್ಲಿನ್ (ರಾಯಿಟರ್ಸ್/ ಪಿಟಿಐ): ಕೊರೊನಾ ಹೊಸ ರೂಪಾಂತರ ತಳಿ ‘ಓಮಿಕ್ರಾನ್’ ಪತ್ತೆಯಾಗಿರುವ ದಕ್ಷಿಣ ಆಫ್ರಿಕಾದ ದೇಶಗಳಿಗೆ ಹಲವು ದೇಶಗಳು ತಾತ್ಕಾಲಿಕವಾಗಿ ವಿಮಾನ ಪ್ರಯಾಣ ನಿರ್ಬಂಧಿಸಿವೆ. ಅಮೆರಿಕ, ಬ್ರೆಜಿಲ್, ಕೆನಡಾ, ಸೌದಿ ಅರೇಬಿಯಾ, ಆಸ್ಟ್ರೇಲಿಯಾ, ಶ್ರೀಲಂಕಾ, ಥಾಯ್ಲೆಂಡ್, ಜಪಾನ್, ಫಿಲಿಪ್ಪೀನ್ಸ್, ಯುಎಇ, ಮಾರಿಷಸ್, ಒಮಾನ್ ದೇಶಗಳು ಶನಿವಾರ ಈ ನಿರ್ಧಾರ ತೆಗೆದುಕೊಂಡಿವೆ.

8

ಶಾಲಾ, ಕಾಲೇಜುಗಳಲ್ಲಿ ಕಾರ್ಯಕ್ರಮಕ್ಕೆ ನಿರ್ಬಂಧ?

ಕೇರಳ, ‘ಮಹಾ’ ಗಡಿ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾದ ಹೊಸ ತಳಿಯ ಓಮಿಕ್ರಾನ್ ವೈರಾಣು ವಿವಿಧ ರಾಷ್ಟ್ರಗಳಲ್ಲಿ ಹರಡುತ್ತಿರುವ ಬೆನ್ನಲ್ಲೇ, ಕೋವಿಡ್ ಸೋಂಕು ಹರಡುವಿಕೆ ತಡೆಯಲು ಮುಂದಾಗಿರುವ ರಾಜ್ಯ ಸರ್ಕಾರ, ನೆರೆಯ ಕೇರಳ, ಮಹಾರಾಷ್ಟ್ರ ರಾಜ್ಯಗಳ ಗಡಿಗಳಲ್ಲಿ ಕಟ್ಟೆಚ್ಚರ ಘೋಷಿಸಿದೆ.

ಎರಡೂ ರಾಜ್ಯಗಳಿಂದ ಬರುವವರಿಗೆ ಆರ್‌ಟಿ–ಪಿಸಿಆರ್ ವಿಧಾನದಡಿ ಪಡೆದ ‘ಕೋವಿಡ್ ನೆಗೆಟಿವ್’ ವರದಿಯನ್ನು ಕಡ್ಡಾಯಗೊಳಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಸಂಜೆ ಕೆಲವು ಸಚಿವರು, ಆರೋಗ್ಯ ಮತ್ತು ವಿಪತ್ತು ನಿರ್ವಹಣಾ ಇಲಾಖೆಯ ಹಿರಿಯ ಅಧಿಕಾರಿಗಳು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ತಜ್ಞರ ಸಮಿತಿ ಸದಸ್ಯರ ಜತೆ ಸಭೆ ನಡೆಸಿ ಪರಿಸ್ಥಿತಿ ಅವಲೋಕಿಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ಕೋವಿಡ್ ನಿಯಂತ್ರಣಕ್ಕೆ ಹಲವು ಕ್ರಮಗಳನ್ನು ಪ್ರಕಟಿಸಿದರು.

8ನೇ ಪುಟ ನೋಡಿ

ಎರಡು ಡೋಸ್ ಲಸಿಕೆ ಕಡ್ಡಾಯ

ಸರ್ಕಾರಿ ಕಚೇರಿಗಳು, ಮಾಲ್‌ಗಳು, ಚಿತ್ರಮಂದಿರಗಳು, ಹೋಟೆಲ್, ರೆಸ್ಟೋರಂಟ್, ಈಜುಕೊಳ, ಸಾರ್ವಜನಿಕ ಗ್ರಂಥಾಲಯ, ಮೃಗಾಲಯ ಮತ್ತು ಜೈವಿಕ ಉದ್ಯಾನಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಎರಡು ಡೋಸ್ ಲಸಿಕೆ ತೆಗೆದುಕೊಳ್ಳದೇ ಇದ್ದರೆ, ಅಂತಹವರಿಗೆ ಪ್ರವೇಶ ನೀಡದಿರಲು ನಿರ್ಧರಿಸಲಾಗಿದೆ ಎಂದು ಸಚಿವ ಆರ್. ಅಶೋಕ ತಿಳಿಸಿದರು.

ಕೋವಿಡ್ ನಿಯಂತ್ರಣದ ಮುಂಚೂಣಿ ಸಿಬ್ಬಂದಿಗೆ ‘ಬೂಸ್ಟರ್ ಡೋಸ್’ ನೀಡಲು ಕೇಂದ್ರ ಸರ್ಕಾರದ ಅನುಮತಿ ಕೋರಿದ್ದು, ಒಪ್ಪಿಗೆ ಕೊಟ್ಟರೆ ಮುಂದಿನ ವಾರದಿಂದಲೇ ನೀಡಲಾಗುವುದು ಎಂದರು.

ದ.ಆಫ್ರಿಕಾದಿಂದ ಬಂದ ಇಬ್ಬರಿಗೆ ಕೋವಿಡ್

ದೇವನಹಳ್ಳಿ: ದಕ್ಷಿಣ ಆಫ್ರಿಕಾದಿಂದ ಶನಿವಾರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಇಬ್ಬರು ಪ್ರಯಾಣಿಕರಲ್ಲಿ ಕೋವಿಡ್ ಇರುವುದು ದೃಢಪಟ್ಟಿದೆ. ಈ ಇಬ್ಬರ ಸಂಪರ್ಕದಲ್ಲಿದ್ದ ಹತ್ತು ಪ್ರಯಾಣಿಕರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಯಾರಿಗೂ ಸೋಂಕು ತಗುಲಿಲ್ಲ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ತಿಳಿಸಿದ್ದಾರೆ.

ಸೋಂಕಿತರನ್ನು ವಿಮಾನ ನಿಲ್ದಾಣದಲ್ಲಿಯೇ ಕ್ವಾರಂಟೈನ್ ಮಾಡಲಾಗಿದ್ದು, ಅವರ ಗಂಟಲು ದ್ರವ ಮಾದರಿಯನ್ನು ವಂಶವಾಹಿ ಅನುಕ್ರಮಣಿಕೆ (ಜಿನೋಮ್ ಸೀಕ್ವೆನ್ಸಿಂಗ್) ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ಇನ್ನೂ ಎರಡು ಅಥವಾ ಮೂರು ದಿನಗಳಲ್ಲಿ ವರದಿ ಬರುವ ನಿರೀಕ್ಷೆ ಇದೆ.

ಒಂದು ವೇಳೆ ಇವರಲ್ಲಿ ರೂಪಾಂತರಿ ವೈರಸ್ ಕಂಡುಬಂದರೆ ವಿಮಾನ ನಿಲ್ದಾಣದ ಸಮೀಪದಲ್ಲಿರುವ ಆಕಾಶ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಸಂಚಾರ ನಿರ್ಬಂಧ ಸಡಿಲಿಕೆ ಮರು ಪರಿಶೀಲಿಸಿ: ಪ್ರಧಾನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಂತರರಾಷ್ಟ್ರೀಯ ವಿಮಾನ ಪ್ರಯಾಣದ ಮೇಲಿನ ನಿರ್ಬಂಧ ಸಡಿಲಿಸುವ ಬಗ್ಗೆ ಮರು ಪರಿಶೀಲನೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ ‘ಓಮಿಕ್ರಾನ್’ ಆತಂಕದ ಹಿನ್ನೆಲೆಯಲ್ಲಿ, ಮೋದಿ ಅವರು ಶನಿವಾರ ಉನ್ನತ ಅಧಿಕಾರಿಗಳ ಜೊತೆ ಸಭೆ ನಡೆಸಿದರು.



‘ಅಪಾಯಕಾರಿ ವೈರಾಣು ತಳಿ ಹರಡಿರುವ ದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ಹೆಚ್ಚಿನ ನಿಗಾ ಇರಿಸಬೇಕು. ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಕಟ ನಿಗಾ ಇಡಬೇಕು. ಅವರನ್ನು ಕಠಿಣ ತಪಾಸಣೆಗೆ ಒಳಪಡಿಸಬೇಕು’ ಎಂದು ಅವರು ಸೂಚಿಸಿದರು.

21 ತಿಂಗಳ ಹಿಂದೆ ಸ್ಥಗಿತಗೊಂಡಿದ್ದ ಅಂತರರಾಷ್ಟ್ರೀಯ ವಿಮಾನ ಸಂಚಾರವನ್ನು ಡಿಸೆಂಬರ್ 15ರಿಂದ ಮರು ಆರಂಭಿಸುವುದಾಗಿ ನಾಗರಿಕ ವಿಮಾನಯಾನ ಸಚಿವಾಲಯ ಶುಕ್ರವಾರ ಘೋಷಿಸಿತ್ತು. ಹೊಸ ತಳಿ ಕಳವಳ ಮೂಡಿಸಿದ್ದು, ವಿಮಾನಯಾನ ಪುನರಾರಂಭದ ಬಗ್ಗೆ ಸರ್ಕಾರ ಮರು ಪರಿಶೀಲನೆ ಮಾಡುವ ಸಾಧ್ಯತೆಯಿದೆ.

8ನೇ ಪುಟ ನೋಡಿ

66ನೇ ರಾಜ್ಯೋತ್ಸವ ಅಂಗವಾಗಿ 66 ಕನ್ನಡ ಪುಸ್ತಕಗಳ ಲೋಕಾರ್ಪಣೆ

'ಸಾಹಿತ್ಯ ಸಮಾಜಕ್ಕೆ ದಿಕ್ಸೂಚಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾಷೆ ಮತ್ತು ಸಾಹಿತ್ಯಕ್ಕೆ ಜಾತಿ, ಧರ್ಮದ ಸೋಂಕು ಇಲ್ಲ. ಇಂದಿನ ಜಾಗತೀಕರಣ, ಉದಾರೀಕರಣದ ಯುಗದಲ್ಲಿ ಅಂತಃಕರಣ ಹೊಂದಿರುವ ಸಾಹಿತ್ಯ ರಚಿಸುವ ಅಗತ್ಯ ಇದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಸಪ್ನ ಬುಕ್ ಹೌಸ್ ಶನಿವಾರ 66ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ 66 ಕನ್ನಡ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜದ ನಡುವೆ ಬಾಂಧವ್ಯ ಬೆಳೆಸಿ ಕನ್ನಡ ನಾಡಿಗೆ ಹೊಸ ದಿಕ್ಸೂಚಿ ತೋರಿಸಬೇಕು. ಈ ವಿಷಯದಲ್ಲಿ ಸರ್ಕಾರ ಪ್ರಮುಖ ಪಾತ್ರ-ವಹಿಸುತ್ತದೆ' ಎಂದು ಹೇಳಿದರು.

'ಕನ್ನಡ ನಾಡು ಕೇವಲ ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದರೆ ಸಾಲದು. ಸಾಹಿತ್ಯಿಕವಾಗಿಯೂ ಶ್ರೀಮಂತವಾಗಬೇಕು. ಸಾಹಿತ್ಯದ ಮೂಲಕ ಸತ್ಯದರ್ಶನ ಪಡೆಯಲು ಸಾಧ್ಯ' ಎಂದು ಪ್ರತಿಪಾದಿಸಿದರು.

'ದೇಶದಲ್ಲಿ 90ರ ದಶಕದಲ್ಲಿ ಉದಾರೀಕರಣ, ಜಾಗತೀಕರಣ, ಖಾಸಗೀಕರಣ ಪ್ರಕ್ರಿಯೆ ಆರಂಭವಾಯಿತು. ಹೆಚ್ಚಿದ ಆರ್ಥಿಕ ವಹಿವಾಟಿನ ಪರಿಣಾಮ ಅಂತಃಕರಣ ಮರೆಯಾಯಿತು. ಮಾರುಕಟ್ಟೆ ಶಕ್ತಿಗಳ ಪ್ರಾಬಲ್ಯ ಇದ್ದಾಗ ಅಂತಃಕರಣ ಇರುವುದಿಲ್ಲ. ಕೇವಲ ಲಾಭ ಮತ್ತು ನಷ್ಟದ ವಿಷಯ ಮಾತ್ರ ಮುಖ್ಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಜನರ ಮನ ಪರಿವರ್ತನೆಯಲ್ಲಿ ಸಾಹಿತ್ಯ ಪರಿಣಾಮ ಬೀರುತ್ತದೆ' ಎಂದು ಅಭಿ-ಪ್ರಾಯಪಟ್ಟರು.

'ಕನ್ನಡ ಸಾಹಿತ್ಯ ಮತ್ತು ಪುಸ್ತಕ ಲೋಕಕ್ಕೆ ಸಪ್ನ ಬುಕ್ ಹೌಸ್ ತನ್ನದೇ ಆದ ಕೊಡುಗೆ ನೀಡಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಮುದ್ರಣ ಮಾಧ್ಯಮವೂ ತನ್ನದೇ ಆದ ಮಹತ್ವ ಉಳಿಸಿಕೊಂಡು ಬೆಳೆಯುತ್ತಿದೆ. ಅದೇ ರೀತಿ ಪುಸ್ತಕಗಳಿಗೂ ಮಹತ್ವ ದೊರೆಯುತ್ತಿದೆ' ಎಂದರು.



ಸಪ್ನ ಬುಕ್ ಹೌಸ್ ಪ್ರಕಟಿಸಿರುವ 66 ಪುಸ್ತಕಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು. ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಪತ್ರಕರ್ತ ರವಿ ಹೆಗಡೆ, ವಿಮರ್ಶಕ ಡಾ.ಸಿ.ಎನ್. ರಾಮಚಂದ್ರನ್, ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಸಾಹಿತಿ ಡಾ.ಕಮಲಾ ಹಂಪನಾ ಇದ್ದಾರೆ – ಪ್ರಜಾವಾಣಿ ಚಿತ್ರ

'₹400 ಕೋಟಿ ಪಾವತಿ ಬಾಕಿ'

'ಗ್ರಂಥಾಲಯ ಇಲಾಖೆಗೆ ಬಿಬಿಎಂಪಿ ₹400ಕೋಟಿಗೂ ಹೆಚ್ಚು ಮೊತ್ತ ಪಾವತಿಸಬೇಕಾಗಿದೆ. 10 ವರ್ಷಗಳಿಂದ ಈ ಬಾಕಿ ಮೊತ್ತವನ್ನು ಉಳಿಸಿಕೊಂಡಿದೆ' ಎಂದು ವಿಮರ್ಶಕ ಡಾ.ಸಿ.ಎನ್. ರಾಮಚಂದ್ರನ್ ತಿಳಿಸಿದರು.

'ಈ ವಿಷಯದ ಬಗ್ಗೆ ಪ್ರಕಾಶಕರು ನ್ಯಾಯಾಲಯದ ಮೊರೆ ಸಹ ಹೋಗಿದ್ದರು. ಈ ಬಾಕಿ ಹಣ ಪಾವತಿಯಾದರೆ ಪ್ರಕಾಶಕರು ಮತ್ತು ಲೇಖಕರಿಗೆ ಅನುಕೂಲವಾಗುತ್ತದೆ' ಎಂದರು. 'ಇಂದು ಓದುಗ ವೃಂದ ಬದಲಾಗಿದೆ. ಅವರ ಅಪೇಕ್ಷೆಗಳು ಮತ್ತು ನಿರೀಕ್ಷೆಗಳು ಮಾರ್ಪಾಡಾಗಿವೆ. ಕಥಾ ಪ್ರಕಾರವು ಸಾಹಿತ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಕಾವ್ಯ, ಸಣ್ಣ ಕಥೆಗಳು ಇಂದು ವಿಜೃಂಭಿಸುತ್ತಿವೆ' ಎಂದರು.

ಡಾ. ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

'ಕಸ ನಿರ್ವಹಣೆ: ಇಚ್ಛಾಶಕ್ತಿ ಕೊರತೆ'

ಬೆಂಗಳೂರು: 'ಘನತ್ಯಾಜ್ಯ ನಿರ್ವಹಣೆ ವಿಚಾರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಇಚ್ಛಾಶಕ್ತಿಯ ಕೊರತೆ ಇದೆ' ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ತಿಳಿಸಿದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ, ಕೇಂದ್ರ ಪರಿಸರ ಸಚಿವಾಲಯ, ಕೇಂದ್ರ ವಿದ್ಯುನ್ಮಾನ ಸಚಿವಾಲಯ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ನಗರಾಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಘನ ತ್ಯಾಜ್ಯ ನಿರ್ವಹಣೆ' ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ರಾಜ್ಯದಲ್ಲಿ ನಿತ್ಯ ಸುಮಾರು 11 ಸಾವಿರ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಅರ್ಧದಷ್ಟು ಪಾಲಿಕೆ ವ್ಯಾಪ್ತಿಯಲ್ಲೇ ಸಂಗ್ರಹವಾಗುತ್ತಿದೆ. ಇದನ್ನು ವೈಜ್ಞಾನಿಕ ರೀತಿಯಲ್ಲಿ ವಿಂಗಡಿಸಿ ಬಳಕೆ ಮಾಡುವಲ್ಲಿ ಪಾಲಿಕೆ ಸೋತಿದೆ. ಮುಂದಿನ ದಿನಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗೂ ಸಮರ್ಪಕ ಬಳಕೆಯತ್ತ ಪಾಲಿಕೆ ಗಮನಹರಿಸಲಿ' ಎಂದು ತಿಳಿಸಿದರು.

ಹವಾಮಾನ ತಜ್ಞೆ ಸಲೋನಿ ಗೋಯಲ್, ಕೆಎಸ್‌ಪಿಸಿಬಿ ಸದಸ್ಯ ಕಾರ್ಯದರ್ಶಿ ಶ್ರೀನಿವಾಸುಲು ಇದ್ದರು.

'ಕಡತ ವಿಲೇವಾರಿ ತ್ವರಿತಗೊಳಿಸಿ'

ಬೆಂಗಳೂರು: ಬಾಕಿ ಇರುವ ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮುಖ್ಯಮಂತ್ರಿ ಉಸ್ತುವಾರಿಯಲ್ಲಿರುವ ಬೆಂಗಳೂರು ಅಭಿವೃದ್ಧಿ ಖಾತೆಗೆ ಸಂಬಂಧಿಸಿದ ಸಚಿವಾಲಯದಲ್ಲೇ ಬೃಹತ್ ಸಂಖ್ಯೆಯ ಕಡತಗಳು ದೀರ್ಘ ಕಾಲದಿಂದ ವಿಲೇವಾರಿಗೆ ಬಾಕಿ ಇರುವ ಕುರಿತು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಸುದ್ದಿಗಾರರ ಜತೆ ಮಾತನಾಡುವಾಗ ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ಮುಖ್ಯಮಂತ್ರಿಯಾದ ತಕ್ಷಣವೇ ಕಡತ ವಿಲೇವಾರಿ ತ್ವರಿತಕ್ಕೆ ಸೂಚನೆ ನೀಡಿದ್ದೆ' ಎಂದರು.

ಜಾನಪದ ವಿಶ್ವವಿದ್ಯಾಲಯ ಸೊರಗುತ್ತಿದೆ: ಗೊ.ರು.ಚನ್ನಬಸಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಗತ್ತಿನಲ್ಲೇ ಮೊದಲು ಆರಂಭವಾಗಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ರಾಜ್ಯದ ಮುಕುಟ ಮಣಿಯಂತೆ ಪ್ರಜ್ವಲಿಸಬೇಕಿತ್ತು. ಆದರೆ ಅದೀಗ ಸಂಪೂರ್ಣವಾಗಿ ಸೊರಗುತ್ತಿದೆ' ಎಂದು ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ತಿಳಿಸಿದರು.

ಕರ್ನಾಟಕ ಜಾನಪದ ಪರಿಷತ್ತು ಹಮ್ಮಿಕೊಂಡಿದ್ದ 'ನಾಡೋಜ ಎಚ್.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಉತ್ತರ ಪ್ರದೇಶದ ಜನಪದ ಸೂಫಿ ಗಾಯಕ ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ ಈ ಸಾಲಿನ ಪ್ರಶಸ್ತಿ ಪಡೆದರು. ಕಾರ್ಯಕ್ರಮದಲ್ಲಿ ಅವರಿಗೆ ₹1 ಲಕ್ಷ ನಗದು, ಸ್ಮರಣಿಕೆ ಹಾಗೂ ಮೈಸೂರು ಪೇಟ ತೊಡಿಸಿ ಗೌರವಿಸಲಾಯಿತು.

'ಯಾವುದೇ ರಾಷ್ಟ್ರವು ಜನರ ದೇಶ ಎಂದು ಕರೆಸಿಕೊಳ್ಳಬೇಕಾದರೆ ಅಲ್ಲಿ ನೆಲೆಸಿರುವ ಜನಪದರ ಬದುಕು ಶ್ರೀಮಂತವಾಗಿರಬೇಕು. ಎಚ್.ಎಲ್.ನಾಗೇಗೌಡ ಅವರು ಜನಪದರ ಜೊತೆ ಉತ್ತಮ ಒಡನಾಟ ಹೊಂದಿದ್ದರು. ಅವರ ಬದುಕನ್ನು ಬಹಳ ಹತ್ತಿರದಿಂದ ಕಂಡಿದ್ದರು. ಹೀಗಾಗಿ ಜಾನಪದ ಪರಿಷತ್ತು ಕಟ್ಟಿದರು' ಎಂದು ಹೇಳಿದರು.

'ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಜನಪದ ಕಲೆ ಹಾಗೂ ಕಲಾವಿದರನ್ನು ಪೋಷಿಸುತ್ತಿದೆ. ಮಠದಲ್ಲಿ ಜಾನಪದ ವಾತಾವರಣ ನಿರ್ಮಾಣ ಮಾಡಲಾಗಿದೆ. ಅದು ಕೇವಲ ಧಾರ್ಮಿಕ ಕ್ಷೇತ್ರವಷ್ಟೇಯಲ್ಲ. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಮಾಜಶಿಕ್ಷಣ ಕ್ಷೇತ್ರವೂ ಆಗಿದೆ' ಎಂದರು.



ನಿರ್ಮಲಾನಂದನಾಥ ಸ್ವಾಮೀಜಿಯವರು ಜನಾಬ್ ಮಹಮ್ಮದ್ ಸಲೀಂ ಹಸನ್ ಚಿಸ್ತಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಗೊ.ರು. ಚನ್ನಬಸಪ್ಪ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಟಿ.ತಿಮ್ಮೇಗೌಡ, ರಾಮನಗರ ಜಿಲ್ಲೆಯ ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ ಮತ್ತು ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರಿನ ಜನ ತೋರಿದ ಪ್ರೀತಿಯನ್ನು ಎಂದಿಗೂ ಮರೆಯುವುದಿಲ್ಲ. ಕನ್ನಡ ಭಾಷೆ ಕೇಳಲು ಇಂಪಾಗಿದೆ. ಜಾನಪದ ಪರಿಷತ್ತು ಇನ್ನೂ ಎತ್ತರಕ್ಕೆ ಬೆಳೆಯಲಿ

ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ, ಪ್ರಶಸ್ತಿ ಪುರಸ್ಕೃತರು

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದ ನಾಥ ಸ್ವಾಮೀಜಿ, 'ವಿಜ್ಞಾನದ ಆವಿಷ್ಕಾರಗಳು, ತಂತ್ರಜ್ಞಾನದ ಫಲಗಳು ಮನುಷ್ಯರ ನಡುವಣ ಸಾಮರಸ್ಯ, ಸಂವಹನವನ್ನು ಕಸಿದುಕೊಳ್ಳುವ ಕಾಲ ದೂರವಿಲ್ಲ. ಮೊಬೈಲ್ ಹಾಗೂ ಗ್ಯಾಜೆಟ್‌ಗಳ ಅತಿಯಾದ ಬಳಕೆಯಿಂದ ನಮ್ಮನ್ನು ನಾವು ಮರೆಯುತ್ತಿದ್ದೇವೆ' ಎಂದರು.

'ಜನಪದರ ರೀತಿಯ ಬದುಕನ್ನು ಕಟ್ಟಿಕೊಳ್ಳುವವರು ಆಗಸದೆತ್ತರಕ್ಕೆ ಬೆಳೆದರೂ, ನಾಗರಿಕತೆಯ ತೊಟ್ಟಿಲು ಕಟ್ಟಿಕೊಂಡರೂ ಅವರ ಪಾದಗಳು ನೆಲದ ಮೇಲೆಯೇ ಇರುತ್ತದೆ. ಆಧುನಿಕ ಸಾಹಿತ್ಯದ ಜೊತೆಗೆ ಆಗಾಗ ಜನಪದ ಸಾಹಿತ್ಯವನ್ನೂ ಗುನುಗುತ್ತಿದ್ದರೆ ಯಾರೂ ದಾರಿ ತಪ್ಪುವುದಿಲ್ಲ. ಜನಪದ ಸಾಹಿತ್ಯ ಉಳಿಯಬೇಕು' ಎಂದು ತಿಳಿಸಿದರು.

ಶಿಕ್ಷಕರ ಬೇಡಿಕೆ: ಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರ ಮೂರು ಪ್ರಮುಖ ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳುವಂತೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಇಲಾಖೆಯ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

2005–06ನೇ ಸಾಲಿನ ಅಧಿಸೂಚನೆ ಅನ್ವಯ ನೇಮಕಾತಿಯಾದ ಶಿಕ್ಷಕರಿಗೆ ಹಳೆಯ ಪಿಂಚಣಿ ಜಾರಿಗೊಳಿಸಬೇಕು. ಶಿಕ್ಷಕರು ಬಯಸುವ ಜಿಲ್ಲೆಗೆ ಒಂದು ಬಾರಿ ವರ್ಗಾವಣೆಯ ಅವಕಾಶ ಕಲ್ಪಿಸಬೇಕು. ಮುಖ್ಯೋಪಾಧ್ಯಾಯರಿಗೆ 15, 20 ಮತ್ತು 25 ವರ್ಷಗಳಿಗೆ ವೇತನ ಬಡ್ತಿ ನೀಡುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸಚಿವರಿಗೆ ಮನವಿ ಸಲ್ಲಿಸಿತ್ತು.

ಸಂಘದ ಮನವಿಗೆ ಸಚಿವರು ಸ್ಪಂದಿಸಿರುವುದು ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

'ಅನುವಾದವು ಜಾರಿಕೆಯ ಹಾದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುವಾದ ತುಂಬಾ ಕಷ್ಟದ ಕೆಲಸ. ಅದು ಜಾರಿಕೆಯ ಹಾದಿ. ಶಬ್ದ ಹಾಗೂ ಅರಿವಿನ ಪ್ರಪಂಚಗಳೆರಡಕ್ಕೂ ಸಂಬಂಧ ಬೆಸೆಯುವುದು ಕಠಿಣವಾದ ಕಾರ್ಯ' ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಅಭಿಪ್ರಾಯಪಟ್ಟರು.


ಲೇಖಕಿ ವೀಣಾ ಬನ್ನಂಜೆ ಹಾಗೂ ಅನುವಾದಕ ಸತ್ಯೇಶ್ ಬೆಳ್ಳೂರ್ ಅವರ 'ಸೊನ್ನೆಯಿಂದ ಸಾವಿರ ತನಕ', 'ಮಿಂಚು ಹುಳ', 'ಅಥರ್ವ ವೇದ ಇಂಗ್ಲಿಷ್', 'ಅಥರ್ವ ವೇದ ಕನ್ನಡ' ಹಾಗೂ 'ತಂತ್ರಯೋನಿ' ಕೃತಿಗಳನ್ನು ಬಿಡುಗಡೆಗೊಳಿಸಿ ಶನಿವಾರ ಅವರು ಮಾತನಾಡಿದರು.

'ಶಬ್ದವೊಂದಕ್ಕೆ ಪರ್ಯಾಯ ಶಬ್ದ ಹುಡುಕುವುದು ಸುಲಭ. ಅದರ ಮೂಲ ಅರ್ಥ ಕೆಡದಂತೆ ನೋಡಿಕೊಳ್ಳುವುದು ಕಷ್ಟ. ಕವಿ ಮನಸ್ಸಿನಲ್ಲಿದ್ದ ಭಾವನೆಯನ್ನು ಹಾಗೆ ಹಿಡಿದಿಡುವುದು ಇನ್ನೂ ಕಷ್ಟವಾದ ಕೆಲಸ. ಭಾವದ ಪದಗಳನ್ನು ಮತ್ತೊಂದು ಭಾಷೆಯ ಭಾವಕ್ಕೆ ಕಸಿ ಮಾಡುವುದು ಸುಲಭವಲ್ಲ' ಎಂದರು.

'ಮೂಲ ಲೇಖಕರ ಮೊದಲನೇ ಬರಹ ಕೂಡ ಅನುವಾದವೇ ಆಗಿರುತ್ತದೆ. ತನ್ನ ಮನಸ್ಸಿನಲ್ಲಿ ಸ್ಫುರಿಸಿದ ಭಾವವನ್ನು ಅವರು ಅಕ್ಷರ ರೂಪಕ್ಕೆ ಇಳಿಸಬೇಕಾಗುತ್ತದೆ. ಆ ಭಾವದ ಒತ್ತಡ ತೀವ್ರವಾಗಿರುತ್ತದೆ. ಸರಿಯಾದ ಪದ ಸಿಗದೆ ಲೇಖಕ ಒದ್ದಾಡಿ ಹೋಗುತ್ತಾನೆ. ಪದಗಳು ಹೊಳೆದರೂ ಅವು ಆ ಭಾವವನ್ನೇ ಅರ್ಥೈಸುವಂತೆ ಇರುವುದಿಲ್ಲ' ಎಂದು ಹೇಳಿದರು.

'ಸತ್ಯಕಾಮ ಅವರ ಕೃತಿಯನ್ನು ಅನುವಾದಿಸುವುದು ಸುಲಭದ ಮಾತಲ್ಲ. ಅವರು ಬಳಸುವ ಭಾಷೆ ಚೊಕ್ಕ ಬಂಗಾರ. ಸಣ್ಣ ಪದದ ಮೂಲಕ ಮಹತ್ವದಾದುದ್ದನ್ನು ಹೇಳುವ ಶಕ್ತಿ ಅವರಲ್ಲಿತ್ತು. ಸತ್ಯೇಶ್ ಅವರು ಬಹಳ ಕಷ್ಟಪಟ್ಟು ಅಚ್ಚುಕಟ್ಟಾಗಿ ಸತ್ಯಕಾಮ ಅವರ ಮೂಲ ಕೃತಿಯನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದಾರೆ. ಡಿ.ವಿ. ಗುಂಡಪ್ಪ ಅವರ ನಂತರ ಛಂದಸ್ಸಿನ ಬಿಗಿ ಹಿಡಿದುಕೊಂಡು ಬರೆದವರು ಸತ್ಯೇಶ್ ಮಾತ್ರ' ಎಂದರು.

'ಅಥರ್ವ ವೇದ ಕನ್ನಡ' ಕೃತಿಯ ಬಗ್ಗೆ ಮಾತನಾಡಿದ ಗೋಖಲೆ ಸಾರ್ವಜನಿಕ ಸಂಸ್ಥೆಯ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 'ಇದು ಮಕ್ಕಳ ಕಥೆಗಳ ಗುಚ್ಛ. ಅಧ್ಯಾತ್ಮ ಕೇಂದ್ರಿತ, ಅಧ್ಯಾತ್ಮ ಪ್ರಧಾನವಾದ ಕೃತಿ. ಇದು ಬಾಲ ಭಾರತದ ಸುದೀರ್ಘವಲ್ಲದ 18 ಕಥೆಗಳನ್ನು ಒಳಗೊಂಡಿದೆ' ಎಂದು ಹೇಳಿದರು.



ಗುರುರಾಜ ಕರಜಗಿ ಅವರು (ಎಡದಿಂದ ಎರಡನೆಯವರು) ಕೃತಿಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಅನುವಾದಕ ಸತ್ಯೇಶ್ ಬೆಳ್ಳೂರ್, ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಮತ್ತು ಲೇಖಕಿ ವೀಣಾ ಬನ್ನಂಜೆ ಇದ್ದರು –ಪ್ರಜಾವಾಣಿ ಚಿತ್ರ

ಫೋನ್‌ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು

23 ಸಮಸ್ಯೆ ಪರಿಹರಿಸಿದ ಬಿಎಂಟಿಸಿ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಫೋನ್–ಇನ್

ಬೆಂಗಳೂರು: ಬಸ್ ಸೌಕರ್ಯದ ಕೊರತೆ ಬಗ್ಗೆ 'ಪ್ರಜಾವಾಣಿ' ಫೋನ್‌ಇನ್ ಕಾರ್ಯಕ್ರಮದಲ್ಲಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು ಕುಮಾರ್ ಅವರ ಬಳಿ ಸಾರ್ವಜನಿಕರು ಹೇಳಿಕೊಂಡ ಅಹವಾಲುಗಳಿಗೆ ಎರಡೇ ದಿನಗಳಲ್ಲಿ ಬಿಎಂಟಿಸಿ ಸ್ಪಂದಿಸಿದ್ದು, 23 ಸಮಸ್ಯೆಗಳನ್ನು ಪರಿಹರಿಸಿದೆ.

ಕಾಟನ್‌ಪೇಟೆ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಬಿಎಂಟಿಸಿ ಬಸ್ ವ್ಯವಸ್ಥೆ ಇಲ್ಲದೆ ತೊಂದರೆ ಉಂಟಾಗಿರುವ ಬಗ್ಗೆ ಸ್ಥಳೀಯರು ತಿಳಿಸಿದ್ದರು. '50 ಸುತ್ತುವಳಿಯಲ್ಲಿ ಮಿಡಿ ವಾಹನಗಳ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ನ.29ರಿಂದ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ' ಎಂದು ಬಿಎಂಟಿಸಿ ತಿಳಿಸಿದೆ.

'ಮೆಟ್ರೊ ರೈಲು ನಿಲ್ದಾಣದಿಂದ ಫೀಡರ್ ಬಸ್‌ಗಳ ಸೇವೆಯನ್ನು ಹೆಚ್ಚುವರಿಯಾಗಿ 23 ಸುತ್ತುವಳಿಯಲ್ಲಿ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗಿದೆ. ಕೆ.ಆರ್.ಮಾರುಕಟ್ಟೆ–ಕಲ್ಕೆರೆ ಮಾರ್ಗದಲ್ಲಿ ರಾತ್ರಿ ತಂಗುವ ಪಾಳಿಯಲ್ಲಿ ಸೋಮವಾರದಿಂದ ಬಸ್ ಕಾರ್ಯಾಚರಣೆಯಾಗಲಿದೆ. ಕೆಂಗೇರಿ–ಎಲೆಕ್ಟ್ರಾನಿಕ್ ಸಿಟಿ ಮಾರ್ಗದಲ್ಲಿ ಪ್ರತಿ 5ರಿಂದ 10 ನಿಮಿಷಗಳ ಅಂತರದಲ್ಲಿ ಸಾರಿಗೆ ಸೌಲಭ್ಯವಿದ್ದು, ಪ್ರಯಾಣಿಕರ ದಟ್ಟಣೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ವಿವರಿಸಿದೆ.

'ಮೂಡಲಪಾಳ್ಯದಿಂದ ವಿಜಯ ನಗರಕ್ಕೆ ಗೋವಿಂದರಾಜನಗರ, ಮನುವನ ಮಾರ್ಗದಲ್ಲಿ ಸೋಮವಾರದಿಂದ ಬಸ್ ಕಾರ್ಯಾಚರಣೆಯಾಗಲಿದೆ. ಕೆಂಪೇಗೌಡ ಬಸ್ ನಿಲ್ದಾಣದಿಂದ ಯಶವಂತಪುರ ಮಾರ್ಗದಲ್ಲಿ ಅನ್ನಪೂರ್ಣೇಶ್ವರಿನಗರಕ್ಕೆ ಕಾರ್ಯಾಚರಣೆಯಲ್ಲಿದ್ದ ಬಸ್ ಅನ್ನು ರಾತ್ರಿ ತಂಗುವ ಪಾಳಿಗೆ ಬದಲಿಸಲಾಗಿದೆ. ಜಾಲಹಳ್ಳಿ ವಿಲೇಜ್‌ನಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹೊಸ ಕಾರ್ಯಾಚರಣೆಯೂ ಸೋಮವಾರದಿಂದ ಆರಂಭವಾಗಲಿದೆ' ಎಂದು ವಿವರಿಸಿದೆ.

'ಕಟ್ಟಡ ಕಾರ್ಮಿಕರಿಗೆ ವಿತರಣೆ ಮಾಡಿರುವ ಸಹಾಯ ಹಸ್ತ ಪಾಸುಗಳನ್ನು ಮಾನ್ಯ ಮಾಡಲು ಚಾಲನಾ ಸಿಬ್ಬಂದಿಗೆ ನಿರ್ದೇಶನ ನೀಡಲಾಗಿದೆ. ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ಮೀಸಲು ಆಸನ ಬಿಡಿಸಿಕೊಡಲೂ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗಿದೆ' ಎಂದು ತಿಳಿಸಿದೆ.

'ಫೋನ್‌ಇನ್ ಕಾರ್ಯಕ್ರಮದಲ್ಲಿ ಬಂದಿರುವ ಇನ್ನಷ್ಟು ದೂರುಗಳ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಸಮಸ್ಯೆಗಳೂ ಪರಿಹಾರವಾಗಲಿವೆ' ಎಂದು ಅಧಿಕಾರಿಗಳು ತಿಳಿಸಿದರು.

ನಾಳೆ ಪ್ರತಿಭಟನಾ ಸಭೆ

ಬೆಂಗಳೂರು: ಶ್ರೀಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣೆ ವೇದಿಕೆಯ ವತಿಯಿಂದ ಇದೇ 29ರಂದು ಬೆಳಿಗ್ಗೆ 9.30ಕ್ಕೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನಾ ಸಭೆ ಏರ್ಪಡಿಸಲಾಗಿದೆ.

ನಗರದಲ್ಲಿ ಇಂದು

ವಾಕಥಾನ್: ಅತಿಥಿಗಳು–ಇಂದ್ರಜಿತ್ ಲಂಕೇಶ್, ಎಚ್.ಎಸ್.ಕರುಣೇಶ್ ಕುಮಾರ್, ಆಯೋಜನೆ ಮತ್ತು ಸ್ಥಳ–ಡಯಾಬ್ಲಿಸ್ ಮೆಡಿಕಲ್ ಸೆಂಟರ್, ಕೋರಮಂಗಲ 6ನೇ ಬ್ಲಾಕ್, ಬೆಳಿಗ್ಗೆ 7.30

ಟಾಪರ್ಸ್ ಟಾಕ್ ಷೋ: ಅತಿಥಿ–ಧೀರಜ್ ಮಿಶ್ರಾ, ಆಯೋಜನೆ–ಆಕಾಶ್ ಬೈಜೂಸ್, ಸ್ಥಳ–ವಿಜಯಾ ಪಿಯು ಕಾಲೇಜು ಸಭಾಂಗಣ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10.30

ಶೈಲೇಶ್ ಕುಮಾರ್ ಅವರ 'ದಡ ಸೇರಿದ ಕನಸು' ಪುಸ್ತಕ ಬಿಡುಗಡೆ: ಅಧ್ಯಕ್ಷತೆ–ಜಿ.ಅಶ್ವತ್ಥ ನಾರಾಯಣ, ಅತಿಥಿ–ವಿ.ಶಾಂತರಾಮ್ ಶೆಟ್ಟಿ, ಸ್ಥಳ–ಸಿ.ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಅವರ ಸಾಕ್ಷ್ಯಚಿತ್ರಗಳ ಪ್ರದರ್ಶನ: ಆಯೋಜನೆ–ಭಾರತೀಯ ವಿದ್ಯಾಭವನ, ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ–ಕೆಆರ್‌ಜಿ ಸಭಾಂಗಣ, ಬೆಳಿಗ್ಗೆ 10.30

ಪ್ರವೀಣ ಮಾವಿನಕಾಡು ಹಾಗೂ ಸುಧಾಕರ ಹೊಸಳ್ಳಿ ಅವರ 'ಅವಿತಿಟ್ಟ ಅಂಬೇಡ್ಕರ್' ಪುಸ್ತಕ ಬಿಡುಗಡೆ: ರಂಗಭೂಮಿ ಕಲಾವಿದ ಪ್ರಕಾಶ್ ಬೆಳವಾಡಿ, ಅತಿಥಿಗಳು–ಶ್ರೀನಿವಾಸ ಬಾಬು, ಅಧ್ಯಕ್ಷತೆ–ರಘುನಂದನ ಭಟ್ ನರೂರ, ಆಯೋಜನೆ–ಅಖಿಲ ಭಾರತೀಯ ಸಾಹಿತ್ಯ ಪರಿಷತ್ತು, ಸ್ಥಳ–ವಾಸವಿ ಸಮಾವೇಶ ಕೇಂದ್ರ, ವಾಣಿ ವಿಲಾಸ ರಸ್ತೆ, ವಿ.ವಿ.ಪುರ, ಬೆಳಿಗ್ಗೆ 10.30

ಕನ್ನಡ ರಾಜ್ಯೋತ್ಸವ ಕಪ್: ಉದ್ಘಾಟನೆ–ವಿನಯ್ ಗುರೂಜಿ, ಕ್ರೀಡಾಕೂಟಕ್ಕೆ ಚಾಲನೆ–ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಶಾಲಿನಿ ರಜನೀಶ್, ಅತಿಥಿಗಳು–ಪ್ರತಾಪ್ ಲಿಂಗಯ್ಯ, ಅಚ್ಯುತ್ ಗೌಡ, ಮಂಜುನಾಥ್, ಕೋಮಲ, ಶಿಹಾನ್ ಅಲ್ತಾಫ್ ಪಾಷ, ಶಿಹಾನ್ ಶಿವಮೊಗ್ಗ ವಿನೋದ್, ಅಧ್ಯಕ್ಷತೆ–ಸನ್ ಸೈ ರಾಕೇಶ್, ಆಯೋಜನೆ–ರಾಜ್ಯ ಕರಾಟೆ ಅಸೋಸಿಯೇಷನ್, ಸ್ಥಳ–ಆರ್.ಗುಂಡೂರಾವ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಜೈಭೀಮ್ ನಗರ, ಮಲ್ಲೇಶ್ವರ, ಬೆಳಿಗ್ಗೆ 10.30

ಮಹರ್ಷಿ ವಾಲ್ಮೀಕಿ ನಾಟಕೋತ್ಸವ: ನಾಟಕಗಳು–ಸಂಜೆ 5ಕ್ಕೆ ಸಂಗೊಳ್ಳಿ ರಾಯಣ್ಣ, 6ಕ್ಕೆ ರಾಧಾ ಮಾಧವ ವಿನೋದಹಾಸ, 7ಕ್ಕೆ ಸುಬ್ಬಣ್ಣನ ಸಂಸಾರ, ಆಯೋಜನೆ–ದರ್ಪಣ ಕಲಾವಿದರು, ಸ್ಥಳ–ನಯನ ಸಭಾಂಗಣ, ಕನ್ನಡ ಭವನ

ಸಂಗೀತ ನೃತ್ಯ ಸುಧಾ–ಸಂಗೀತ ಮತ್ತು ನೃತ್ಯ ಕಾರ್ಯಕ್ರಮ: ಆಯೋಜನೆ–ಶ್ರೀವಿದ್ಯಾ ಪ್ರತಿಷ್ಠಾನ, ಸ್ಥಳ–ಆರ್.ವಿ.ಶಿಕ್ಷಕರ ಕಾಲೇಜು ಸಭಾಂಗಣ, ಜಯನಗರ 2ನೇ ಬ್ಲಾಕ್, ಸಂಜೆ 6

ಶಂಕರನಾಗ್ ನಾಟಕೋತ್ಸವ–'ರಂಗ ಧಾರಿಣಿ' ಮಹಿಳಾ ರಂಗೋತ್ಸವ (ಸಂಜೆ 6): ಉದ್ಘಾಟನೆ–ಆರ್.ರಾಜಲಕ್ಷ್ಮಿ, ಅತಿಥಿಗಳು–ಎಸ್.ರಂಗಪ್ಪ, ವರಲಕ್ಷ್ಮಿ, ಲಕ್ಷ್ಮೀ ಚಂದ್ರಶೇಖರ್, ದು.ಸರಸ್ವತಿ, ಅಭಿನಯ, ಸ್ವಾತಿ, ಸಂಜೆ 7.10ಕ್ಕೆ ಗುಲಾಬಿ ಗ್ಯಾಂಗು ಭಾಗ–1 ನಾಟಕ ಪ್ರದರ್ಶನ, ಆಯೋಜನೆ–ರಂಗಪಯಣ, ಸ್ಥಳ–ರವೀಂದ್ರ ಕಲಾಕ್ಷೇತ್ರ

'ಎಕ್ಸ್‌ಪ್ಲೋರಿಯ' ಚಿತ್ರಕಲಾ ಪ್ರದರ್ಶನ ಮತ್ತು ಮಾರಾಟ ಉದ್ಘಾಟನೆ: ಅತಿಥಿಗಳು–ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ನಟಿ ಪ್ರೇಮಾ, ಅಜಿತ್ ಪಾಲ್, ಆಯೋಜನೆ–ಮನೋಮಾಯ ಆರ್ಟ್ ಗ್ಯಾಲರಿ, ಸ್ಥಳ–ಚಿತ್ರಕಲಾ ಪರಿಷತ್, ಸಂಜೆ 6 (ಡಿ.5ರವರೆಗೆ ಪ್ರದರ್ಶನ ಇರಲಿದೆ)

ಜಯಂತ ಕಾಯ್ಕಿಣಿ ಅವರ ರಚನೆಯ 'ಸೇವಂತಿ ಪ್ರಸಂಗ' ನಾಟಕ ಪ್ರದರ್ಶನ: ನಿರ್ದೇಶನ–ಕೆ.ಎಸ್.ವಿಜಯ್ ಕಶ್ಯಪ್, ಅತಿಥಿಗಳು–ರಂಗಭೂಮಿ ಕಲಾವಿದೆ ಲಕ್ಷ್ಮೀ.ಆರ್.ನಾಡಗೌಡ, ಆಯೋಜನೆ–ದಿ ಕಲಾಪ್ರೇಮಿ ಫೌಂಡೇಷನ್ ಮತ್ತು ರಂಗರಸ ಧಾರೆ, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

'ಲಕ್ಷಾಪತಿ ರಾಜನ ಕಥೆ' ನಾಟಕ ಪ್ರದರ್ಶನ: ಆಯೋಜನೆ–ಸ್ಪಂದನ, ಸ್ಥಳ–ರಂಗಶಂಕರ, ಸಂಜೆ 7

'ಮಾಯಾಬೇಟೆ' ನಾಟಕ ಪ್ರದರ್ಶನ: ರಚನೆ–ಕೆ.ವೈ.ನಾರಾಯಣಸ್ವಾಮಿ, ನಿರ್ದೇಶನ–ನಂಜುಂಡೇಗೌಡ, ಪ್ರಸ್ತುತಿ–ದೃಶ್ಯಕಾವ್ಯ, ಆಯೋಜನೆ–ಸಮಷ್ಟಿ, ಸ್ಥಳ–ಎಡಿಎ ರಂಗಮಂದಿರ, ಸಂಜೆ 7



ಮಾಯಾಬೇಟೆ ನಾಟಕದ ದೃಶ್ಯ

ನೇತ್ರದಾನ, ರಕ್ತದಾನ ಪ್ರೋತ್ಸಾಹಕ್ಕೆ ಸುದೀರ್ಘ ಓಟ



ದಾಕ್ಷಾಯಿಣಿ ಪಾಟೀಲ

ಧಾರವಾಡ: 'ನೇತ್ರ ಹಾಗೂ ರಕ್ತದಾನ ಕುರಿತು ಜಾಗೃತಿ ಮೂಡಿಸಲು ತಾಲ್ಲೂಕಿನ ಮನಗುಂಡಿಯಿಂದ ಬೆಂಗಳೂರಿನ ಪುನೀತ್ ರಾಜಕುಮಾರ್ ಸಮಾಧಿ ಸ್ಥಳದವರೆಗೆ ನ.29ರಂದು ಓಟ ಆರಂಭಿಸಲಿದ್ದೇನೆ' ಎಂದು ಕ್ರೀಡಾಪಟು ದಾಕ್ಷಾಯಿಣಿ ಪಾಟೀಲ ಶನಿವಾರ ತಿಳಿಸಿದರು.

'ನ.29ರಂದು ಪುನೀತ್ ಅವರ ತಿಂಗಳ ತಿಥಿ ಕಾರ್ಯ ಇದೆ. ಅಂದೇ 500 ಕಿ.ಮೀ. ದೂರದ ಈ ಓಟ ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದೇನೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಪುನೀತ್ ಅವರ ಅಭಿಮಾನಿಯಾದ ನಾನು ಅವರ ಸಮಾಜಸೇವೆಗಳಿಂದ ಪ್ರೇರೇಪಿತಳಾಗಿ ನೇತ್ರದಾನ ಹಾಗೂ ರಕ್ತದಾನವನ್ನು ಪ್ರೋತ್ಸಾಹಿಸಲು ಹಾಗೂ ಕ್ರೀಡೆಯ ಮೂಲಕವೇ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಉದ್ದೇಶಿಸಿರುವೆ. 11 ತಿಂಗಳ ಮಗಳು ಸೇರಿ ನನಗೆ ಮೂವರು ಪುತ್ರಿಯರು ಇದ್ದಾರೆ. ನನ್ನ ಓಟದ ಅಭಿಯಾನಕ್ಕೆ ಕುಟುಂಬ ಹಾಗೂ ಗ್ರಾಮಸ್ಥರು ಬೆಂಬಲಿಸಿ, ಪ್ರೋತ್ಸಾಹಿಸುತ್ತಿದ್ದಾರೆ. ದಿನಕ್ಕೆ 40 ಕಿ.ಮೀ. ಓಡಲಿದ್ದೇನೆ' ಎಂದು ದಾಕ್ಷಾಯಿಣಿ ಹೇಳಿದರು.

ಮನಗುಂಡಿ ಗ್ರಾಮ ಪಂಚಾಯ್ತಿ ಸದಸ್ಯ ಪುಂಡಲೀಕ ಜಕ್ಕನವರ, ಶಿವಕುಮಾರ ಜಾಕೋಜಿ, ಸಲ್ಮಾನ್ ಮಾರಡಗಿ, ಉಮೇಶ ಪಾಟೀಲ ಇದ್ದರು.

ತ್ಯಾಜ್ಯ ಹರಿಸುವಿಕೆ, ಕೆರೆಯಂಗಳ ಒತ್ತುವರಿ ಖಂಡಿಸಿ ಪ್ರತಿಭಟನೆ

ಹೆನ್ನಾಗರ ಕೆರೆ ರಕ್ಷಿಸಿ: ಪರಿಸರ ಪ್ರೇಮಿಗಳು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆನ್ನಾಗರ ಕೆರೆಗೆ ಕಾರ್ಖಾನೆಗಳಿಂದ ತ್ಯಾಜ್ಯ ಹರಿಸುವಿಕೆ ಹಾಗೂ ಕೆರೆಯಂಗಳ ಒತ್ತುವರಿಯನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಪರಿಸರ ಪ್ರೇಮಿಗಳು, ಈ ಕೆರೆಯನ್ನು ಸಂರಕ್ಷಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿವಿಧ ಸಂಘಟನೆಗಳ ಪ್ರತಿನಿಧಿಗಳು, ರಾಜಕೀಯ ಮುಖಂಡರು, ಸ್ಥಳೀಯರು ಸೇರಿದಂತೆ ನೂರಾರು ಪರಿಸರ ಪ್ರೇಮಿಗಳು ಕೆರೆಯ ಆವರದಲ್ಲಿ ರಾಜಾಪುರ ಸಂಸ್ಥಾನ ಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟಿಸಿದರು.

'ಹೆನ್ನಾಗರ ಕೆರೆ ಒಂದು ಕಾಲದಲ್ಲಿ ಈ ಭಾಗದ ಜನರಿಗೆ ಕುಡಿಯುವ ನೀರನ್ನು ಪೂರೈಸುತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಜಿಗಣಿ ಹಾಗೂ ಸುತ್ತಮುತ್ತಲಿನ ಕೈಗಾರಿಕೆಗಳು ಹೊರಹಾಕುವ ಕಲುಷಿತ ನೀರು ಕೆರೆ ಸೇರಿ, ವಿಷಕಾರಿಯಾಗುತ್ತಿದೆ. ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಕೆರೆಯ ಕೋಡಿ ಒಡೆದು, ನೀರು ರೈತರ ಜಮೀನುಗಳಿಗೆ ನುಗ್ಗಿದೆ. ಇದರಿಂದ ರೈತರ ಶ್ರಮ ವ್ಯರ್ಥವಾಗಿದೆ' ಎಂದು ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, 'ಹೆನ್ನಾಗರ ಕೆರೆ ಉಳಿಸದಿದ್ದರೆ ಮುಂದಿನ ದಿನಗಳಲ್ಲಿ ಈ ಭಾಗದ ರೈತರು ಹಾಗೂ ಸ್ಥಳೀಯರು ಸಾಕಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ. ಶಾಸಕ ಎಂ. ಕೃಷ್ಣಪ್ಪ ಅವರು ಈ ಭಾಗದ ಅಭಿವೃದ್ಧಿಗೆ ನಯಾಪೈಸೆ ಅನುದಾನ ನೀಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿವೃತ್ತ ಯೋಧ ಕ್ಯಾಪ್ಟನ್ ಸಂತೋಷ್, ಗ್ರಾಮಪಂಚಾಯಿತಿ ಅಧ್ಯಕ್ಷೆ ಮುನಿರತ್ನಮ್ಮ ಮುನಿರಾಜು, ಉಪಾಧ್ಯಕ್ಷ ಪ್ರಸನ್ನಕುಮಾರ್, ಮಾಜಿ ಅಧ್ಯಕ್ಷ ಕೇಶವರೆಡ್ಡಿ, ಸದಸ್ಯರಾದ ರಾಮಸ್ವಾಮಿ ಮತ್ತಿತರರು ಪ್ರತಿಭಟನೆಯಲ್ಲಿ ಇದ್ದರು.



ಹೆನ್ನಾಗರ ಕೆರೆ ಸಂರಕ್ಷಿಸುವಂತೆ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಪರಿಸರ ಪ್ರೇಮಿಗಳು ಪ್ರತಿಭಟಿಸಿದರು.

ಹೃದಯಾಘಾತ: ರಕ್ಷಣಾ ಸಿಬ್ಬಂದಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತ ಹಾಗೂ ಹೃದಯ ಸ್ತಂಭನದ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಒದಗಿಸುವ ಬಗ್ಗೆ ರಕ್ಷಣಾ ಸಿಬ್ಬಂದಿ ಹಾಗೂ ವ್ಯಾಯಾಮ ಶಾಲೆಯ ತರಬೇತುದಾರರಿಗೆ ನಗರದ ಮಣಿಪಾಲ್ ಆಸ್ಪತ್ರೆಯ ವೈದ್ಯರು ತರಬೇತಿ ನೀಡಿದರು.

ಆಸ್ಪತ್ರೆಯು ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೃದಯ ಮತ್ತು ಶ್ವಾಸಕೋಶ ಕಾಯಿಲೆ ಪ್ರಾಥಮಿಕ ಚಿಕಿತ್ಸೆಯ (ಸಿಪಿಆರ್) ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. 150ಕ್ಕೂ ಅಧಿಕ ಮಂದಿ ತರಬೇತಿ ಪಡೆದುಕೊಂಡರು.

'ಇತ್ತೀಚೆಗೆ ಕೆಲವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಹೃದಯ ಸ್ತಂಭನ ಆಗುತ್ತಿದೆ. ಇತ್ತೀಚಿನ ಕೆಲ ಪ್ರಕರಣಗಳು ಜನರಲ್ಲಿ ಹೃದಯದ ಆರೋಗ್ಯದ ಬಗ್ಗೆ ತಪಾಸಣೆಗೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ.

ಹೃದಯಾಘಾತ ಉಂಟಾದಾಗ ತಕ್ಷಣ ತುರ್ತು ಚಿಕಿತ್ಸೆ ಒದಗಿಸದಿದ್ದಲ್ಲಿ ಜೀವಕ್ಕೆ ಅಪಾಯ ಆಗಲಿದೆ. ವ್ಯಾಯಾಮವೂ ಸೇರಿದಂತೆ ವಿವಿಧೆಡೆ ದೈಹಿಕ ಚಟುವಟಿಕೆ ನಡೆಸುವ ಮೊದಲು ದೇಹದ ಸಂಪೂರ್ಣ ತಪಾಸಣೆ ನಡೆಸಬೇಕು' ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ನವೀನ್ ಚಂದ್ರ ತಿಳಿಸಿದರು.

'ಹೃದಯ, ಶ್ವಾಸಕೋಶದ ಪುನರುಜ್ಜೀವನಗೊಳಿಸುವ ಸಿಪಿಆರ್ ತರಬೇತಿ ನಿರ್ಣಾಯಕ ಪಾತ್ರ ವಹಿಸಲಿದೆ. ಹೃದಯಾಘಾತ ಸಮಯದಲ್ಲಿ ರೋಗಿಯ ಉಸಿರಾಟ ಅಥವಾ ಹೃದಯ ಬಡಿತ ನಿಂತಾಗ ಸಿಪಿಆರ್ ಪ್ರಾಥಮಿಕ ಚಿಕಿತ್ಸೆ ಸಹಕಾರಿಯಾಗಲಿದೆ. ಎಂದು ಆಸ್ಪತ್ರೆಯ ಡಾ. ರಾಮ್ ಕುಮಾರ್ ಜಯಪ್ರಕಾಶ್ ವಿವರಿಸಿದರು.

'ಎದೆಯ ಸಂಕೋಚನವನ್ನು ಕೃತಕ ವಾತಾಯನದೊಂದಿಗೆ ಸಂಯೋಜಿಸುವ ತುರ್ತು ಪ್ರಕ್ರಿಯೆ ಇದಾಗಿದೆ. ಹೃದಯ ಸ್ತಂಭನಕ್ಕೆ ಒಳಗಾದ ವ್ಯಕ್ತಿಯಲ್ಲಿ ಸ್ವಾಭಾವಿಕ ರಕ್ತ ಪರಿಚಲನೆ ಮತ್ತು ಉಸಿರಾಟವನ್ನು ಮರುಸ್ಥಾಪಿಸಲು ಸಹಕಾರಿ' ಎಂದರು.

ಕಡಲೆ ಪರಿಷೆ; ಮಾರ್ಗ ಬದಲು

ಬೆಂಗಳೂರು: ಬಸವನಗುಡಿಯಲ್ಲಿ ಇದೇ 29ರಿಂದ ಕಡಲೆಕಾಯಿ ಪರಿಷೆ ಆರಂಭವಾಗಲಿದೆ. ಈ ಪ್ರದೇಶದಲ್ಲಿ ವಾಹನಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

'ಪರಿಷೆ ನಡೆಯಲಿರುವ ದೊಡ್ಡ ಗಣಪತಿ ದೇವಸ್ಥಾನ ರಸ್ತೆಯಲ್ಲಿ ಇದೇ 29ರಿಂದ ಡಿ. 1ರವರೆಗೆ ಬದಲಿ ಮಾರ್ಗ ಸೂಚಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ಚಾಮರಾಜಪೇಟೆ, ಗಾಂಧಿ ಬಜಾರ್ ಮುಖ್ಯರಸ್ತೆಯಿಂದ ಬರುವ ವಾಹನಗಳು, ರಾಮಕೃಷ್ಣ ಆಶ್ರಮದ ಬಲ ತಿರುವಿನಲ್ಲಿ ಸಾಗಿ ಹಯವದನ ರಾವ್ ರಸ್ತೆ, ಗವಿಪುರ ರಸ್ತೆ ಹಾಗೂ ಮೌಂಟ್ ಜಾಯ್ ರಸ್ತೆ ಮೂಲಕ ಹನುಮಂತನಗರದ ಕಡೆಗೆ ಹೋಗಬಹುದು

ಆರ್.ವಿ. ಅಧ್ಯಾಪಕರ ಕಾಲೇಜು ಜಂಕ್ಷನ್‌ನಿಂದ ಬರುವ ವಾಹನಗಳು ಠ್ಯಾಗೋರ್ ವೃತ್ತದ ಬಲ ತಿರುವಿನಲ್ಲಿ ಸಾಗಿ, ಗಾಂಧಿ ಬಜಾರ್ ಮುಖ್ಯರಸ್ತೆ, ಆಶ್ರಮ ಜಂಕ್ಷನ್, ಹಯವದನ ರಾವ್ ರಸ್ತೆ, ಗವಿಪುರ ರಸ್ತೆ, ಮೌಂಟ್ ಜಾಯ್ ರಸ್ತೆ ಮೂಲಕ ಹನುಮಂತನಗರದತ್ತ ಹೋಗಬಹುದು.

ತ್ಯಾಗರಾಜನಗರ ಬನಶಂಕರಿ ಕಡೆಯಿಂದ ಬರುವ ವಾಹನಗಳು ಕಾಮತ್ ಯಾತ್ರಿ ನಿವಾಸ ರಸ್ತೆಯಲ್ಲಿ ಎಡ ತಿರುವು ಪಡೆದು, ಬಿಎಂಎಸ್ ಕಾಲೇಜು ವಸತಿನಿಲಯ ರಸ್ತೆ, ಕತ್ರಿಗುಪ್ಪೆ ರಸ್ತೆ ಜಂಕ್ಷನ್, ನಾರಾಯಣಸ್ವಾಮಿ ವೃತ್ತ, ಕೆ.ಜಿ.ನಗರ ಮುಖ್ಯರಸ್ತೆ ಮೂಲಕ ಚಾಮರಾಜಪೇಟೆ ಕಡೆಗೆ ಸಾಗಬಹುದು.



ಬೆಂಗಳೂರಿನ ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿ ಸೋಮವಾರದಿಂದ 'ಕಡಲೆಕಾಯಿ ಪರಿಷೆ' ಆರಂಭವಾಗಲಿದ್ದು ವ್ಯಾಪಾರಿಗಳು ಕಡಲೆಕಾಯಿ ರಾಶಿಯೊಂದಿಗೆ ಸಜ್ಜಾಗಿರುವ ದೃಶ್ಯ ಶನಿವಾರ ಕಂಡುಬಂತು

– ಪ್ರಜಾವಾಣಿ ಚಿತ್ರ/ ರಂಜು ಪಿ

ಕಾಂಗ್ರೆಸ್ ಅಂಬೇಡ್ಕರ್ ವಿರೋಧಿ: ಬಿಜೆಪಿ

ಬೆಂಗಳೂರು: ಸಂವಿಧಾನ ರಚನಾ ಸಮಿತಿಯ ನೇತೃತ್ವ ವಹಿಸಿದ್ದ ಡಾ.ಬಿ. ಆರ್. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ಸದಾ ವಿರೋಧಿಸಿಕೊಂಡು ಬಂದಿದೆ. ಈಗ ಸಂವಿಧಾನ ದಿನಾಚರಣೆಯನ್ನು ವಿರೋಧಿಸುವ ಮೂಲಕ ಕಾಂಗ್ರೆಸ್‌ನ ಭಾವನೆ ಜಗಜ್ಜಾಹೀರಾಗಿದೆ ಎಂದು ಬಿಜೆಪಿ ರಾಜ್ಯ ಘಟಕ ಟೀಕಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಟೀಕಿಸಿ ಶನಿವಾರ ಸರಣಿ ಟ್ವೀಟ್‌ಗಳನ್ನು ಮಾಡಿದ್ದು, 'ಅಂಬೇಡ್ಕರ್ ಬದುಕಿದ್ದಾಗಲೂ ಕಾಂಗ್ರೆಸ್ ತೊಂದರೆ ನೀಡಿತ್ತು. ಮೃತಪಟ್ಟ ಬಳಿಕವೂ ಗೌರವಯುತ ಅಂತಿಮ ಸಂಸ್ಕಾರಕ್ಕೆ ಅಡ್ಡಿಪಡಿಸಿತ್ತು ಎಂದು ದೂರಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

ACCOUNTANT WANTED for Jewellery Showroom Basaveshwar Nagar with 1 - 2 Years Experience: 9008052173/ 9880320431

Engg/ Production Technical

MECHANICAL ENGINEERS, Welders, Machinists, Fitters, helpers with or without experience in Machine shop, fabrication,for Industry in Bommasandra Industrial Area reply to prosteel.com @gmail.com 9901932579 6360367360

WANTED for an ISO:9001 sheet metal industry located Hoskote Industrial Area. Production supervisor with ITI/ DME with minimum 5 years experience. ITI fitter/ QA inspectors with DME qualification with 5 years experience. Call: 9448121604. Send Resume to EMail: ganesh@generalind.com

ENGINEERS FOR Production and Quality- B.E./ Diploma (Mechanical). Experience: 3-5 years. Age below 35 years. STORE ASSISTANT: B.A.,/B.Com. 'VINUMAC' 205A, Peenya 3rd phase, Bangalore-58 Phone: 080-28391959 admin@vinumac.com

WANTED 5 years Experienced CIVIL ENGINEER. Contact number - 7975542615

REQUIRED TECHNICAL EXECUTIVE SALES/SERVICE for Glue application system company. Send resume bondtech.systems@gmail.com Salary 15000 pm plus incentives.

CNC VMC operatorr required. Salary 30000 call 8073579273

Drivers

WANTED EXPERIENCED Car DRIVER Near HSR for Doctor. Timings 9.00am- 8.00pm. Contact- 7847810010 /9886037111

General

OFFICE ADMINISTRATOR REQUIRED WITH MINIMUM OF 2 YEARS EXPERIENCE. LOCATION- JP.NAGAR SALARY 20000/- WHATSAPP CV 9980944566

WANTED 1) SALES EXECUTIVE, 2) OFFICE ACCOUNTANT with minimum 5 years experience BSc/ BCom, a leading Industry in Mysore Road, Kumbalgodu. Call 9886465289, 7411009161.

MORE Classifieds IN SUPPLEMENT

IATA TRAVEL Agency urgently required International & Domestic Air Ticketing counter staff and VISA consultant with minimum experience of 4 to 5-yrs. Send resume to E-mail: unextravels@gmail.com

REQUIRED-BE MECH Auto Cad & Solid Works Experience, Sr.Accountant (Male), ITI Fitters, Quality Engineer. Resume to alm.hr2005@gmail.com

PART time job Looking for Retired, VRS, Business, Housewives or Self employed 994503475

Marketing & Sales

UNIVERSAL GROUP OF INSTITUTIONS
A DEGREE COLLEGE NEAR KENGERI, BANGALORE - 74
WANTED
MARKETING EXECUTIVE FOR LAW COLLEGE
QUALIFICATION
MBA - MARKETING
EXPERIENCE 3-5 YEARS
KINDLY DROP YOUR RESUME ON RECRUITMENT@UNIVERSALINSTITUTIONS.COM
9686664985

REQUIRED SALES Executive for Reynold's Inc, Musical Instruments Showrooms, Bangalore. Email Resume to: info@reynoldonline.com

SALES EXECUTIVE Wanted for Jewellery Showroom Basaveshwar Nagar with 1- 2 Years Experience: 9008052173/ 9880320431

WANTED SALES EXECUTIVES For Cement, Contact: 9916449766/ 9986696546 Email: acecemex@gmail.com

NEED SALES manager at the electronic city for an engineering trading company. Salary compensate with experience, forward resume to tresi@transrepower.org marketing@transrepower.org contact 9840078421

Office Boys/ Peon

REQUIRED: OFFICE BOY with Two Wheeler License. Loading Unloading Material, Hindi English Kannada Speaking: 9380768982

Part-Time Jobs

WORK FROM HOME Age 25- 65, PUC, Above Those who are Interested Malleshwarm: 7019215243/ 9886641282

Security & Detectives

SENTINEL SECURITY, a reputed Security Agency Urgent requirement for Field Officers Total package: Rs.30,000/-. Contact 9535570807

Wanted

WANTED FEMALE Digital Programmer, Personal Secretary with English: 9538337168 scotinthk@gmail.com https://scotinternational.netlify.app

JOB OPPORTUNITY, MNC Looking for Female Graduates, 30- 55 Years Old. Salary 2L/ PA: 9845256229

Teachers/ Professors

SRI.VENKATESHWARA PRE-UNIVERSITY College, Tavarekere, Madiwala. Requires FACULTY for Chemistry and History for PUC. Call: 9886447657, 9980339432 Mail: nagajois@gmail.com

SREE RAMA VIDYALAYA
9th Main, 2nd Block, Jayanagar, Bangalore-11
Ph: 26564250 / 26574250.
WANTED
Trained teachers for the following subjects for an ICSE and State Board High school.
1. Maths & Physics – B.Sc, B.Ed - Middle and High School.
2. Biology – M.Sc, B.Ed – Middle and High School.
3. Social Studies and English – B.A., B.Ed – Primary and Middle School
4. Lab. assistant [For High School] – Qualification - II PUC [Science]
A minimum of 3 years experience required for all.
Interested candidates may please send their Bio-data/Resume through E-Mail before 03.12.2021 (Friday).
E-mail: principal.sreeramavidyalaya@gmail.com/ sreeramavidyalayajayanagar@gmail.com

WANTED
Female Teacher for
SCIENCE, SOCIAL & MATHS
ESI, PF and Accommodation Facility available
Swamy Vivekananda English Medium High School
Krishnayanapalya, Near Byyappanahalli Railway & Metro station, Old Madras Road, Bangalore-38
M-8951406438, 7619612115
msmani46@gmail.com

SRI AHAM AATHMA VIDYALAYA- [ICSE], Gruhalakshmi layout, Nagasandra post, Peenya, Dasarahalli, Bangalore-73 Invites applications for the following posts with good English vocabulary for the academic year 2021-22/ 2022-23 (1) Computer science- BCA/ MCA/ Geography (2) TEACHERS to teach all the subjects for Nursery/ Primary/ Middle/ High- school. (3) Office Staff/ Clerk / Date-Entry with Tally (4) Lab Assistant/ Librarian. Offers Attractive Salary. "Transportation provided" Call: 9880200172, 9663778869 Email: sriaavapplic@gmail.com

SRI AHAM AATHMA VIDYALAYA- [ICSE], Gruhalakshmi layout, Nagasandra post, Peenya, Dasarahalli, Bangalore-73 Invites applications for the following posts with good English vocabulary for the academic year 2021-22/ 2022-23 (1) Computer science- BCA/ MCA/ Geography (2) TEACHERS to teach all the subjects for Nursery/ Primary/ Middle/ High- school. (3) Office Staff/ Clerk / Date-Entry with Tally (4) Lab Assistant/ Librarian. Offers Attractive Salary. "Transportation provided" Call: 9880200172, 9663778869 Email: sriaavapplic@gmail.com

WISDOM ENGLISH SCHOOL Rudrappa Garden Chamrajpet, Bengaluru-26, G.Science and English for Higher Grade B.Sc, B.Ed, B.A, B.Ed. Nursery & Primary Teachers. Contact: 9741763114.

VASAVI GROUP OF EDUCATIONAL INSTITUTION, Vijayanagar, Bangalore-560040. Required Fresher/ Experienced Lecturers for CHEMISTRY- (Day), COMMERCE- (Day) and ECONOMICS (Evening) for PU & Degree. Drop your resume vasavijnanapeeta01@gmail.com/ vasaviintpu@gmail.com. For further details contact 080-23203342/ 23300532.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

B.E.S. INSTITUTE OF TECHNOLOGY (Polytechnic)
16th Main, 4th Block, Jayanagar, Bangalore - 560 011
Ph: 080-26651497, 9035555595 Email: principal@besit.edu.in
Recognised by Govt. of Karnataka & Approved by AICTE, New Delhi
WANTED LECTURERS & LAB INSTRUCTORS (FULL TIME) Male candidates preferred
1. Civil Engg (Gen) 2. Mechanical Engg (Gen)
3. Computer Science Engineering
4. Electronics & Communication Engineering
5. Electrical & Electronics Engineering
Qualification: **LECTURERS:** Engineering Degree (Experience preferrable) **INSTRUCTORS:** Diploma / ITI
6. Lecturer in Mathematics: (M.Sc in Mathematics)
Apply on or before 03-12-2021 Visit: www. besit.edu.in
BES-21214

WANTED ENGLISH Medium Trained LADY TEACHERS for Nursery/ Primary/ Higher Secondary for Teaching English; Maths; Science; E.V.S; Hindi. Physical Education Teacher (Female/ Male). Walk-In Interview 10.00 A.M- 4.00 P.M. New Oxford ENglish School, 185, VI Cross, Gandhinagar, Bangalore-09. Phone: 22261590/ 41475015. Email: noes.school@gmail.com

SRI.RAMAKRISHNA EDUCATION Society, Halasuru (English Medium) Requires Experienced Lady TEACHERS BSc/MSc, BEd Science, Maths & BA/MA, BEd for English, Social Studies. 8861248642/ 9845048824 Mail: srkes1963@gmail.com

Walk-in

SWIGGY
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

MATRIMONIAL

Brides Wanted

Brahmin

SMARTHA HK Gouthama, Unconsummated Divorcee, 42, 5'7", M.Tech, Singapore Employed Seeks any Brahmin Issueless Divorcee/ Unmarried Graduate GIRL. Contact: 9901730744.

Hindu

BOY: 28, Public Sector Bank, Officer, Engg. Post Graduate. 6'0", Gowda, Non- Veg, seeks Alliance. Girl Expected: Public Sector Bank, Officer/ Well Qualified Clerk. Above 5'5", 23-27, Equal to Similar Caste, Non- Veg. Contact: 0821- 2958467.

PROFESSIONAL, TALENTED, intellectual, M.S,PhD. 43/5'11'. Educated, respected, ex-defence officer, Hindu family, Bengaluru. WA:9845284089

Grooms Wanted

Hindu

ವರ ಬೇಕಾಗಿದೆ
ಬೆಂಗಳೂರು ರಹವಾಸಿ ಯುಕೆ ದೇಶದಲ್ಲಿ ಉದ್ಯೋಗ ಮಾಡುತ್ತಿರುವ ಸುಮಾರು 33 ವರ್ಷ ವಯಸ್ಸಿನ ಸ್ನಾತಕೋತ್ತರ ವೈದ್ಯ ಪದವೀಧರ ವಧುವಿಗೆ ಭಾರತೀಯ ವರ ಬೇಕಾಗಿದೆ.
ವರ ಸುಮಾರು 32 ರಿಂದ 35 ವರ್ಷದವನಾಗಿರಬೇಕು ಮತ್ತು ಸ್ನಾತಕೋತ್ತರ ಪದವೀಧರ (ಮೆಡಿಸಿನ್/ಇಂಜಿನಿಯರಿಂಗ್/ಐಐಎಂ, ಐಐಎಸ್ಸಿ, ಐಐಟಿ – ಎಂಬಿಎ/ಸಿಎ/ಐಸಿಡಬ್ಲ್ಯುಎ/ಸಿಎಫ್ಎ/ಎಸಿಎಸ್) ಆಗಿರಬೇಕು ಅಥವಾ ಯುಕೆ ದೇಶದಲ್ಲಿ ಉದ್ಯೋಗಿಯಾಗಿರಬೇಕು ಅಥವಾ ಇಲ್ಲಿಯೆ ನೆಲೆಸಿ ಕನಿಷ್ಠ 3 ವರ್ಷ ಕಾಲ ಕೆಲಸ ಮಾಡಲು ಸಿದ್ಧವಾಗಿರಬೇಕು. ಜಾತಿ ಅಭ್ಯಂತರವಿಲ್ಲ, ಆದರೆ ಹಿಂದೂ ಆಗಿರಬೇಕು. ವಿಚ್ಛೇದಿತರಿಗೆ ಅವಕಾಶವಿಲ್ಲ.
ಆಸಕ್ತಿಯುಳ್ಳವರು ಸಂಪರ್ಕಿಸಿ
9900422872/ 9845154344
ಅಥವಾ ಇ–ಮೇಲ್: annapurneshwari6161@yahoo.com

Muslim

Muslim/ Sunni/ Beautiful/ 29/ 5'7'/ Life Insurance Corporation Of India/ seeking govt job holder/ 9164647183

Brahmin

BRAHMIN Bridegroom Required 28 years, 5.4 ft., fair looking girl, B.A.L.L.B., M.Sc. in Criminology &Forensic Science, LLM in Corporate &Commercial Law and LLM inTechnology Law.Looking for bridegroom with law background/lawyer family based inBangalore. Interested Tamil/Mysore liberal and broad minded families please contact Email:ravi.iyengar3019@gmail.com , punarvasu.ramapriyan@gmail.com

Matrimonial Bureaus

USHODHAYA MATRIMONIAL (Estd: 1998)
FOR HIGH CLASS FIRST/ SECOND/ MARRIAGE PROPOSALS, INDIA/ ABROAD, in all age groups
9611919477
9886884291

AUTOMOTIVE

Four Wheelers Selling

Maruti

SALVAGE QUOTATION required with RC & without RC. Vehicle No. KA-51 M-4548, MARUTI– BALENO- 2006 Model. Damaged vehicle at owner's premises. Contact: 9845036847

BUSINESS

Business to Business

Business

WANTED INVESTORS/EQUITY Partner for Export Product Startup Company on Profit Sharing Basis. 9448340164, 7892876392

BUDUGERE: SALE: 500 Acres/ 1.5 Acres/ Malur: 400 Acres/ Vemagal (Hoskote), JD 90 Acres- MAM Services- 9342247637.

Business Offers

Finance

APERIO LOAN 15CR to 150CR, @3-6% P.A Against Viable Projects, LAP, Business, Sickunits & Takeover. Ct: 7305349141 Mail: aperiofunds@yahoo.com

LOANS UP to Rs.700cr for Property, Projects, Business, Cheques Old Loans Cleared Easy Process Good Commission for Agents. Ct 9092692403

FINANCE AGAINST Land & Building Properties Industries Schools Hospitals Projects & NRI Funds.7358729820

WANTED BUSINESS Partner with 5 Lakhs to 10 Lakhs Investment, Good Returns. Contact: 9606701007/ 8892501007

Machinery & Tools

USED M/Cs SALE
At BOMMASANDRA
1. Vertical Plastic Inj Molding M/c
2. Vertical Rubber Molding M/c
3. Vertical Vacuum Furnace
4. Concrete Floor Grinder
5. Floor Polishing M/c
6. Portable/Table Type Saws
7. Concrete Core Drilling M/cs
Contact - +919632204048
kcsblr2004@gmail.com

SOCIAL SERVICES

Old Age Home

"AGRASEN OLDAGE HOME" Provides Luxurious Facilities like Furnished Rooms, Vegetarian Food, Laundry, Nursing, Yoga, Games, Library. Contact:- 9513362681/ 9886037111/ 9620304864

PUBLIC NOTICE

PUBLIC NOTICE
My client is intended to purchase the property mentioned in the schedule hereunder owned by Mr.NAYAZ AHMED, 68 yrs S/o late. Mohammed Ibrahim saheb, No.4 Casa Grande, 3rd cross, Nandidurga Road, Bangalore 46 and he represents that apart from him there are no other person/s having any right or claim over the schedule property and he has not mortgaged, created lien or encumbered the schedule property or part thereof in any manner and has not entered into any agreement of SALE/ MEMORANDUM OF UNDER STANDING Etc., with any other person/s. FURTHER THERE ARE NO RESTRICTION FOR THE SALE OF THE SCHEDULE PROPERTY TO ANY THIRD PARTY, and further claims that the original sale deed dt:09/07/2015 registered as Doc No.HLS-1-01642-2015-16 Stored in CD No.HLSD119 in the office of the Sub- Registrar Halasooru Bangalore, in respect of the schedule property has been lost in transits, Any Person/s or body of persons, banks, financial institutions, NBFC's Etc., having any objection/s or claims, shall with documentary evidence lodge their objection/ claims within 15 days from the date of this notice with the undersigned, failing which, my client shall proceed with the above mentioned transaction.
SCHEDULE PROPERTY:
All That Piece and Parcel of Immovable Property bearing Municipal Corporation khata No. 69/4 new PID No.91-2-69/4 on third floor having super built up area of 400 sq.ft along with 114 sqft of undivided interest in land comprised therein situated at Madhavaraya Mudaliyar Road, Frazer Town Pulikeshi Nagar, Bengaluru and the entire Land Property is Bounded on the East by Road on the West by Premises of Ashwath on the North by Road and on the South by Premises of Shankar Rao.
S.B.Abdur Rahman
Advocate
1st Floor, M M Complex-1, No.60 Chickbazaar Road, Tasker Town, Bangalore-51
off No:41480443
Mob:9845083304

Janatha Education Society's
VIVEKANANDA EDUCATIONAL INSTITUTIONS
NOTICE INVITING QUOTATIONS
1) Security & Houskeeping
2) College Canteen
Sealed quotations are invited from "Licensed Labour Contractors to provide Security & Housekeeping personal " and reputed Caterers/ Hotels to run college canteen at Rajajinagar for providing above mentioned services on an annual basis.
All Quotations to reach us within 10 Days of this notification.
Contact : Dr. Rajkumar Road, Next to Orion Mall, 2nd Stage, Rajajinagar, Bengaluru-55 Phone : 080-23371952
H.C. Balakrishna, Hon'ble President
Dr. C.N. Manche Gowda Hon. Secretary

MAHESHWARI SOUHARDA CREDIT CO-OPERATIVE LTD
#69, Sirsi Circle, Chamrajpet, Bangalore, Phone No.: 080-48544445 / 26704425
E mail: mscclt d2016@gmail.com
Regd. No. RSR/SOUKA/REG/100/4317/2015-2016
NOTICE OF AGM
Notice is hereby given that 5th Annual General Body meeting of the co-operative for the year 2020-21 will be held on **Sunday 19.12.2021 at 11.00 AM.**
Venue: Maheshwari Bhavan, Okalipuram, Bangalore - 21
By The Order of Board of Directors
Sd/- C G Shivakumar, CEO

EDUCATIONAL

Admission

B.ED ADMISSIONS_OPEN FRANK COLLEGE OF EDUCATION 6TH PHASE JP-NAGAR BANGALORE-78 CONTACT: 9980167814 DR.HEGDE

B.ED ADMISSIONS_OPEN FLORENCE ENGLISH INSTITUTE OF B.ED TRAINING JP-NAGAR BANGALORE-78 CONTACT: 9108618814 DR.HEGDE

OTHERS

Furniture & Furnishings

OWNER LEAVING Immediate Sale Leather Sofa, DINING, COT, DRESSING, SHOERACK, GAS, MIXIE, CURTAINS. CALL 9845414482

PERSONAL

Change of Name

CHANGE OF NAME
I, **NAVEEN SHRIDHAR,** Residing at #29, Krithika, 60 Feet Road, VBH Complex, III Phase, Girinagar, Bengaluru-560085, have changed my son's name from **ADHYANTH NAVEEN HEGDE to ADHYANTH HEGDE** vide affidavit dated 15-11-2021, before Notary H.G. Venkataramu, Bangalore. Henceforth he shall be called **ADHYANTH HEGDE** only.

I, T.B. LEELAVATHI, @ Leelavathi T.B. W/o C. Shivaprasad, aged 69 years, residing at and owner & Khatedar of House property No. 1393, 1st Stage, 2nd Phase, Chandra Layout, Bangalore, had changed my name to LEELA S. PRASAD, W/o C. Shivaprasad, by wish as sworn affidavit on 23-11-2021, before Notary Public H.S. Sakalesh Aradhya, vide Sl. No. 923, Page 81, Volume Two, Bangalore.

CHANGE OF NAME
I, **BASVE GOWDA SAJITH,** residing at Jankhan Estate, Thogarihankal Post, Chickmagalur, Karnataka, Pin: 577137, have changed my name to **KATRUMANE BASVE GOWDA SAJITH,** vide affidavit dated 26/11/2021, before Notary L.Gopalakrishna, Bangalore.

I, YOGANANDA REDDY A, S/o. Anjaneya Reddy, Residing at No. 58, 1st Floor, 8th Cross, 5th Main, Radhakrishna Layout, Padmanabhanagara, Bengaluru- 560070. Hereby declare that, I have changed my minor Son's name from KUSHAL Y to KUSHAL REDDY Y, vide Affidavit dated 27.11.2021, Sworn before Advocate and Notary B. Prasanna, Bengaluru.

I SAVITRAAMMA Spouse of No. 6609049 Ex-Naik Puttaswamy R/a No. 109, Ganigarapalya Main road, Dileep Layout, Hosahalli, Thalagattapura, Bangalore- 560109 Have Changed My name to SAVITHRAMMA Vide Affidavit dated 25/11/2021 before Additional Chief Metropolitan Magistrate Bangalore

I SHREE LATHA daughter of No.14637571K, Ex- HAV, Shashi Kumar. S, residing at #52/1, Akash Vihar (AF), Air Force Camp, Marathahalli, Bangalore-37, have changed my name to SHREE LATHA. S vide affidavit dated 16.09.2021, before notary A.R. Muneer Ahmed, Bangalore.

I MANJULA, R/a No. 4, Attimaramma temple, Parvathipuram, Bangalore-04 Have Changed my Minor daughter's name from HANI. M to DHANYASHREE. M vide Affidavit Dated 02/08/2016 Before Notary V. Rajashekhara Bangalore

---

WEEKEND CORNER ಕ್ಲಾಸಿಫೈಡ್ಸ್


ಇದಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ
ಕೈಲಾಸ ಗಿರಿಯ ಮೌನಕ್ಕೆ ಸಮವಾದ ಅತ್ಯುನ್ನತವಾದ ಮೌನವನ್ನು (ಚಿವಂ)
ಬೆಂಗಳೂರಿನಲ್ಲಿರುವ ಮೌನಮಂಟಪದಲ್ಲಿ ಅನುಭವಿಸಬಹುದು. ಮೌನದ ಶಕ್ತಿಯು ಉದ್ವೇಗ, ಒತ್ತಡ, ಭಯ, ಆತಂಕ ಮತ್ತು ನಿದ್ರಾಹೀನತೆಯನ್ನು ತೆಗೆದುಹಾಕುತ್ತದೆ. ಆಧ್ಯಾತ್ಮಿಕವಾಗಿ ಉತ್ಕೃಷ್ಟ ಅನುಭವವನ್ನು ಪಡೆಯಲು ಮೌನಮಂಟಪಕ್ಕೆ ಭೇಟಿ ನೀಡಿ.
ಎಲ್ಲರಿಗೂ ಸ್ವಾಗತ!
ಎಸ್.ಎಸ್.ಬಿ. ಸೋಶಿಯೋ ಸ್ಪಿರಿಚ್ಯುಯಲ್ ಫೌಂಡೇಶನ್
'ಮೌನಮಂಟಪ', ನಂ.28/3, ನಾಗದಾಸನಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು–560 064
86604 55686 / 90359 19050
ssbssf.com

EXCELLENT BUSINESS OPPORTUNITY
For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Chit Fund/ Mutual Fund Agents, VRS, NRI'S Self Employed, Business Owners, Professionals etc.
India's Most trusted, Leading 153 Year old
MNC Company offers service oriented DISTRIBUTION with Zero investment
Address: Beside Indiranagar Metro Station 2nd Floor, Above RBL Bank, Bengaluru-38
Ph : 7989807514 / 8919491856

ಭಗವಾನ್ ಆದಿನಾಥ್ ಹಾಸ್ಪಿಟಲ್ ಸರ್ವೀಸ್
BHAGWAN ADINATH HOSPITAL SERVICES
FREE CANCER DETECTION CAMP FOR FEMALES
On 28th November 2021(Sunday - 8am to 2pm)
At Our HOSPITAL PREMISES
No. 182 Y, 2nd and 3rd Floor, 3rd Block, 12th Main, Bashyam Circle, Rajajinagar, Bengaluru-560 010(Above ICICI Bank), India
Bhagwan Adinath Jain Hospital Chartitable Trust
Ph. : 080 42111313, 42111414, 42111515 Mob. : 9632244777
E-mail : adinathhospitalservices@gmail.com, Website : www.adinathhospitalservices.com

M.E.S. COLLEGE OF PHARMACY
Bengaluru - Phone: 080-29621010 - Approved by PCI, Govt. of Karnataka & Affiliated to RGUHS
KCET CODE: B061
Few seats are available for admission to D. PHARM / B.PHARM Course on concessional fees
Govt.Scholership available in SSP/NSP. Interest free bank loans available
Special offer for Karnataka candidates
www.mescollegeofpharmacy.com
OFFICE: Veeranapalya, Ring Road, Bengaluru
CAMPUS: Aradeshahalli, Bengaluru-562110
HOSTEL Facilities
Contact immediately: 9342859503 / 9342850853 / 9742663730
MES-21202

NARGUND COLLEGE OF PHYSIOTHERAPY
ADMISSIONS OPEN
CONTACT US
+91 7019425622
+91 8026720604
www.nargund.edu.in/ncofp
ncpt@nargund.edu.in
JOIN OUR BACHELOR OF PHYSIOTHERAPY
JOIN NOW FOR 2021-2022 INTAKE



ಭಾರತದ ಮೊದಲ ಜೀವವೈವಿಧ್ಯ ತಾಣ ಈ ಹುಣಸೆ ತೋಪು

ಶತಾಯುಷಿ ಹುಣಸೆ ಮರಗಳ ನೆಲೆವೀಡು ನಲ್ಲೂರು

• ಮನೋಹರ್ ಎಂ.

ಬೆಂಗಳೂರು ನಮ್ಮ ಹೆಮ್ಮೆ...

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ನಲ್ಲೂರಿನಲ್ಲೊಂದು ಹುಣಸೆ ತೋಪು ಇದೆ. ಭಾರತದ ಮೊದಲ ಜೀವವೈವಿಧ್ಯ ತಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ತಾಣವು ಶತಮಾನ ಕಂಡ ನೂರಾರು ಹುಣಸೆ ಮರಗಳ ನೆಲೆವೀಡು. ಸುಮಾರು 410 ವರ್ಷಗಳಷ್ಟು ಹಳೆಯದಾದ ಭಾರಿ ಗಾತ್ರದ ಹುಣಸೆ ಮರಗಳೂ ಇಲ್ಲಿವೆ.

ಬೆಂಗಳೂರಿನಿಂದ 45 ಕಿ.ಮೀ ಹಾಗೂ ದೇವನಹಳ್ಳಿ ಪಟ್ಟಣದಿಂದ ಸುಮಾರು 9 ಕಿ.ಮೀ ದೂರದಲ್ಲಿರುವ ಈ ಹುಣಸೆ ತೋಪು ಐತಿಹಾಸಿಕ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಇಲ್ಲಿನ ಕೆಲವು ಹುಣಸೆ ಮರಗಳು ಬುಡದಲ್ಲೇ ಕವಲೊಡೆದು ವಿಶಿಷ್ಟ ಆಕಾರಗಳಲ್ಲಿ ಬೆಳೆದು ನಿಂತಿವೆ. ಗುಮ್ಮಟ, ಅಂಡಾಕಾರ, ಅರ್ಧ ವೃತ್ತಾಕಾರ, ಶಂಕಾಕಾರ, ಅಂಕುಡೊಂಕಾದ ಶಿರಭಾಗವನ್ನು ಹೊಂದಿರುವ ಹುಣಸೆ ಮರಗಳು ಜನರನ್ನು ಆಕರ್ಷಿಸುತ್ತವೆ. ಮರಗಳಲ್ಲಿ ಬಿಡುವ ಡೊಂಕಾದ ಹಾಗೂ ನೇರ ಆಕಾರದ ಟನ್‌ಗಟ್ಟಲೆ ಹುಣಸೆ ಫಸಲನ್ನು ಪ್ರತಿ ವರ್ಷ ಹರಾಜು ಹಾಕುವ ಮೂಲಕ ಮಾರಾಟ ಮಾಡಲಾಗುತ್ತಿದೆ.

ಹುಣಸೆ ತೋಪು ಸದ್ಯ ಅರಣ್ಯ ಇಲಾಖೆಯ ಸುಪರ್ದಿಯಲ್ಲಿದೆ. ಇಲ್ಲಿನ ಪ್ರತಿ ಮರಕ್ಕೂ ಗುರುತಿನ ಸಂಖ್ಯೆಯ ಫಲಕಗಳನ್ನು ಅಳವಡಿಸಿದೆ. ಭದ್ರತೆಗಾಗಿ ತೋಪಿನಲ್ಲಿ ಮುನಿರಾಜು ಎಂಬ ಸಿಬ್ಬಂದಿಯನ್ನೂ ಇಲಾಖೆ ನಿಯೋಜಿಸಿದೆ. 10 ವರ್ಷಗಳಿಂದ ತೋಪನ್ನು ಕಾಯುತ್ತಿರುವ ಇವರು, ಇಲ್ಲಿಗೆ ಭೇಟಿ ನೀಡುವವರಿಗೆ ಮಾಹಿತಿ ನೀಡುವ ಮೂಲಕ, ಈ ಸ್ಥಳದ ಮಹಿಮೆ ವಿವರಿಸುವ ಮಾರ್ಗದರ್ಶಕರಾಗಿಯೂ (ಗೈಡ್) ಕೆಲಸ ಮಾಡುತ್ತಿದ್ದಾರೆ.

ಅಂಕಿ-ಅಂಶಗಳು

53 ಎಕರೆ
ಹುಣಸೆ ತೋಪಿನ ವಿಸ್ತೀರ್ಣ

300
ತೋಪಿನಲ್ಲಿರುವ ಹುಣಸೆ ಮರಗಳು

ಕೆಲವು ಮರಗಳು ಎಷ್ಟು ಹಳೆಯವು ಎಂಬುದನ್ನು ತಿಳಿಯಲು ಅವುಗಳ ಭಾಗಗಳನ್ನು 'ಕಾರ್ಬನ್ ಡೇಟಿಂಗ್' ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. 155ನೇ ಕ್ರಮಾಂಕದ ಹುಣಸೆ ಮರವು ಸುಮಾರು 410 ವರ್ಷಗಳಷ್ಟು ಹಳೆಯದು ಹಾಗೂ ಇತರ ಕೆಲವು ಮರಗಳು 200 ವರ್ಷಗಳಷ್ಟು ಹಳೆಯವು ಎಂದು ಕರ್ನಾಟಕ ಜೀವ ವೈವಿಧ್ಯ ಮಂಡಳಿ ದೃಢಪಡಿಸಿದೆ.

'ನೂರಾರು ವರ್ಷಗಳ ಹಿಂದೆ ನಲ್ಲೂರು ಕೋಟೆಯನ್ನು ರಾಜರು ಆಳುತ್ತಿದ್ದರಂತೆ. ಅವರೊಮ್ಮೆ ಆಹಾರಕ್ಕಾಗಿ ಗೊಜ್ಜು ಸಿದ್ಧಪಡಿಸಲು ಬಳಸಿದ್ದ ಹುಣಸೆ ಬೀಜಗಳನ್ನು ಇಲ್ಲಿ ಬಿಸಾಡಿದ್ದರಂತೆ. ಆ ಬೀಜಗಳಿಂದ ಈ ಹುಣಸೆ ತೋಪು ಹುಟ್ಟಿಕೊಂಡಿದೆಯಂತೆ. ನಲ್ಲೂರು ಕೋಟೆ ಎಂದರೆ ಪ್ರತ್ಯೇಕ ಕೋಟೆ ಇಲ್ಲ. ಹುಣಸೆ ಮರಗಳೇ ನಲ್ಲೂರಿಗೆ ಕೋಟೆಯಂತಿದ್ದವು' ಎಂದು ತೋಪಿನ ಬಳಿ ಜಾನುವಾರುಗಳನ್ನು ಮೇಯಿಸುತ್ತಿದ್ದ ಕಮಲಮ್ಮ ಹುಣಸೆ ತೋಪಿನ ಐತಿಹ್ಯ ಬಿಚ್ಚಿಟ್ಟರು.



ಇತಿಹಾಸ ಏನು ಹೇಳುತ್ತದೆ: ನಲ್ಲೂರು ಹುಣಸೆ ತೋಪಿನ ಇತಿಹಾಸ ಕೆದಕುತ್ತಾ ಹೋದಂತೆ ಭಿನ್ನವಾದ ಕಥೆಗಳು ತೆರೆದುಕೊಳ್ಳುತ್ತವೆ. ಈ ತೋಪು ಸಾವಿರ ವರ್ಷಗಳಷ್ಟು ಹಳೆಯದು ಎಂದೂ ಕೆಲವರು ಹೇಳುತ್ತಾರೆ. ಆದರೆ, 'ಈ ಪ್ರಾಂತ್ಯ 13ನೇ ಶತಮಾನದಲ್ಲಿ ಚೋಳ ವಂಶದ ರಾಜರ ಅಧೀನದಲ್ಲಿತ್ತು' ಎಂದು ತೋಪಿನ ರಸ್ತೆಬದಿ ಅಳವಡಿಸಲಾಗಿರುವ ಬಣ್ಣ ಮಾಸಿದ ಮಾಹಿತಿ ಫಲಕ ಹೇಳುತ್ತಿದೆ.

'ತೋಪಿನಲ್ಲಿ ಐತಿಹಾಸಿಕವಾದ ಚನ್ನಕೇಶವಸ್ವಾಮಿ ದೇವಾಲಯವಿದೆ. ಅದರ ಗೋಡೆಗಳ ಮೇಲೆ ಕೆತ್ತಲಾಗಿರುವ ವಾಸ್ತುಶಿಲ್ಪದ ಸೌಂದರ್ಯವನ್ನು ಇಲ್ಲಿಗೆ ಬರುವವರು ಸವಿಯುತ್ತಾರೆ. ಆದರೆ, ಇದು ಇತ್ತೀಚಿನ ವರ್ಷಗಳಲ್ಲಿ ಶಿಥಿಲಾವಸ್ಥೆ ತಲುಪಿದ್ದು, ದೇವಾಲಯದ ಕೆಲವು ಚಪ್ಪಡಿಗಳು ಧರೆಗುರುಳಿವೆ. ಹಾಗಾಗಿ, ದೇವಾಲಯದ ಒಳಭಾಗಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ' ಎಂದು ಅರಣ್ಯ ಇಲಾಖೆ ಸಿಬ್ಬಂದಿ ಮುನಿರಾಜು ಹೇಳಿದರು.

ತೋಪಿನ ನಡುವೆ ನಲ್ಲೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾದುಹೋಗಿದೆ. ಅಕ್ಕಪಕ್ಕದ ಗ್ರಾಮಸ್ಥರಿಂದ ಪೂಜಿಸಲ್ಪಡುವ ಗಂಗಮ್ಮ ದೇವಿಯ ದೇವಸ್ಥಾನವೂ ಇಲ್ಲಿದೆ. ಇಲ್ಲಿನ ಹತ್ತಾರು ಗ್ರಾಮಸ್ಥರೆಲ್ಲ ಸೇರಿ ಅದ್ದೂರಿಯಾಗಿ ಗಂಗಮ್ಮ ಜಾತ್ರೆಯನ್ನೂ ನಡೆಸುತ್ತಾರೆ.



ಹುಣಸೆ ತೋಪಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ಚನ್ನಕೇಶವಸ್ವಾಮಿ ದೇವಾಲಯ



ನಲ್ಲೂರಿನ ತೋಪಿನಲ್ಲಿರುವ ದಢೂತಿ ಹುಣಸೆ ಮರ —ಪ್ರಜಾವಾಣಿ ಚಿತ್ರ

ಫಲಕ ಸರಿಪಡಿಸಿ; ತಾಣ ಸಂರಕ್ಷಿಸಿ



ಎನ್‌.ಭಾಸ್ಕರ್

'ಐತಿಹಾಸಿಕ ಮಹತ್ವ ಒಳಗೊಂಡಿರುವ ನಲ್ಲೂರು ಹುಣಸೆ ತೋಪನ್ನು ಕಾಯಲು ಸಿಬ್ಬಂದಿ ನಿಯೋಜಿಸಿದರೆ ಸಾಲದು. ಕಾವಲು ಸಿಬ್ಬಂದಿ ಸಂಜೆವರೆಗೆ ಮಾತ್ರ ಇಲ್ಲಿರುತ್ತಾರೆ. ಸರ್ಕಾರದ ನಿರ್ಲಕ್ಷ್ಯದಿಂದ ಈ ಪಾರಂಪರಿಕ ತಾಣ ನಶಿಸುತ್ತಿದೆ. ಹುಣಸೆ ತೋಪಿನ ಇತಿಹಾಸ, ವಿವರ ನೀಡಲು ಅಳವಡಿಸಿರುವ ಫಲಕ ಹಾಳಾಗಿ ವರ್ಷಗಳೇ ಕಳೆದಿವೆ. ಅಕ್ಷರಗಳೇ ಕಾಣದ ಫಲಕವನ್ನು ಈವರೆಗೆ ಬದಲಾಯಿಸಿಲ್ಲ' ಎಂದು ಇಲ್ಲಿನ ಸ್ಥಳೀಯ ನಿವಾಸಿ ಎನ್‌.ಭಾಸ್ಕರ್ ದೂರಿದರು.

'ವಾರಾಂತ್ಯದಲ್ಲಿ ತೋಪು ವೀಕ್ಷಿಸಲು ಇಲ್ಲಿಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ, ಸಮರ್ಪಕ ನಿರ್ವಹಣೆ ಇಲ್ಲದ ತೋಪಿನ ದುಃಸ್ಥಿತಿ ಅವರಲ್ಲಿ ನಿರಾಶೆ ಮೂಡಿಸುತ್ತಿದೆ. ತೋಪಿನಲ್ಲಿ ಅನವಶ್ಯಕ ಗಿಡ–ಗಂಟಿಗಳು ಬೆಳೆದುಕೊಂಡಿವೆ. ಅವುಗಳನ್ನು ತೆರವುಗೊಳಿಸುವುದಕ್ಕೆ ಅರಣ್ಯ ಇಲಾಖೆಯೂ ಮುಂದಾಗಿಲ್ಲ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಯಾವುದೇ ಮೂಲಸೌಕರ್ಯಗಳಿಲ್ಲ. ಪುರಾತನ ದೇವಾಲಯವೂ ನಶಿಸುತ್ತಿದೆ. ಹುಣಸೆ ತೋಪಿನ ಸುತ್ತ ಗುಣಮಟ್ಟದ ಬೇಲಿ ನಿರ್ಮಿಸಬೇಕು. ತಾಣವನ್ನು ಸಂರಕ್ಷಿಸಲು ಸರ್ಕಾರ ವಿಶೇಷ ಗಮನ ಹರಿಸಬೇಕು' ಎಂದೂ ಆಗ್ರಹಿಸಿದರು.

ಕೋವಿಡ್ ಅಂಕಿ-ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.12 ಕೋಟಿ ▲	3.45 ಕೋಟಿ
ಸಕ್ರಿಯ ಪ್ರಕರಣ	2 ಕೋಟಿ ▲	1.07 ಲಕ್ಷ ▼
ಗುಣಮುಖ	23.59 ಕೋಟಿ ▲	3.39 ಕೋಟಿ
ಸಾವು	52.11 ಲಕ್ಷ ▲	4.67 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.78 ಲಕ್ಷ ▼	8,318 ▼
ಗುಣಮುಖ	4.01 ಲಕ್ಷ ▲	10,967 ▲
ಸಾವು	6,863 ▼	465 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ಬ್ರಿಟನ್	ಅಮೆರಿಕ
72,159	50,091 ▲	37,686 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
94.11 ▲	10.31 ▼	10.13 ▲

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.40 ಲಕ್ಷ ಮಹಾರಾಷ್ಟ್ರ
39,125 ▲ ಕೇರಳ
36,443 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

66.33 ಮಹಾರಾಷ್ಟ್ರ
51.24 ಕೇರಳ ▲
27.23 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

'ಓಮಿಕ್ರಾನ್: ವಿಸ್ತೃತ ಅಧ್ಯಯನ ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಆಫ್ರಿಕಾದ ಮತ್ತು ಅದರ ಪಕ್ಕದ ದೇಶಗಳಲ್ಲಿ ಓಮಿಕ್ರಾನ್ ಸೋಂಕಿಗೀಡಾದ ಸಮುದಾಯಗಳನ್ನು ಪತ್ತೆ ಮಾಡಿ, ವಿಸ್ತೃತ ಅಧ್ಯಯನ ನಡೆಸುವುದು ಅಗತ್ಯ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಮುಂದಿನ ಕ್ರಮಗಳನ್ನು ನಿರ್ಧರಿಸುವುದಕ್ಕೂ ಮುನ್ನ, ಕ್ಲಿನಿಕಲ್ ಮಾಹಿತಿ ಕಲೆಹಾಕುವುದರ ಜೊತೆಗೇ ಈ ಕೆಲಸ ಆಗಬೇಕು ಎಂದಿದ್ದಾರೆ.

'ಪ್ರಯಾಣ ನಿರ್ಬಂಧ ವಿಧಿಸುವುದರಿಂದ ಅಥವಾ ಕೆಲವು ದೇಶಗಳಿಂದ ಬರುವವರನ್ನು ತಡೆಯುವುದು ಓಮಿಕ್ರಾನ್ ನಿಗ್ರಹ ಅಥವಾ ಹರಡದಂತೆ ನಿಯಂತ್ರಿಸಲು ಹೆಚ್ಚು ನೆರವಾಗುವುದಿಲ್ಲ. ಪ್ರಕರಣಗಳು ಪತ್ತೆಯಾದ ಸಮುದಾಯಗಳನ್ನು ಗುರುತಿಸಿ, ಜೆನೊಮಿಕ್ ಸೀಕ್ವೆನ್ಸ್ ಅಧ್ಯಯನ ಮಾಡಬೇಕು' ಎಂದು ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದ ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಗಿರಿಧರ್ ಆರ್. ಬಾಬು ಹೇಳಿದ್ದಾರೆ.

ಇಸ್ರೇಲ್, ಬೆಲ್ಜಿಯಂ, ಬ್ರಿಟನ್‌ನಲ್ಲಿ ಓಮಿಕ್ರಾನ್ ಪ್ರಕರಣಗಳು ವರದಿಯಾಗಿವೆ.

'ನಮಗೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿನ ಕ್ಲಿನಿಕಲ್ ಮಾಹಿತಿ ಬೇಕು' ಎಂದು ವಿಶ್ವ ಆರೋಗ್ಯ ಸಂಸ್ಥೆ ರಚಿಸಿದ್ದ ಸ್ಟ್ರಾಟೆಜಿಕ್ ತಂಡದ ಸದಸ್ಯ, ಹಿರಿಯ ವಿಜ್ಞಾನಿ ಗಗನ್‌ದೀಪ್ ಕಾಂಗ್ ತಿಳಿಸಿದ್ದಾರೆ.

ಆರ್‌ಟಿಪಿಸಿಆರ್ ಪರೀಕ್ಷೆಯಿಂದ ಈ ತಳಿ ಸುಲಭವಾಗಿ ಪತ್ತೆಯಾಗುತ್ತದೆ. ವ್ಯಾಪಕವಾಗಿ ಬಳಸಿದ ಆರ್‌ಟಿ ಪಿಸಿಆರ್ ಪರೀಕ್ಷೆಯನ್ನು ಈ ರೂಪಾಂತರ ಪತ್ತೆಗೂ ಬಳಸಬಹುದೆಂದು ಹಲವಾರು ಪ್ರಯೋಗಾಲಯಗಳು ಸೂಚಿಸಿವೆ.

ಕೋವಿಡ್ -19 ಸೋಂಕಿನ ಹಿಂದಿನ ರೂಪಾಂತರಿಗಳಿಗಿಂತ ವೇಗವಾಗಿ ಹರಡುವ ಈ ಹೊಸ ತಳಿಯನ್ನು ಪತ್ತೆಹಚ್ಚಲು ಆರ್‌ಟಿಪಿಸಿಆರ್ ಪರೀಕ್ಷೆ ಮಾಡುವಂತೆ ವಿಶ್ವ ಆರೋಗ್ಯ ಸಂಸ್ಥೆ ಸಲಹೆ ನೀಡಿದೆ.

ರಾಜ್ಯ ಕೋವಿಡ್ ಅಂಕಿ-ಅಂಶ

29,95,285 ▲ ಒಟ್ಟು ಸೋಂಕಿತರು (29,94,963 ನಿನ್ನೆಯ ವಿವರ)
6,754 ▲ ಸಕ್ರಿಯ ಪ್ರಕರಣಗಳು
29,50,306 ▲ ಗುಣಮುಖರಾದವರು
38,196 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	322 ▼
ಗುಣಮುಖ	176 ▼
ಸಾವು	3 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,55,984 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,279 ▼	12,34,377 ▲	16,327 ▲

ದಿನದ ಏರಿಕೆ

ಹೊಸ ಪ್ರಕರಣ	149 ▼
ಗುಣಮುಖ	105 ▼
ಸಾವು	00 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕಲಬುರಗಿ ಪಾಲಿಕೆ ಆಯುಕ್ತರ ವಿರುದ್ಧ ಸಿ.ಎಂಗೆ ದೂರು

ಕಲಬುರಗಿ: ಮದುವೆಯಾಗುವುದಾಗಿ ಹೇಳಿ ದೈಹಿಕವಾಗಿ ಬಳಸಿಕೊಂಡಿದ್ದಾರೆ ಎಂದು ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಸ್ನೇಹಲ್ ಸುಧಾಕರ ಲೋಖಂಡೆ ವಿರುದ್ಧ ದೆಹಲಿ ಮೂಲದ ಯುವತಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾಧಿಕಾರಿ ಹಾಗೂ ಕಲಬುರಗಿ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದಾರೆ.

ಟ್ವಿಟರ್ ಮೂಲಕ ಮೂಲಕ ಯುವತಿ ದೂರು ನೀಡಿದ್ದು, ಯುವತಿಯ ಪತ್ರ ಸದ್ಯ ವೈರಲ್ ಆಗಿದೆ. ಆದರೆ ಈ ಬಗ್ಗೆ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿಲ್ಲ.

'ಸ್ನೇಹಲ್ ಮದುವೆಯಾಗುವುದಾಗಿ ನಂಬಿಸಿ ನನ್ನೊಂದಿಗೆ ದೈಹಿಕ ಸಂಪರ್ಕ ಬೆಳೆಸಿದ್ದರು. ಜನ್ಮದಿನ ಆಚರಿಸಲು ಹೋಟೆಲ್‌ನಲ್ಲಿ ರೂಮ್ ಬುಕ್ ಮಾಡಿದ್ದರು. ಹಲವು ಬಾರಿ ನಾನು, ಅವರು ರಾತ್ರಿಗಳನ್ನು ಕಳೆದಿದ್ದೇವೆ. ನನಗೆ ಗರ್ಭನಿರೋಧಕ ಮಾತ್ರೆ ನೀಡಿದ್ದರು. ಮದುವೆಯಾಗುವ ಬಗ್ಗೆ ನನ್ನ ತಂದೆ, ತಾಯಿ ಕೇಳಿದಾಗ ಸ್ನೇಹಲ್ ಒಪ್ಪಿದ್ದರು. ಆದರೆ, ದೆಹಲಿಯಿಂದ ವಿಜಯಪುರದ ಇಂಡಿಗೆ ಉಪವಿಭಾಗಾಧಿಕಾರಿಯಾದಾಗ ನನ್ನನ್ನು ದೂರ ಮಾಡಲು ಯತ್ನಿಸಿದರು. ಈ ಬಗ್ಗೆ ಅವರ ತಂದೆ ಸುಧಾಕರ ಅವರಿಗೆ ತಿಳಿಸಿದಾಗ ಅವರು ಮೊದಲು ಒಪ್ಪಿದ್ದರು. ನಂತರ ಅವರೂ ದೂರ ಸರಿಸಲು ಯತ್ನಿಸಿದರು' ಎಂದು ಪತ್ರದಲ್ಲಿ ದೂರಿದ್ದಾರೆ.

ಗೊತ್ತಿಲ್ಲ: ಈ ಬಗ್ಗೆ ಸ್ಪಷ್ಟನೆ ನೀಡಿದ ಪಾಲಿಕೆ ಆಯುಕ್ತ ಸ್ನೇಹಲ್ ಸುಧಾಕರ ಲೋಖಂಡೆ, 'ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೇನೆ. ನನ್ನ ಹೆಸರು ಕೆಡಿಸಲು ಈ ರೀತಿಯಾಗಿ ಮಾಡುತ್ತಿದ್ದಾರೆ. ಆ ಯುವತಿ ಜತೆ ನಾನು ಯಾವುದೇ ಚಾಟಿಂಗ್ ಮಾಡಿಲ್ಲ. ಮಾನನಷ್ಟ ಮೊಕದ್ದಮೆ ಹಾಕುತ್ತೇನೆ. ಆ ಫೋಟೊಗಳು ಎಲ್ಲಿಂದ ತೆಗೆದುಕೊಂಡರೆಂದು ಗೊತ್ತಿಲ್ಲ' ಎಂದಿದ್ದಾರೆ.

ಪೊಲೀಸ್ ಕಮಿಷನರ್ ಡಾ.ವೈ.ಎಸ್. ರವಿಕುಮಾರ್, 'ಯುವತಿ ಪೋಷಕರ ಜತೆ ಕಚೇರಿಗೆ ಬಂದಿದ್ದರು. ಲಿಖಿತ ದೂರು ನೀಡಿಲ್ಲ. ದೆಹಲಿಯಲ್ಲಿ ಭೇಟಿ ಮಾಡಿದ್ದರಿಂದ ಅಲ್ಲಿಯೇ ದೂರು ನೀಡಲು ಹೇಳ ಲಾಗಿತ್ತು. ಈ ಕುರಿತು ಸ್ನೇಹಲ್ ಶುಕ್ರವಾರ ದೂರು ನೀಡಿದ್ದಾರೆ. ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದರು.

ಠಾಣೆಗೆ ಹಾಜರಾಗದ ಆರೋಪಿ ಶ್ರೀಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಜಾಮೀನು ಪಡೆದಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ಸಹಿ ಮಾಡಲು ಜೀವನ್‌ಭೀಮಾನಗರ ಠಾಣೆಗೆ ಶನಿವಾರ ಗೈರಾದ.

ಡ್ರಗ್ಸ್ ಸೇವಿಸಿ ಹೋಟೆಲೊಂದರ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಶ್ರೀಕೃಷ್ಣ ಹಾಗೂ ವಿಷ್ಣು ಭಟ್‌ನನ್ನು ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಶ್ರೀಕೃಷ್ಣ, ಜಾಮೀನು ಪಡೆದುಕೊಂಡು ಜೈಲಿನಿಂದ ಹೊರ ಬಂದಿದ್ದ. 'ಪ್ರತಿ ಶನಿವಾರ ಠಾಣೆಗೆ ಹಾಜರಾಗಿ ಸಹಿ ಮಾಡಬೇಕು' ಎಂಬುದಾಗಿ ನ್ಯಾಯಾಲಯ ಷರತ್ತು ವಿಧಿಸಿತ್ತು. ಆದರೆ, ಶನಿವಾರ ರಾತ್ರಿಯಾದರೂ ಶ್ರೀಕೃಷ್ಣ ಠಾಣೆಗೆ ಬರಲಿಲ್ಲ. ಆತ ಎಲ್ಲಿದ್ದಾನೆ ಎಂಬ ಮಾಹಿತಿಯೂ ಪೊಲೀಸರಿಗೆ ಗೊತ್ತಿಲ್ಲ.

'ಶ್ರೀಕೃಷ್ಣ ಠಾಣೆಗೆ ಬಾರದಿರುವುದು ನ್ಯಾಯಾಲಯದ ಷರತ್ತು ಉಲ್ಲಂಘನೆ ಆಗುತ್ತದೆ. ಯಾವ ಕಾರಣಕ್ಕೆ ಆತ ಠಾಣೆಗೆ ಬಂದಿಲ್ಲವೆಂಬ ಬಗ್ಗೆ ಆತನೇ ತಿಳಿಸಬೇಕು. ಆದರೆ, ಇದುವರೆಗೂ ಆತನಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿ ಗೈರಾದದ್ದನ್ನು ದಾಖಲಿಸಿಕೊಳ್ಳಲಾಗಿದೆ. ಕೆಲ ದಿನ ಕಾದು ನೋಡಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು. ಜಾಮೀನು ರದ್ದು ಮಾಡುವಂತೆ ಕೋರಲಾಗುವುದು' ಎಂದೂ ತಿಳಿಸಿದರು.

ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರಧಾರ ಶ್ರೀಕೃಷ್ಣ ತಲೆಮರೆಸಿಕೊಂಡು ಓಡಾಡುತ್ತಾನೆ. ಆತನ ಜೀವಕ್ಕೆ ಅಪಾಯವಿರುವುದಾಗಿ ವಿಧಾನಸಭೆಯ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಸಹ ಇತ್ತೀಚೆಗೆ ಹೇಳಿದ್ದರು. ಭದ್ರತೆಗೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡವನ್ನು ರಚಿಸಿದರೂ ಶ್ರೀಕಿ ಸುಳಿವು ಮಾತ್ರ ಸಿಕ್ಕಿಲ್ಲ.

ಬಿಟ್‌ಕಾಯಿನ್ ಪ್ರಕರಣ: ಸ್ಪಷ್ಟ ಮಾಹಿತಿಗೆ ಆಗ್ರಹ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಭಾಗಿಯಾಗಿರುವ ಬಿಟ್‌ಕಾಯಿನ್ ಹ್ಯಾಕಿಂಗ್ ಪ್ರಕರಣಕ್ಕೆ ಸಂಬಂಧಿಸಿದ ಸ್ಪಷ್ಟ ಮಾಹಿತಿಗಳನ್ನು ಬಹಿರಂಗಪಡಿಸುವಂತೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ಆಗ್ರಹಿಸಿದೆ.

ಮುಖ್ಯ ಕಾರ್ಯದರ್ಶಿಯವರಿಗೆ ಶುಕ್ರವಾರ ಪತ್ರ ಸಲ್ಲಿಸಿರುವ ಕೆಆರ್‌ಎಸ್ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ, 'ಬಿಟ್‌ಕಾಯಿನ್ ಹ್ಯಾಕಿಂಗ್ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವೇ ಜಾರಿ ನಿರ್ದೇಶನಾಲಯಕ್ಕೆ ವರ್ಗಾಯಿಸಿತ್ತು ಎಂದು ಮುಖ್ಯಮಂತ್ರಿಯವರು ಹೇಳಿಕೆ ನೀಡಿದ್ದರು. ಇಂಟರ್‌ಪೋಲ್‌ಗೂ ಮಾಹಿತಿ ನೀಡಿರುವುದಾಗಿ ಹೇಳಿಕೆ ನೀಡಿದ್ದರು. ಆದರೆ, ಸಾರ್ವಜನಿಕ ವಲಯದಲ್ಲಿ ಲಭ್ಯವಿರುವ ದಾಖಲೆಗಳು ಮತ್ತು ಮುಖ್ಯಮಂತ್ರಿಯವರ ಹೇಳಿಕೆ ನಡುವೆ ವ್ಯತ್ಯಾಸ ಕಂಡುಬರುತ್ತಿದೆ' ಎಂದು ಹೇಳಿದ್ದಾರೆ.

'ಪ್ರಭಾವಿ ವ್ಯಕ್ತಿಗಳು ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ಸಚಿನ್ ಮಾಮನಿ ಎಂಬುವವರು ಪ್ರಧಾನಿಯವರಿಗೆ ಬರೆದಿದ್ದಾರೆ ಎನ್ನಲಾದ ಪತ್ರವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೆಯಾಗುತ್ತಿದೆ. ಈ ಪತ್ರದ ಕುರಿತು ಮುಂದಿನ ಕ್ರಮ ಕೈಗೊಳ್ಳುವಂತೆ ಪ್ರಧಾನಿ ಕಚೇರಿಯಿಂದ ನಿರ್ದೇಶನ ನೀಡಲಾಗಿದೆ ಎಂಬ ಮಾಹಿತಿಯೂ ಹರಿದಾಡುತ್ತಿದೆ. ಈ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಸಚಿನ್ ಮಾಮನಿ ಪತ್ರ ರಾಜ್ಯ ಸರ್ಕಾರದ ಬಳಿ ಇದೆಯೆ? ಈ ಬಗ್ಗೆ ಕ್ರಮಕ್ಕೆ ಪ್ರಧಾನಿ ಕಚೇರಿಯಿಂದ ನಿರ್ದೇಶನ ನೀಡಲಾಗಿದೆಯೆ? ಜಾರಿ ನಿರ್ದೇಶನಾಲಯಕ್ಕೆ ರಾಜ್ಯ ಸರ್ಕಾರ ಸ್ವಯಂಪ್ರೇರಿತವಾಗಿ ಪ್ರಕರಣ ವರ್ಗಾಯಿಸಿತ್ತೆ? ಎಂಬ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಸರ್ಕಾರ ಬರೆದಿರುವ ಪತ್ರಗಳನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಆಟೊ ಪ್ರಯಾಣಿಕರ ಸುಲಿಗೆ

ಬೆಂಗಳೂರು: ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಬಾಡಿಗೆ ನೆಪದಲ್ಲಿ ಪ್ರಯಾಣಿಕರನ್ನು ಆಟೊದಲ್ಲಿ ಹತ್ತಿಸಿಕೊಂಡು ಸುಲಿಗೆ ಮಾಡುತ್ತಿದ್ದ ಆರೋಪದಡಿ ಮನೋಜ್‌ಕುಮಾರ್ (24) ಎಂಬಾತನನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

'ಮನೆಗಳಲ್ಲಿ ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದಿದ್ದ ಮನೋಜ್, ಆಟೊ ಚಾಲಕ ಸೇರಿ ತನ್ನ ಮೂವರು ಸಹಚರರ ಜೊತೆ ಸೇರಿಕೊಂಡು ಕೃತ್ಯ ಎಸಗುತ್ತಿದ್ದ. ಆತನಿಂದ ₹ 7 ಲಕ್ಷ ಮೌಲ್ಯದ ಆಟೊ, 10 ಗ್ರಾಂ ಚಿನ್ನಾಭರಣ ಹಾಗೂ ನಿಕಾನ್ ಕಂಪನಿಯ ಎರಡು ಕ್ಯಾಮೆರಾಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ನ. 8ರಂದು ರಾತ್ರಿ ಬಂದಿದ್ದ ದೂರುದಾರ, ಬೊಮ್ಮನಹಳ್ಳಿಗೆ ಹೋಗಲು ಆಟೊಗಳಿಗೆ ಕೈ ಮಾಡಿದ್ದರು. ಆಟೊ ನಿಲ್ಲಿಸಿದ್ದ ಆರೋಪಿ, ದೂರುದಾರರನ್ನು ಹತ್ತಿಸಿಕೊಂಡಿದ್ದ. ಮಾರ್ಗಮಧ್ಯೆ ಮನೋಜ್ ಹಾಗೂ ಇತರೆ ಮೂವರು ಆರೋಪಿಗಳು ಆಟೊ ಹತ್ತಿದ್ದರು.' 'ದೂರುದಾರರಿಗೆ ಚಾಕು ತೋರಿಸಿದ್ದ ಆರೋಪಿಗಳು, ಚಿನ್ನದ ಸರ ಸುಲಿಗೆ ಮಾಡಿದ್ದರು. ದೂರುದಾರರನ್ನು ರಸ್ತೆಯಲ್ಲೇ ಇಳಿಸಿ, ಆಟೊ ಸಮೇತ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿ. ಸ್ಥಳ ಪರಿಶೀಲನೆ ಹಾಗೂ ಪುರಾವೆಗಳನ್ನು ಸಂಗ್ರಹಿಸಿ ಮನೋಜ್‌ನನ್ನು ಬಂಧಿಸಲಾಗಿದೆ. ಆಟೊ ಚಾಲಕ ಸೇರಿ ನಾಲ್ವರು ತಲೆಮರೆಸಿಕೊಂಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

7 ದ್ವಿಚಕ್ರ ವಾಹನ ಕಳವು: ಬಾಲಕ ವಶಕ್ಕೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪದಡಿ ಬಾಲಕನೊಬ್ಬನನ್ನು ವಶಕ್ಕೆ ಪಡೆದಿರುವ ರಾಜರಾಜೇಶ್ವರಿ ಠಾಣೆ ಪೊಲೀಸರು, ಆತನನ್ನು ಬಾಲ ನ್ಯಾಯ ಮಂಡಳಿ ಸುಪರ್ದಿಗೆ ನೀಡಿದ್ದಾರೆ.

'ಸ್ಥಳೀಯ ನಿವಾಸಿಯಾದ ಬಾಲಕ, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದನೆಂಬ ಮಾಹಿತಿ ಇದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ₹ 3.90 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ 1ಚೆಗೆ ಕಳುವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.



ವಿದ್ಯಾರ್ಥಿವೇತನ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿವೇತನ ವಿತರಿಸಲಾಯಿತು. ಗದಗದ ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ, ಧರ್ಮಸಂಸ್ಥೆಯ ಅಧ್ಯಕ್ಷ ಎಲ್.ರೇವಣಸಿದ್ಧಯ್ಯ, ಎ.ಲಕ್ಷ್ಮಣರಾವ್ ಹಾಗೂ ಇತರರು ಇದ್ದರು.

ಸಿಪಿಎಂ ಸಮ್ಮೇಳನಕ್ಕೆ ಚಾಲನೆ

ಯಲಹಂಕ: 'ದೆಹಲಿಯಲ್ಲಿ ರೈತರು ನಡೆಸಿದ ಸುದೀರ್ಘ ಹೋರಾಟಕ್ಕೆ ಕೇಂದ್ರ ಮಣಿದು, ಕೃಷಿ ಕಾಯಿದೆಗಳನ್ನು ವಾಪಸ್ ಪಡೆಯುವ ಘೋಷಣೆ ಮಾಡಿತು. ಇದು, ರೈತ-ಕಾರ್ಮಿಕರ ಹೋರಾಟಕ್ಕೆ ಸಿಕ್ಕ ಐತಿಹಾಸಿಕ ಜಯ' ಎಂದು ಸಿಪಿಐಎಂನ ರಾಜ್ಯ ಮುಖಂಡ ಕೆ.ಎನ್.ಉಮೇಶ್ ಹೇಳಿದರು.

ಯಲಹಂಕ ಉಪನಗರದಲ್ಲಿ ಶನಿವಾರ ನಡೆದ ಸಿಪಿಐಎಂನ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ದೇಶದ ಕಾರ್ಪೊರೇಟ್ ಕಂಪನಿಗಳ ಪರ ಹಾಗೂ ರೈತರ ವಿರುದ್ಧ ತಂದಿದ್ದ ಕರಾಳ ಕಾಯ್ದೆಗಳು ಕೃಷಿ ಬಿಕ್ಕಟ್ಟು, ಆಹಾರದ ಅಭಾವ ಮತ್ತು ಬೆಲೆ ಏರಿಕೆಗೆ ಪೂರಕವಾಗಿದ್ದವು. ಇವುಗಳ ರದ್ದಿಗೆ ನಡೆಸಿದ ಐತಿಹಾಸಿಕ ಹೋರಾಟ ದೇಶಕ್ಕೆ ಮಾದರಿ' ಎಂದರು.

ಪಕ್ಷದ ಮುಖಂಡ ಎಚ್.ಎನ್. ಗೋಪಾಲಗೌಡ ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಮಾತನಾಡಿದರು. ಮುಖಂಡರಾದ ಮೀನಾಕ್ಷಿ ಸುಂದರಂ, ಗೋಪಾಲಕೃಷ್ಣ ಅರಳಹಳ್ಳಿ, ಗೌರಮ್ಮ, ಲೀಲಾವತಿ ಇತರರು ಭಾಗವಹಿಸಿದ್ದರು.

ಕೋಟಿ ವಂಚನೆ: ನಕಲಿ 'ಉಪ ಆಯುಕ್ತ' ಬಂಧನ



ರಾಘವೇಂದ್ರ

ಬೆಂಗಳೂರು: 'ನಾನೊಬ್ಬ ಕೇಂದ್ರ ಸರ್ಕಾರದ ಸರ್ವೆ ಇಲಾಖೆಯ ಉಪ ಆಯುಕ್ತ' ಎಂದು ಹೇಳಿಕೊಂಡು ಸರ್ಕಾರಿ ಹುದ್ದೆ ಆಕಾಂಕ್ಷಿಗಳಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿದ್ದ ಆರೋಪದಡಿ ರಾಘವೇಂದ್ರ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕುಂದಾಪುರದ ರಾಘವೇಂದ್ರ, ಉಡುಪಿಯ ಹೋಟೆಲೊಂದರಲ್ಲಿ ಗ್ರಾಹಕರಿಗೆ ಆಹಾರ ಪೂರೈಸುವ ಕೆಲಸ ಮಾಡುತ್ತಿದ್ದ. ಅಲ್ಲಿಯ ಕೆಲಸ ಬಿಟ್ಟು ಕೆಲ ವರ್ಷಗಳ ಹಿಂದಷ್ಟೇ ನಗರಕ್ಕೆ ಬಂದಿದ್ದ. ಭಾರತ ಸರ್ಕಾರದ ಉಪ ಆಯುಕ್ತನೆಂದು ಹೇಳಿಕೊಂಡು ಸುತ್ತಾಡುತ್ತಿದ್ದ. ತನ್ನ ಕಾರಿನ ಮೇಲೂ 'ಭಾರತ ಸರ್ಕಾರ' ಎಂಬುದಾಗಿ ಬರೆಸಿದ್ದ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉನ್ನತ ಅಧಿಕಾರಿಗಳು ತನ್ನ ಪರಿಚಯಸ್ಥರೆಂದು ಆರೋಪಿ ಹೇಳುತ್ತಿದ್ದ. ವಿವಿಧ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ನೂರಾರು ಆಕಾಂಕ್ಷಿಗಳಿಂದ ಹಣ ಪಡೆದಿದ್ದ. ಆದರೆ, ಯಾರಿಗೂ ಕೆಲಸ ಕೊಡಿಸಿರಲಿಲ್ಲ. ಹಣವನ್ನೂ ವಾಪಸು ನೀಡಿರಲಿಲ್ಲ. ನೊಂದ ಕೆಲ ಅಭ್ಯರ್ಥಿಗಳು, ಜೆ.ಪಿ. ನಗರ ಠಾಣೆಗೆ ದೂರು ಸಹ ನೀಡಿದ್ದರು' ಎಂದೂ ತಿಳಿಸಿದರು.

'ವಂಚನೆ ಹಣದಲ್ಲೇ ಆರೋಪಿ, ಜೆ.ಪಿ. ನಗರದಲ್ಲಿ ಮನೆ ಖರೀದಿಸಿ ವಾಸವಿದ್ದ. ತುಮಕೂರಿನಲ್ಲಿ ಹೋಟೆಲ್, ಕೆಂಗೇರಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಫ್ಲ್ಯಾಟ್ ಹಾಗೂ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ಖರೀದಿಸಿದ್ದ. ಆತನ ಆಸ್ತಿಯ ಪಟ್ಟಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ತಿಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನ್ಯಾಯಾಲಯದಲ್ಲಿ ಮೊಕದ್ದಮೆ: 'ಕೊಟ್ಟ ಮಾತಿನಂತೆ ಆರೋಪಿ ಕೆಲಸ ಕೊಡಿಸಿರಲಿಲ್ಲ. ನೊಂದ ಅಭ್ಯರ್ಥಿಗಳು ಆತನ ವರ್ತನೆಯನ್ನು ಪ್ರಶ್ನಿಸಿದ್ದರು. ಹಣ ವಾಪಸು ಕೊಡುವಂತೆ ಒತ್ತಾಯಿಸುತ್ತಿದ್ದರು. ಅಂಥ ಅಭ್ಯರ್ಥಿಗಳ ವಿರುದ್ಧವೇ ಚೆಕ್ ಬೌನ್ಸ್ ಆರೋಪದಡಿ ನ್ಯಾಯಾಲಯದಲ್ಲಿ ಆರೋಪಿ ರಾಘವೇಂದ್ರ ಮೊಕದ್ದಮೆ ಹೂಡುತ್ತಿದ್ದ' ಎಂದೂ ತಿಳಿಸಿದರು.

'ಪ್ರತಿ ಹುದ್ದೆಗೆ ₹ 20 ಲಕ್ಷ ನಿಗದಿ'

'ರಾಜ್ಯದ ವಿವಿಧೆಡೆ ಸಂಚರಿಸುತ್ತಿದ್ದ ಆರೋಪಿ, ಆಕಾಂಕ್ಷಿಗಳಿಗೆ ಸರ್ಕಾರಿ ಕೆಲಸ ಕೊಡಿಸುವ ಭರವಸೆ ನೀಡುತ್ತಿದ್ದ. ಅಭ್ಯರ್ಥಿಗಳಿಂದ ಒಂದು ಹುದ್ದೆಗೆ ₹ 20 ಲಕ್ಷ ಪಡೆಯುತ್ತಿದ್ದ. ನೇಮಕಾತಿಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ಉತ್ತೀರ್ಣ ಮಾಡಿಸಿ, ಕೆಲಸದ ನೇಮಕಾತಿ ಪತ್ರ ಕೊಡಿಸುವುದಾಗಿ ಹೇಳುತ್ತಿದ್ದ. ಛಾಪಾಕಾಗದ ಹಾಗೂ ಖಾಲಿ ಚೆಕ್‌ಗಳ ಮೇಲೂ ಅಭ್ಯರ್ಥಿಗಳ ಸಹಿ ಪಡೆಯುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಬಹುಪತ್ನಿಯರು': 'ಆರೋಪಿ ರಾಘವೇಂದ್ರನಿಗೆ ನಾಲ್ವರು ಇರುವ ಮಾಹಿತಿ ಇದ್ದು, ಅವರ ಹೆಸರಲ್ಲೂ ಆಸ್ತಿ ಮಾಡಿರುವ ಸಾಧ್ಯತೆ ಇದೆ' ಎಂದರು.

ಆಸ್ತಿ ಮಾರಾಟಕ್ಕೆ ಸಹಿ ಹಾಕದಿದ್ದಕ್ಕೆ ಕೃತ್ಯ, ಆಭರಣ ಕೊಡಿಸುವ ಸೋಗಿನಲ್ಲಿ ಅಪಹರಣ

ಸೈನೆಡ್ ತಿನ್ನಿಸಿ ಕೊಲೆ: ಮೃತದೇಹಕ್ಕಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿತ್ರಾರ್ಜಿತ ಆಸ್ತಿ ಮಾರಾಟಕ್ಕೆ ಸಹಿ ಹಾಕಲಿಲ್ಲವೆಂಬ ಕಾರಣಕ್ಕೆ ಸೀತಾ (47) ಎಂಬುವರನ್ನು ಸೈನೆಡ್ ತಿನ್ನಿಸಿ ಕೊಂದಿದ್ದ ಪ್ರಕರಣ ಭೇದಿಸಿರುವ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು, ಇಬ್ಬರು ಆರೋಪಿಗಳನ್ನು ಸೆರೆ ಹಿಡಿದಿದ್ದಾರೆ.

'ಮಂತ್ರಾಲಯದ ನಿವಾಸಿಗಳಾದ ನೂರ್ ಅಹಮ್ಮದ್ ಹಾಗೂ ಸತ್ಯ ಬಂಧಿತರು. ಅವರಿಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜಾಜಿನಗರದಲ್ಲಿ ವಾಸವಿದ್ದ ಸೀತಾ, ಮನೆಯಿಂದ ಮಾರ್ಚ್ 26ರಂದು ನಾಪತ್ತೆ ಆಗಿದ್ದರು. ಈ ಬಗ್ಗೆ ಅವರ ತಮ್ಮ ವೆಂಕಟೇಶ್ ಆಚಾರ್ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಸೀತಾ ಕೊಲೆಯಾಗಿರುವುದು ತಿಳಿಯಿತು' ಎಂದೂ ಹೇಳಿದರು.

ಜಾಗ ಖರೀದಿಸಿದ್ದ ಆರೋಪಿ: 'ಸೀತಾ ಅವರಿಗೆ ಸೇರಿದ್ದ ಪಿತ್ರಾರ್ಜಿತ ಜಾಗ ಮಂತ್ರಾಲಯದಲ್ಲಿದೆ. ಸದ್ಯ ಅಲ್ಲಿ ತಮ್ಮ ವೆಂಕಟೇಶ್ ಇದ್ದಾರೆ. ಅದೇ ಜಾಗವನ್ನು ವೆಂಕಟೇಶ್, ಆರೋಪಿ ನೂರ್ ಅಹಮ್ಮದ್‌ಗೆ ಮಾರಿದ್ದ. ಜಾಗ ನೋಂದಣಿ ಮಾಡಲು ಸೀತಾ ಸಹಿ ಬೇಕಿತ್ತು. ಆದರೆ, ಅವರು ಸಹಿ ಮಾಡಲು ನಿರಾಕರಿಸಿದ್ದರು' ಎಂದೂ ಅಧಿಕಾರಿ ಹೇಳಿದರು.

'ಸಹಿ ಹಾಕುವಂತೆ ವೆಂಕಟೇಶ್ ಕೂಡಾ ಅಕ್ಕನ ಮೇಲೆ ಒತ್ತಡ ಹೇರಿದ್ದರು. ಜಾಗ ಖರೀದಿಸಿದ್ದ ನೂರ್ ಅಹಮ್ಮದ್ ಸಹ ಹಲವು ಬಾರಿ ಸೀತಾ ಅವರನ್ನು ಭೇಟಿಯಾಗಿದ್ದ. ಸಹಿ ಹಾಕುವಂತೆ ಬೆದರಿಸಿದ್ದ' ಎಂದೂ ತಿಳಿಸಿದರು.

ಆಭರಣ ಖರೀದಿ ನೆಪದಲ್ಲಿ ಅಪಹರಣ: 'ಸೀತಾ ಜೀವಂತವಿದ್ದರೆ ಸಹಿ ಹಾಕುವುದಿಲ್ಲವೆಂದು ತಿಳಿದ ಆರೋಪಿ ನೂರ್ ಅಹಮ್ಮದ್, ಕೊಲೆ ಮಾಡಲು ಸಂಚು ರೂಪಿಸಿದ್ದ. ಅದಕ್ಕೆ ಮೆಂಟಲ್ ರಘು ಹಾಗೂ ಕುಮಾರ್ ಸಹಾಯ ಪಡೆದಿದ್ದ' ಎಂದೂ ಹೇಳಿದರು.

'ಆಭರಣ ಕೊಡಿಸುವುದಾಗಿ ಹೇಳಿದ್ದ ಆರೋಪಿಗಳು, ಸೀತಾ ಅವರನ್ನು ಕಾರಿನಲ್ಲಿ ಹತ್ತಿಸಿಕೊಂಡು ತುಮಕೂರು ರಸ್ತೆಗೆ ಕರೆದೊಯ್ದಿದ್ದರು. ಕಾರಿನಲ್ಲೇ ಒತ್ತಾಯದಿಂದ ಸೀತಾ ಅವರಿಗೆ ಸೈನೆಡ್ ತಿನ್ನಿಸಿ ಕೊಂದಿದ್ದರು. ಈ ಬಗ್ಗೆ ಆರೋಪಿಗಳಿಬ್ಬರು ತಪ್ಪೊಪ್ಪಿಕೊಂಡಿದ್ದಾರೆ. ಸೀತಾ ಮೃತದೇಹವನ್ನು ಕಾರಿನಲ್ಲಿ ಹೊಸಪೇಟೆಗೆ ತೆಗೆದುಕೊಂಡು ಹೋಗಿ ನದಿಯಲ್ಲಿ ಎಸೆದಿರುವುದಾಗಿ ಆರೋಪಿಗಳು ಹೇಳುತ್ತಿದ್ದಾರೆ. ಇದುವರೆಗೂ ಮೃತದೇಹ ಸಿಕ್ಕಿಲ್ಲ. ವಿಶೇಷ ತಂಡವೊಂದು ಈಗಾಗಲೇ ಹೊಸಪೇಟೆಗೆ ಹೋಗಿದ್ದು, ಮೃತದೇಹಕ್ಕಾಗಿ ಹುಡುಕಾಟ ನಡೆಸುತ್ತಿದೆ' ಎಂದೂ ಅಧಿಕಾರಿ ಮಾಹಿತಿ ನೀಡಿದರು.

'ಇಬ್ಬರು ಆರೋಪಿಗಳ ಸಾವು'

'ಕೊಲೆಗೆ ಸಹಕರಿಸಿದ್ದ ಆರೋಪದ ಹೊಂದಿರುವ ಮೆಂಟಲ್ ರಘು ಹಾಗೂ ಕುಮಾರ್ ಕೆಲ ತಿಂಗಳ ಹಿಂದೆಯೇ ಮೃತಪಟ್ಟಿದ್ದಾರೆ. ಅನಾರೋಗ್ಯದಿಂದಾಗಿ ಅವರು ತೀರಿಕೊಂಡಿರುವ ಮಾಹಿತಿ ಇದೆ. ಅವರ ಸಾವಿನ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಮ್ಮನ ಪಾತ್ರದ ಬಗ್ಗೆ ತನಿಖೆ'

'ಇದೊಂದು ಸುಪಾರಿ ಹತ್ಯೆಯೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಕ್ಕ ಕಾಣೆಯಾದ ಬಗ್ಗೆ ದೂರು ನೀಡಿದ್ದ ತಮ್ಮ ವೆಂಕಟೇಶ್ ಮೇಲೆಯೂ ಕೆಲ ಅನುಮಾನಗಳಿವೆ. ವಿಚಾರಣೆಯಿಂದಲೇ ನಿಖರ ಮಾಹಿತಿ ಸಿಗಬೇಕಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಐದಕ್ಕೂ ಹೆಚ್ಚು ಬಾರಿ ಕಚ್ಚಿದ ಹಾವು; ವೃದ್ಧ ಸಾವು

ವಡಗೇರಾ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗೋಡಿಹಾಳ ಗ್ರಾಮದಲ್ಲಿ ಶನಿವಾರ ಹಾವು ಐದಕ್ಕೂ ಹೆಚ್ಚು ಬಾರಿ ಕಚ್ಚಿದ್ದರಿಂದ ಗ್ರಾಮಸ್ಥ ಬಸವರಾಜ ಪೂಜಾರಿ (65) ಮೃತಪಟ್ಟಿದ್ದಾರೆ. ಹಾವನ್ನು ಕೈಯಲ್ಲಿ ಹಿಡಿದು ದೂರಕ್ಕೆ ಬಿಡಲು ಹೋಗುತ್ತಿದ್ದ ವೇಳೆ ಸತತ ಕಚ್ಚಿದರೂ ಬಿಡದ ಅವರು ಅದನ್ನು ಹಿಡಿದುಕೊಂಡೇ ಸಾವನ್ನಪ್ಪಿದ್ದಾರೆ. 'ಬಸವರಾಜ ಪೂಜಾರಿ ಅವರು 300ಕ್ಕೂ ಹೆಚ್ಚು ಹಾವುಗಳನ್ನು ಹೀಗೆ ರಕ್ಷಿಸಿದ್ದರು. ಶನಿವಾರವೂ ಹಾವು ಹಿಡಿದಿದ್ದಾರೆ. ಅವರ ಹಿಡಿತದಿಂದ ತಪ್ಪಿಸಿ-ಕೊಳ್ಳಲು ಪ್ರಯತ್ನಿಸಿದ ಹಾವು ಪದೇ ಪದೇ ಕಚ್ಚಿದೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ತನಿಖೆಗೆ ಸದನ ಸಮಿತಿ ರಚಿಸಲಿ

ಶೇಕಡ 40 ಲಂಚ ಪ್ರಕರಣ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ, ಬಿಬಿಎಂಪಿ ಕಾಮಗಾರಿಗಳಲ್ಲಿ ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂಬ ಆರೋಪದ ತನಿಖೆಗೆ ವಿಧಾನಮಂಡಲದ ಜಂಟಿ ಸದನ ಸಮಿತಿ ರಚಿಸಬೇಕು' ಎಂದು ರಾಜ್ಯ ಸರ್ಕಾರವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.


ಡಿ.ಕೆ.ಶಿವಕುಮಾರ್

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಈ ಆರೋಪದ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಏನು ವಿಚಾರಣೆ ಮಾಡಲು ಸಾಧ್ಯ? ಸುಪ್ರೀಂ ಕೋರ್ಟ್ ಹಾಲಿ ನ್ಯಾಯಮೂರ್ತಿಯ ನೇತೃತ್ವದಲ್ಲಿ ವಿಚಾರಣೆ ನಡೆಸಬೇಕು ಎಂಬ ನಮ್ಮ ಬೇಡಿಕೆಯನ್ನು ಒಪ್ಪಲು ಸರ್ಕಾರ ಸಿದ್ಧವಿಲ್ಲ. ಹೀಗಾಗಿ, ಸದನ ಸಮಿತಿಯಿಂದ ತನಿಖೆ ಮಾಡಿಸಲಿ. ಯಾರು, ಯಾರು, ಏನು ಮಾಡಿದ್ದಾರೆ ಎನ್ನುವುದು ಬಹಿರಂಗ ಆಗಲಿ' ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಸರ್ಕಾರದ ಅವಧಿಯ ಟೆಂಡರ್‌ಗಳನ್ನೂ ಸೇರಿಸಿ ವಿಚಾರಣೆ ನಡೆಸಲಾಗುವುದು' ಎಂಬ ಮುಖ್ಯಮಂತ್ರಿ ಹೇಳಿಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಬೇಡ ಅಂದವರು ಯಾರು? ಕಳೆದ 10 ವರ್ಷಗಳದ್ದನ್ನೂ ಸೇರಿಸಿ ತನಿಖೆ ನಡೆಸಲಿ' ಎಂದು ಹೇಳಿದರು.

'ಸಾರ್ವಜನಿಕರ ಹಣವನ್ನು ಯಾರೇ ದುರುಪಯೋಗ ಮಾಡಿದ್ದರೂ ತಪ್ಪೇ? ಅದು ಬಿಜೆಪಿಯವರು ಇರಲಿ, ಕಾಂಗ್ರೆಸ್‌ನವರು ಇರಲಿ, ಜೆಡಿಎಸ್‌ನವರೇ ಇರಲಿ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿ. ಬಿಜೆಪಿಯವರ ನೇತೃತ್ವದಲ್ಲೇ ಸದನ ಸಮಿತಿ ರಚನೆಯಾಗಲಿ. ಅವರ ಪಕ್ಷದವರನ್ನೇ ಅಧ್ಯಕ್ಷರನ್ನಾಗಿ ಮಾಡಲಿ' ಎಂದು ಸಲಹೆ ನೀಡಿದರು.

'ಪರ್ಸಂಟೇಜ್ ವಿರುದ್ಧ ಹೋರಾಟವನ್ನು ಖಂಡಿತಾ ಮುಂದುವರಿಸುತ್ತೇವೆ. ಪ್ರಧಾನಿಗೆ ಪತ್ರ ಬರೆದಿರುವ ಗುತ್ತಿಗೆದಾರರು ದಡ್ಡರಲ್ಲ. ವಿವಿಧ ಇಲಾಖೆಗಳ ಕೆಲಸ ಮಾಡಿಸುವ ಒಂದು ಲಕ್ಷ ಜನ ಇದ್ದಾರೆ. ಗುತ್ತಿಗೆದಾರರು ಅವರಿಗೆ ಆಗಿರುವ ನೋವು ಹೇಳಿಕೊಂಡಿದ್ದಾರೆ. ಹೀಗಾಗಿ ಅವರ ಆರೋಪದ ಬಗ್ಗೆ ಸದನ ಸಮಿತಿ ವಿಚಾರಣೆ ನಡೆಸಲಿ' ಎಂದರು.

'ನಮ್ಮ ಅವಧಿಯದ್ದೂ ತನಿಖೆ ಆಗಲಿ'

ಮೈಸೂರು: 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿನ ಟೆಂಡರ್‌ಗಳ ಬಗ್ಗೆಯೂ ತನಿಖೆ ನಡೆಯಲಿ. ನಮ್ಮ ಆಕ್ಷೇಪ ಏನೂ ಇಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಹೇಳಿದರು.


ಸಿದ್ದರಾಮಯ್ಯ

ಸುದ್ದಿಗಾರರೊಂದಿಗೆ ಮಾತನಾಡಿ, 'ಉಪ್ಪು ತಿಂದವರು ನೀರು ಕುಡಿಯಲೇಬೇಕು. ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆಯಾಗಲಿ. ಅವರು ಯಾವುದೇ ಪಕ್ಷದವರಾಗಿರಲಿ' ಎಂದು ಮುಖ್ಯಮಂತ್ರಿ ಹೇಳಿಕೆಗೆ ತಿರುಗೇಟು ನೀಡಿದರು.

'ಶೇ 40 ಕಮಿಷನ್ ಆರೋಪ ಮಾಡಿದ್ದು ನಾನಲ್ಲ. ಗುತ್ತಿಗೆದಾರರ ಸಂಘ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದೆ. ಈ ಬಗ್ಗೆ ಮೊದಲು ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾಗಿದೆ. ಸಂಘದ ಅಧ್ಯಕ್ಷ ಕೆಂಪಣ್ಣ ಪತ್ರಿಕಾಗೋಷ್ಠಿ ಕೂಡಾ ನಡೆಸಿದ್ದಾರೆ. ಆ ಹೇಳಿಕೆ ಆಧರಿಸಿ ನಾನು ರಾಜ್ಯಪಾಲರಿಗೆ ದೂರು ಕೊಟ್ಟಿದ್ದೇನೆ' ಎಂದರು.

'ಯಾವ ಇಲಾಖೆ ವಿರುದ್ಧ ಭ್ರಷ್ಟಾಚಾರದ ಆರೋಪ ಇದೆಯೋ ಅದೇ ಇಲಾಖೆ ಅಧಿಕಾರಿಗಳನ್ನು ತನಿಖೆಗೆ ನೇಮಿಸಿದರೆ ಹೇಗೆ? ಅದರಿಂದ ಸತ್ಯ ಹೊರಬರಲು ಸಾಧ್ಯವೇ? ಪರ್ಸಂಟೇಜ್ ತೆಗೆದುಕೊಂಡಿಲ್ಲ ಎಂದಾದರೆ ಕಾರ್ಯದರ್ಶಿಯಿಂದ ತನಿಖೆ ಮಾಡಿಸುವುದಾಗಿ ಮುಖ್ಯಮಂತ್ರಿ ಏಕೆ ಹೇಳಬೇಕಿತ್ತು' ಎಂದು ಪ್ರಶ್ನಿಸಿದರು. 'ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅವರ ನೇತೃತ್ವದಲ್ಲೇ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಮತ್ತೊಮ್ಮೆ ಆಗ್ರಹಿಸಿದರು.

ರುಪ್ಸ ಮನವಿಗೆ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಸ್ಪಂದನೆ

ಶಾಲಾ ಕಟ್ಟಡ 'ಸುಸ್ಥಿರತೆ': ವಿನಾಯಿತಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ಸುಸ್ಥಿರತೆ' ಪ್ರಮಾಣಪತ್ರ ಪಡೆಯಬೇಕೆಂಬ ನಿಯಮದಿಂದ ಹಳೆಯ ಖಾಸಗಿ ಅನುದಾನಿತ, ಅನುದಾನರಹಿತ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಹೊರಗಿಡಬೇಕು' ಎಂಬ ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದ (ರುಪ್ಸ) ಮನವಿಗೆ ಸ್ಪಂದಿಸಿದ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಈ ಬಗ್ಗೆ ತಕ್ಷಣ ಗಮನಹರಿಸಿ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಸುಸ್ಥಿರತೆ ಪ್ರಮಾಣಪತ್ರ ಪಡೆಯಲು ಹಳೆ ಕಟ್ಟಡದ ಮೌಲ್ಯದ ಶೇ 0.5ರಷ್ಟನ್ನು ಶುಲ್ಕವಾಗಿ ಕಟ್ಟಬೇಕು ಎಂಬುದು ಸೇರಿ ಕೆಲ ನಿಯಮಗಳನ್ನು ವಿಧಿಸಿ ಇಲಾಖೆ ಇತ್ತೀಚೆಗೆ ಸುತ್ತೋಲೆ ಹೊರಡಿಸಿತ್ತು. ಅದನ್ನು ವಿರೋಧಿಸಿ ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ನೇತೃತ್ವದಲ್ಲಿ ಪದಾಧಿಕಾರಿಗಳು


ನಮ್ಮ ಬೇಡಿಕೆಗೆ ಲೋಕೋಪಯೋಗಿ ಸಚಿವರು ಸ್ಪಂದಿಸಿದ್ದಾರೆ. ಹೀಗಾಗಿ, ಸುತ್ತೋಲೆ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಬೇಕೆಂಬ ನಿಲುವಿನಿಂದ ಹಿಂದೆ ಸರಿದಿದ್ದೇವೆ
ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸ

ಸಚಿವರನ್ನು ಭೇಟಿಯಾಗಿದ್ದರು. ಸಚಿವರ ಭೇಟಿ ಬಳಿಕ ಮಾತನಾಡಿದ ಲೋಕೇಶ್ ತಾಳಿಕಟ್ಟೆ, 'ಲೋಕೋಪಯೋಗಿ ಇಲಾಖೆ ವಿಧಿಸಿರುವ ಕಠಿಣ ನಿಯಮಗಳನ್ನು ಪೂರೈಸಲು ಸಾಧ್ಯವೇ ಇಲ್ಲ. ಸರ್ಕಾರ ವಿನಾಯಿತಿ ನೀಡದಿದ್ದರೆ ರಾಜ್ಯದಲ್ಲಿರುವ ಶೇ 80ರಷ್ಟು ಶಾಲೆಗಳು ಮುಚ್ಚಬೇಕಾದೀತು ಎಂದೂ ಸಚಿವರಿಗೆ ವಿವರಿಸಿದ್ದೇವೆ' ಎಂದರು.

'ರಾಜ್ಯದಲ್ಲಿರುವ ಸುಮಾರು 20 ಸಾವಿರ ಶಾಲೆಗಳು ಹಳೆಯ ಕಟ್ಟಡದಲ್ಲಿವೆ. ಡೀಣಗೆ ಪಡೆದು ಕಂದಾಯ ಭೂಮಿಯಲ್ಲಿ ಹಲವು ವರ್ಷಗಳ ಹಿಂದೆ ಈ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಅಂಥ ಶಾಲೆಗಳಿಗೆ ಕಟ್ಟಡ ನಕ್ಷೆ, ಸ್ವಾಧೀನಾನುಭವ ಪ್ರಮಾಣಪತ್ರ ಕೇಳಿದರೆ ಹೇಗೆ ಕೊಡಲು ಸಾಧ್ಯ?' ಎಂದು ಪ್ರಶ್ನಿಸಿದರು.

'ಸುಪ್ರೀಂಕೋರ್ಟ್ ಆದೇಶ ಮತ್ತು ಶಿಕ್ಷಣ ಇಲಾಖೆ ನಿರ್ದೇಶನ ನೀಡಿದ್ದರಿಂದ ಈ ಸುತ್ತೋಲೆ ಹೊರಡಿಸಲಾಗಿದೆ ಎಂದು ಸಚಿವರಿಗೆ ಕಾರ್ಯದರ್ಶಿ ಮಾಹಿತಿ ನೀಡಿದರು. ಆದರೆ, ಸಚಿವರು, ಹಲವು ವರ್ಷಗಳ ಹಿಂದೆ ನಿರ್ಮಾಣವಾಗಿರುವ ಹಳೆ ಕಟ್ಟಡಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಗಮನಿಸಿ ಶಾಲೆಗಳನ್ನು ನಡೆಸುತ್ತಿವೆ. ಅಂಥ ಶಾಲೆಗಳಿಗೆ ಸಮಸ್ಯೆ ಆಗಬಾರದು. ಹೀಗಾಗಿ, ಹಳೆ ಕಟ್ಟಡಗಳ ವಿಚಾರದಲ್ಲಿ ಸ್ಪಷ್ಟವಾದ ಆದೇಶ ಹೊರಡಿಸಬೇಕು ಎಂದು ಸೂಚಿಸಿದ್ದಾರೆ' ಎಂದರು.

ಸಚಿವರ ಸ್ಪಂದನೆ ಹಿನ್ನೆಲೆಯಲ್ಲಿ ಸುತ್ತೋಲೆ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಬೇಕೆಂಬ ನಿಲುವಿನಿಂದ ಹಿಂದೆ ಸರಿದಿದ್ದೇವೆ ಎಂದು ಲೋಕೇಶ್ ತಾಳಿಕಟ್ಟೆ ತಿಳಿಸಿದರು.

ಇಂಗ್ಲಿಷ್ ವರ್ಣಾಕ್ಷರ ಬಾರದ ಇಬ್ಬರು ಶಿಕ್ಷಕರ ಅಮಾನತು

ಸಿಂದಗಿ: 'ಇಂಗ್ಲಿಷ್ ವರ್ಣಾಕ್ಷರ ಬರೆಯಲು ಬಾರದ ಕಾರಣ ತಾಲ್ಲೂಕಿನ ಗುಂದಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಸಹ- ಶಿಕ್ಷಕರನ್ನು ಶುಕ್ರವಾರ ಅಮಾನತುಗೊಳಿಸಲಾಗಿದೆ.

ಸಹ-ಶಿಕ್ಷಕ ದೌಲತ್ ದೇವಕುಳೆ ಮತ್ತು ಸಹ- ಶಿಕ್ಷಕಿ ಎಂ.ಎಸ್. ರಾಘವೇಂದ್ರರಾವ ಅಮಾನತುಗೊಂಡವರು. ಇಂಗ್ಲಿಷ್ ವರ್ಣಾಕ್ಷರಗಳನ್ನು ತಪ್ಪಾಗಿ ಬರೆದು, ಅದನ್ನೇ ಸರಿ ಎಂದು ಮಕ್ಕಳಿಗೆ ಹೇಳುತ್ತಿದ್ದರು. ಇದನ್ನು ಪ್ರಶ್ನಿಸಿದ ಪಾಲಕರು, ಗ್ರಾಮಸ್ಥರ ಜೊತೆ ವಾಗ್ವಾದ ಮಾಡಿದ್ದರು. ಈ ಕುರಿತ ವಿಡಿಯೊ ವೈರಲ್ ಆಗಿತ್ತು.

ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಲು ಕಾರಣಕರ್ತರಾಗಿದ್ದೀರಿ. ಇವರ ಮೇಲೆ ಶಿಸ್ತುಕ್ರಮ ಜರುಗಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆಲಗಿ ಅವರು ವರದಿ ಸಲ್ಲಿಸಿದ್ದರು. ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಬಿಡಿಎನ 6 ನಿವೇಶನಗಳ ಒಡೆಯ • ₹29.15 ಕೋಟಿ ಅಕ್ರಮ ಆಸ್ತಿ

ವಾಸುದೇವ್ ಬಳಿ ₹30.65 ಕೋಟಿ ಆಸ್ತಿ ಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆರು ನಿವೇಶನ ಸೇರಿದಂತೆ 50ಕ್ಕೂ ಹೆಚ್ಚು ಸ್ಥಿರಾಸ್ತಿಗಳನ್ನು ಹೊಂದಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ನಿರ್ಮಿತಿ ಕೇಂದ್ರದ ನಿವೃತ್ತ ಯೋಜನಾಧಿಕಾರಿ ವಾಸುದೇವ್ ಆರ್. ಎನ್. ಬಳಿ ₹ 30.65 ಕೋಟಿ ಆಸ್ತಿ ಇರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ.

ಈ ಅಧಿಕಾರಿ ತಮ್ಮ ಸೇವಾವಧಿಯಲ್ಲಿ ವೇತನ ಮತ್ತು ಇತರ ಅಧಿಕೃತ ಮೂಲಗಳಿಂದ ₹ 1.5 ಕೋಟಿ ಆದಾಯ ಗಳಿಸಿದ್ದರು. ಅವರ


ವಾಸುದೇವ್ ಆರ್‌.ಎನ್.

ಬಳಿ ₹ 29.15 ಕೋಟಿ ಯಷ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ. ಆದಾಯ ಮೂಲಕ್ಕಿಂತ ಶೇ 1,408ರಷ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ ಎಂಬುದಾಗಿ ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ನಿವೃತ್ತ ಅಧಿಕಾರಿಗೆ ಸಂಬಂಧಿಸಿದಂತೆ ಬುಧವಾರ ವಿವಿಧೆಡೆ ದಾಳಿಮಾಡಿದ್ದ ಎಸಿಬಿ, ಶೋಧ ಆರಂಭಿಸಿತ್ತು. ಶನಿವಾರ ಶೋಧ ಪೂರ್ಣಗೊಂಡಿದ್ದು, ವಾಸುದೇವ್ ಅವರನ್ನು ಬಂಧಿಸಲಾಗಿದೆ.

ಕೆಂಗೇರಿಯಲ್ಲಿ ಎರಡು, ನೆಲಮಂಗಲ ತಾಲ್ಲೂಕಿನ ಸೋಂಪುರದಲ್ಲಿ ಎರಡು ಮತ್ತು ಮಲ್ಲೇಶ್ವರದ ಒಂದು ಸ್ಥಳದಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿದ್ದು, 28 ಮನೆಗಳಿವೆ. ಪತ್ನಿ ಲಲಿತಾ ಹೆಸರಿನಲ್ಲಿ ಕೆಂಗೇರಿ ಉಪ ನಗರದಲ್ಲಿ ಎರಡು ಮನೆ ಖರೀದಿಸಿದ್ದರು. ಎರಡು ಫ್ಲ್ಯಾಟ್‌ಗಳ ಖರೀದಿಗೆ ಕೋಟ್ಯಂತರ ರೂಪಾಯಿ ಮುಂಗಡ ನೀಡಿರುವುದೂ ಪತ್ತೆಯಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿವಿಧ ಬಡಾವಣೆಗಳಲ್ಲಿ ಆರು ನಿವೇಶನಗಳನ್ನು ವಾಸುದೇವ್ ಪಡೆದಿರುವುದು ಪತ್ತೆಯಾಗಿದೆ. ಒಟ್ಟು 19 ನಿವೇಶನಗಳು, ನೆಲಮಂಗಲ ತಾಲ್ಲೂಕಿನ ವಿವಿಧೆಡೆ ಇಬ್ಬರು ಪುತ್ರರ ಹೆಸರಿನಲ್ಲಿ 13 ಎಕರೆ 35 ಗುಂಟೆ ಮತ್ತು ಸ್ವಂತ ಹೆಸರಿನಲ್ಲಿ 4 ಎಕರೆ 7 ಗುಂಟೆ ಜಮೀನು ಖರೀದಿಸಿರುವುದು ಬಯಲಿಗೆ ಬಂದಿದೆ.

ಆರೋಪಿಯ ಬಳಿ ಸ್ಕೋಡಾ, ಬೆಂಜ್, ವೋಕ್ಸ್‌ವ್ಯಾಗನ್, ಟಾಟಾ ಮತ್ತು ಟೊಯೊಟಾ ಕಂಪನಿಯ ಒಟ್ಟು ಐದು ಐಷಾರಾಮಿ ಕಾರುಗಳು ಪತ್ತೆಯಾಗಿವೆ. 935.69 ಗ್ರಾಂ. ಚಿನ್ನ, 9 ಕೆ.ಜಿ. ಬೆಳ್ಳಿ, ₹ 17.27 ಲಕ್ಷ ನಗದು ಹಾಗೂ ಬ್ಯಾಂಕ್ ಖಾತೆಗಳಲ್ಲಿ ₹ 1.31 ಕೋಟಿ ಠೇವಣಿ ಇರುವುದನ್ನು ತನಿಖಾ ತಂಡ ಪತ್ತೆಮಾಡಿದೆ.

ಹೇಳಿಕೆ ನೀಡಿದ ಸಂತ್ರಸ್ತೆಯರು: ಡಾ. ರತ್ನಾಕರ್ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಹಿಳಾ ಸಿಬ್ಬಂದಿಯ ಜೊತೆಗೆ ಅಸಭ್ಯವಾಗಿ ವರ್ತಿಸಿದ ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ರತ್ನಾಕರ್ ಅವರನ್ನು ಶನಿವಾರ ಬಂಧಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 2 ದಿನ ಪೊಲೀಸ್ ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

'ಸಂತ್ರಸ್ತೆಯರು ದೂರು ನೀಡಲು ಹಿಂದೇಟು ಹಾಕುತ್ತಿದ್ದರು. ಆದರೆ, ಶನಿವಾರ ಮೂವರು ಸಂತ್ರಸ್ತೆಯರು ಹಾಗೂ ಆಂತರಿಕ ತನಿಖಾ ಸಮಿತಿಯ ಒಬ್ಬ ಸದಸ್ಯರ ಹೇಳಿಕೆಗಳನ್ನು ಪಡೆಯಲಾಗಿದೆ. ಅದರ ಆಧಾರದ ಮೇಲೆ ಬಂಧಿಸಲಾಗಿದೆ. ಆರೋಪಿಯು ಸಂತ್ರಸ್ತೆಯರನ್ನು ಕುಂದಾಪುರ, ಮುರ್ಡೇಶ್ವರ, ಮಡಿಕೇರಿ, ಪಿಲಿಕುಳಕ್ಕೆ ಕರೆದೊಯ್ದಿದ್ದ. ಇದೇ ರೀತಿಯ ವರ್ತನೆ ತೋರಿರುವುದಾಗಿ ವಿಚಾರಣೆ ವೇಳೆ ತಿಳಿದು ಬಂದಿದೆ' ಎಂದು ಹೇಳಿದ್ದಾರೆ.

'ಮಹಿಳಾ ಸಂಘಟನೆ ಸದಸ್ಯರೊಬ್ಬರ ದೂರು ಆಧರಿಸಿ, ಡಾ.ರತ್ನಾಕರ್ ಅವರನ್ನು ಶುಕ್ರವಾರ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಅವರ ಬಳಿಯಿದ್ದ ಮೊಬೈಲ್ ಹಾಗೂ ಇನ್ನಿತರ ದಾಖಲೆ ವಶಪಡಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಸಾಮೂಹಿಕ ಅತ್ಯಾಚಾರ ಪ್ರಕರಣ ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಗಮನಸೆಳೆದಿದ್ದ, ಚಾಮುಂಡಿಬೆಟ್ಟ ತಪ್ಪಲಿನಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದ ಆರೋಪಿಗಳ ವಿರುದ್ಧ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

'6 ಆರೋಪಿಗಳ ವಿರುದ್ಧ 1,499 ಪುಟಗಳ ದೋಷಾರೋಪ ಪಟ್ಟಿಯನ್ನು ಇಲ್ಲಿನ ಮೂರನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ. ಘಟನೆಗೆ ಸಂಬಂಧಿಸಿ 7 ಮಂದಿಯನ್ನು ಬಂಧಿಸಲಾಗಿತ್ತು. ಒಬ್ಬನ ಪಾತ್ರ ಇಲ್ಲ ಎಂಬುದು ಗೊತ್ತಾಗಿದ್ದರಿಂದ ಕೈಬಿಡಲಾಗಿದೆ. ಐಪಿಸಿ 397 (ದರೋಡೆ), 376ಡಿ (ಸಾಮೂಹಿಕ ಅತ್ಯಾಚಾರ), 109 (ಅಪರಾಧಕ್ಕೆ ಕುಮ್ಮಕ್ಕು), 120 ಬಿ (ಅಪರಾಧ ಸಂಚು) ಮತ್ತು 326 (ಮಾರಕಾಸ್ತ್ರಗಳಿಂದ ಹಲ್ಲೆ) ಸೆಕ್ಷನ್‌ಗಳನ್ನು ಆರೋಪಿಗಳ ವಿರುದ್ಧ ಹಾಕಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ದರೋಡೆ– ಆರೋಪಪಟ್ಟಿ ಸಲ್ಲಿಕೆ: 'ಮೈಸೂರಿನಲ್ಲಿ ನಡೆದಿದ್ದ ಚಿನ್ನದ ಅಂಗಡಿ ದರೋಡೆ ಮತ್ತು ಕೊಲೆ ಪ್ರಕರಣದಲ್ಲಿ ಒಂಬತ್ತು ಮಂದಿಯ ವಿರುದ್ಧ ಇಲ್ಲಿನ ಎರಡನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 1,410 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 7 ಆರೋಪಿಗಳನ್ನು ಬಂಧಿಸಲಾಗಿದ್ದು, ಮತ್ತಿಬ್ಬರ ಹುಡುಕಾಟ ನಡೆದಿದೆ' ಎಂದಿದ್ದಾರೆ.

5 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಲಂಕಾ ಭಾಗದಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಕಾರಣ ರಾಜ್ಯದ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ನ.28ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ತುಮಕೂರು, ರಾಮನಗರ, ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ.

'ನ. 29ರ ವೇಳೆಗೆ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗುವ ಲಕ್ಷಣಗಳು ಕಂಡುಬಂದಿವೆ. ಆ ವೇಳೆ ರಾಜ್ಯದಲ್ಲೂ ಮಳೆಯಾಗಬಹುದು. ಕರಾವಳಿ ಮತ್ತು ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆಗಳಿವೆ' ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ರಾಜ್ಯದಲ್ಲಿ ಎರಡು ದಿನಗಳಿಂದ ಮಳೆ ತಗ್ಗಿದ್ದು, ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿದಿದೆ. ಬೀದರ್ ಹಾಗೂ ಧಾರವಾಡದಲ್ಲಿ ಶನಿವಾರ ತಲಾ 14 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.80	15,490	15,280
ಹಾರಂಗಿ	2,859	2,857.45	591	600
ಕಬಿನಿ	2,284	2,283.85	1,900	700
ಹೇಮಾವತಿ	2,922	2,913.50	2,570	830
ಲಿಂಗನಮಕ್ಕಿ	1,819	1,812.85	2,840	-
ಸೂಪಾ (ಮೀ)	564	555	420	3,017
ವಾಣಿ	594.36	586.58	119	-
ತುಂಗಭದ್ರಾ	1,633	1633	15,036	16,509
ಮಲಪ್ರಭಾ	2,079.50	2,077.10	2,131	569
ಘಟಪ್ರಭಾ	2,175	2,165.76	480	183
ಭದ್ರಾ	186	186	4,529	4,529
ಆಲಮಟ್ಟಿ (ಮೀ)	519.60	518.49	2,316	580
ನಾರಾಯಣಪುರ (ಮೀ)	492.25	492.04	1,020	333

*ನೆಮ್ಮಟ್ಟದಿಂದ

ಶಾಸಕಿ ಲಕ್ಷ್ಮಿ ಹೆಬ್ಬಾಳಕರಗೆ ರಮೇಶ ತಿರುಗೇಟು • ಒಂದೇ ವೇದಿಕೆಯಲ್ಲಿ ರಮೇಶ, ಲಖನ್ ಪ್ರತ್ಯೇಕವಾಗಿ ಪ್ರಚಾರ!

‘ಲಿಂಗಾಯತ ಕಾರ್ಡ್ ಬಳಸಿ ವ್ಯವಸ್ಥಿತ ಸಂಚು’

ಪ್ರಜಾವಾಣಿ ವಾರ್ತೆ


ರಮೇಶ ಜಾರಕಿಹೊಳಿ

ಬೆಳಗಾವಿ: ‘ನನ್ನ ವಿರುದ್ಧ ವ್ಯವಸ್ಥಿತ ಸಂಚು ನಡೆದಿದೆ. ಲಿಂಗಾಯತ ಸಮಾಜಕ್ಕೆ ಅವಮಾನ ಮಾಡಿದ್ದೇನೆ ಎಂದು ಹಬ್ಬಿಸುತ್ತಿದ್ದಾರೆ’ ಎಂದು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಹೆಸರು ಹೇಳದೆ ಟೀಕಿಸಿದರು.

ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ‘ಜಾರಕಿಹೊಳಿ ಕುಟುಂಬದ ಬೆಂಬಲಿಗರು’ ದೇಸಾಯಿ ಗಲ್ಲಿಯಲ್ಲಿ ಶನಿವಾರ ಆಯೋಜಿಸಿದ್ದ ವಿಧಾನಪರಿಷತ್ ಚುನಾವಣೆ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ನಾನು ಬಿಜೆಪಿಯ ಮಹಾಂತೇಶ ಕವಟಗಿಮಠ ಪರ ಮತ ಕೇಳಲು ಬಂದಿದ್ದೇನೆ. 2ನೇ ಅಭ್ಯರ್ಥಿ ಬೆಂಬಲಿಸಲು ಚರ್ಚಿಸುವುದಕ್ಕಾಗಿ ಭಾನುವಾರ ದೆಹಲಿಗೆ ಹೋಗುತ್ತಿದ್ದೇನೆ. ವರಿಷ್ಠರಿಂದ ಅನುಮತಿ ಪಡೆದು ಬಂದು ಬುಧವಾರ ಸ್ಪಷ್ಟ ಸೂಚನೆ ಕೊಡುತ್ತೇನೆ. ಕಾಂಗ್ರೆಸ್ ಕೆಡವಲು ಬೇಕಾದ ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡಿದ್ದೇನೆ’ ಎಂದರು.

‘ನಾನು ಜಾತಿ ಮಾಡುವುದಿಲ್ಲ. ಇತ್ತೀಚಿಗೆ ನಡೆದ ಬೆಳಗಾವಿ ಲೋಕಸಭಾ ಮತಕ್ಷೇತ್ರದ ಉಪ ಚುನಾವಣೆಯಲ್ಲಿ ತಮ್ಮ ಸತೀಶ್ ಜಾರಕಿಹೊಳಿ ಸೋಲಿಸಿ, ಲಿಂಗಾಯತ ಸಮುದಾಯದ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ ಅವರನ್ನು ಗೆಲ್ಲಿಸಿದ್ದು ನಾನೇ. ಆಗ ಜಾತಿ ಎಲ್ಲಿತ್ತು?’ ಎಂದು ಪ್ರಶ್ನಿಸಿದರು.

‘ವಿಧಾನಸಭೆ ಚುನಾವಣೆಯಲ್ಲಿ ಅವರ (ಲಕ್ಷ್ಮಿ ಹೆಬ್ಬಾಳಕರ) ಪರವಾಗಿ ಇಲ್ಲಿಗೆ (ಗ್ರಾಮೀಣ ಕ್ಷೇತ್ರ) ಬಂದು ಮತ ಕೇಳಿ ತಪ್ಪು ಮಾಡಿದ್ದೇನೆ. ಅದಕ್ಕಾಗಿ ಜನರ ಕ್ಷಮೆ ಯಾಚಿಸುತ್ತೇನೆ. ಮುಂದಿನ ದಿನಗಳಲ್ಲಿ ನೀವು ಕೈಗೊಳ್ಳುವ ನಿರ್ಧಾರಕ್ಕೆ ಬದ್ಧವಿರುತ್ತೇನೆ’ ಎಂದು ಹೇಳಿದರು.

ರಮೇಶ ತೆರಳಿದ ಕೆಲ ಹೊತ್ತಿನಲ್ಲೇ ಅಲ್ಲಿಗೆ ಬಂದ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ, ‘ಚುನಾವಣೆ ಬಂದಾಗ ಕಾಲಿಗೆ ಬೀಳುವವರು, ನಂತರ ಕಾಲೆಳೆಯುವವರನ್ನು ನೋಡಿದ್ದೀರಿ. ವೈಯಕ್ತಿಕ ಸಮಸ್ಯೆ ಇರಲಿ ಅಥವಾ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ವಿಷಯವಿರಲಿ. ನಿಮ್ಮೊಂದಿಗೆ ಸದಾ ಇರುತ್ತೇನೆ’ ಎಂದು ಭರವಸೆ ನೀಡಿದರು.

‘ನಾಮಪತ್ರ ವಾಪಸ್ ಪಡೆಯುತ್ತೇನೆ ಎಂದು ಹಬ್ಬಿಸಿದ್ದರು. ನನಗೆ ಯಾವ ಕಮಾಂಡೂ ಇಲ್ಲ. ಮತದಾರರು–ಕಾರ್ಯಕರ್ತರೇ ಹೈಕಮಾಂಡ್. ಊಹಾಪೋಹ ಹಬ್ಬಿಸುವುದನ್ನೆ ಬಂಡವಾಳ ಮಾಡಿಕೊಂಡಿರುವವರಿಗೆ ಕಿವಿಕೊಡಬೇಡಿ. ಪ್ರಥಮ ಪ್ರಾಶಸ್ತ್ಯದ ಮತ ಕೊಡಬೇಕು. 2ನೇ ಮತದ ಬಗ್ಗೆ ಗುಪ್ತವಾಗಿ ಹೇಳುತ್ತಾರೆ’ ಎಂದರು.

ಥೂ ಅಂತಾರಲ್ಲಾ, ನಾನೇನು ಮಾಡಿದ್ದೇನೆ: ಲಕ್ಷ್ಮಿ ಪ್ರಶ್ನೆ


ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ: ‘ಲಿಂಗಾಯತ ಸಮಾಜದ ಹೆಣ್ಣುಮಗಳು ನಾನು. ಥೂ ಅಂತಾರಲ್ಲ, ನಾನೇನು ಮಾಡಿದ್ದೇನೆ? ಬಸವಣ್ಣನ ತತ್ವದ ಮೇಲೆ ಜೀವನ ನಡೆಸುತ್ತಿರುವ ಹೆಣ್ಣುಮಗಳೊಬ್ಬಳ ಬಗ್ಗೆ ಮಾತನಾಡಿ ಸ್ತ್ರೀಕುಲಕ್ಕೆ ಅವಮಾನ ಮಾಡಿದ್ದಾರೆ..’

– ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೆಸರು ಪ್ರಸ್ತಾಪಿಸದೆ ಮೇಲಿನಂತೆ ಟೀಕಿಸಿದರು.

ಬೈಲಹೊಂಗಲದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಲಕ್ಷ್ಮಿಯನ್ನು ಸೋಲಿಸುವುದೇ ಗುರಿಯಂತೆ. ನೀವು ನಿಮ್ಮ ಪಕ್ಷದಲ್ಲಿ ಬೆಳೆಯಬಹುದು; ನಾನು ನನ್ನ ಪಕ್ಷದಲ್ಲಿ ಬೆಳೆಯಬಾರದಾ? ಪಕ್ಷದ ವರಿಷ್ಠರು ಆಶೀರ್ವದಿಸಿದ್ದರಿಂದ ತಮ್ಮ ಚನ್ನರಾಜ ಹಟ್ಟಿಹೊಳಿ ವಿಧಾನಪರಿಷತ್ ಚುನಾವಣೆ ಕಣಕ್ಕಿಳಿದಿದ್ದಾನೆ. ಬಿಜೆಪಿಯವರೂ ಅಭ್ಯರ್ಥಿ ಘೋಷಿಸಿದ್ದಾರೆ. ಹೀಗಿರುವಾಗ, ಮೂರನೇಯವರಿಗೆ ಏನು ಕೆಲಸ?’ ಎಂದು ತಿರುಗೇಟು ನೀಡಿದರು.

‘ಸದಸ್ಯರಿಗಾಗಿ ಗಾಡಿಗಳನ್ನು ಕಳುಹಿಸ್ತಾರಂತೆ. ಚುನಾವಣೆ ಮುಗಿದ ಮೇಲೂ ಆ ಗಾಡಿಗಳು ಇರುತ್ತವೆಯೇ? ಜಾರಕಿಹೊಳಿ ಕುಟುಂಬದ ಮಾಸ್ಟರ್ ಮೈಂಡ್ ಆಗಿರುವ ಸತೀಶ ಜಾರಕಿಹೊಳಿ ನಮ್ಮ ಜೊತೆಗಿದ್ದಾರೆ. ಇಲ್ಲಿರುವವರು ನಾವು. ನಿಮಗೆ ನೆರವಾಗುವವರು ನಾವು. ಕಳೆದ ಸಲ ನಮ್ಮ ಪಕ್ಷದಲ್ಲೇ ಇದ್ದು ನಮ್ಮವರನ್ನೇ ಸೋಲಿಸಿ ಅನ್ಯಾಯ ಮಾಡಿದರು. ಈ ಬಾರಿ ಬಿಜೆಪಿಗೆ ಹೋಗಿ ಅವರಿಗೂ ಅನ್ಯಾಯ ಮಾಡುತ್ತಿದ್ದಾರೆ’ ಎಂದರು.

‘ಮತ ಹಾಕದಿದ್ದರೂ, ಸ್ವಾಭಿಮಾನ ಮಾರಿಕೊಳ್ಳಬೇಡಿ. ಮುಂದೆ ಮಂತ್ರಿಯಾಗ್ತಾರೆ ನೋಡ್ಕೊಳ್ತೀವಿ ಎಂದು ಬೆದರಿಸುತ್ತಿದ್ದಾರಂತೆ. ತಾಯಿ ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಪುನೀತ್ ರಾಜ್‌ಕುಮಾರ್ ಅಂಥವರೇ ಬದುಕಲಿಲ್ಲ. ಇನ್ನು ನಾವೆಲ್ಲರೂ ಯಾವ ಲೆಕ್ಕ?’ ಎಂದು ಕೇಳಿದರು.

ನಾನೇ ಏಜೆಂಟ್ ಆಗುವೆ: ಸತೀಶ


ಸತೀಶ ಜಾರಕಿಹೊಳಿ

ಬೆಳಗಾವಿ: ‘ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲೇಬೇಕಾದ್ದರಿಂದ ಗೋಕಾಕ ತಾಲ್ಲೂಕಿನಲ್ಲಿ ನಾನು ಏಜೆಂಟ್, ಕ್ಲರ್ಕ್, ಸಹಾಯಕ ಆಗಲು ಸಿದ್ಧನಿದ್ದೇನೆ. ಅವರನ್ನಷ್ಟೆ (ಪ್ರತಿಸ್ಪರ್ಧಿಗಳು) ಬಿಟ್ಟರೆ ಕಷ್ಟವಾಗುತ್ತದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಶನಿವಾರ ಹೇಳಿದರು.

ಗೋಕಾಕದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಈ ಚುನಾವಣೆಯಲ್ಲಿ ಗೋಕಾಕ ಹಾಗೂ ಅರಭಾವಿಯಲ್ಲಿ ಶೇ 30ರಷ್ಟು ಮತಗಳು ನಮಗೆ ಬರಲಿವೆ. ನಮ್ಮ ಬೆಂಬಲಿಗರೇ 60ರಿಂದ 70 ಮತದಾರರಿದ್ದಾರೆ’ ಎಂದು ತಿಳಿಸಿದರು.

‘ನಾನು ಗೋಕಾಕ ತಾಲ್ಲೂಕಿನ ಗುಜನಾಳ ಮತಗಟ್ಟೆ ಏಜೆಂಟ್ ಆಗುತ್ತೇನೆ. ಮುಖಂಡ ಅಶೋಕ ಪೂಜಾರಿ ಅವರನ್ನು ಮಮದಾಪುರಕ್ಕೆ ಹಾಕಿದ್ದೇವೆ. ಅವರು ಅಧಿಕೃತವಾಗಿ ಕಾಂಗ್ರೆಸ್ ಸೇರಿಲ್ಲವಾದರೂ ಏಜೆಂಟ್ ಆಗುವುದಕ್ಕೆ ತೊಂದರೆ ಇಲ್ಲ. ಚುನಾವಣೆ ಆದ ಮೇಲೆ ಪಕ್ಷ ಸೇರಲಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

‘ಪುತ್ರ, ಪುತ್ರಿಯನ್ನೂ ಏಜೆಂಟ್ ಮಾಡುತ್ತೇವೆ. ಪ್ರತಿ ಪಂಚಾಯಿತಿಗೂ ಇಬ್ಬರನ್ನು ನಿಯೋಜಿಸಲಾಗುವುದು. ಉಪಾಹಾರ, ಊಟ ಎರಡನ್ನೂ ಪಂಚಾಯಿತಿ ಮುಂದೆಯೇ ಅವರಿಗೆ ನೀಡಲಾಗುವುದು. ಮತಪೆಟ್ಟಿಗೆ ಸೀಲ್ ಆಗುವವರೆಗೂ ಅಲ್ಲಿಯೇ ಇದ್ದು ಕಣ್ಣಿಡಲಿದ್ದಾರೆ’ ಎಂದು ತಿಳಿಸಿದರು.

‘ಎಚ್‌ಡಿಕೆ ಪ್ರತಿಕ್ರಿಯೆಗೆ ಕಾಯುತ್ತಿರುವೆ’


ಬಿ.ಎಸ್. ಯಡಿಯೂರಪ್ಪ

ಶಿವಮೊಗ್ಗ: ‘ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಜತೆ ಹೊಂದಾಣಿಕೆ ಪ್ರಸ್ತಾಪ ಮಾಡಿದ್ದೇನೆ. ಎಚ್.ಡಿ.ಕುಮಾರಸ್ವಾಮಿ ಅವರ ಪ್ರತಿಕ್ರಿಯೆಗೆ ಕಾಯುತ್ತಿರುವೆ’ ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾಳೆಯೊಳಗೆ ಕುಮಾರಸ್ವಾಮಿ ಅವರು ಪ್ರತಿಕ್ರಿಯಿಸಬಹುದು. ಕಾಯುತ್ತೇನೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆಲ್ಲಲಿದೆ. 20 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, 15 ಕಡೆ ಖಚಿತ. ಈ ಚುನಾವಣೆಯ ಫಲಿತಾಂಶವು ಮುಂದೆ ವಿಧಾನಸಭೆ, ಲೋಕಸಭೆ ಚುನಾವಣೆಗೆ ದಿಕ್ಸೂಚಿಯಾಗಲಿದೆ’ ಎಂದು ಅವರು ಹೇಳಿದರು.



ಚಿತ್ರ ಸಂಭ್ರಮ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಆವರಣದಲ್ಲಿ ಪ್ರಯಾಣಿಕರಿಗೆ ವಿಶ್ರಾಂತಿ ಪಡೆಯಲು ನಿರ್ಮಿಸಿರುವ ಕಾರಂಜಿ ಹಾಗೂ ‘ಫಿಶ್ ಫುಟ್ ಸ್ಪಾ’ ಬಳಿ ಇದ್ದ ಬಣ್ಣ ಬಣ್ಣದ ಮೀನುಗಳನ್ನು ಪ್ರಯಾಣಿಕರು ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

‘ಕಮಲ’ ಹಿಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಕೋಲಾರ: ವಿಧಾನ ಪರಿಷತ್ ಚುನಾವಣಾ ಕಣ ರಂಗೇರಿರುವ ಬೆನ್ನಲ್ಲೇ ಕೈ ಪಾಳಯದಲ್ಲಿ ಭಿನ್ನಮತ ಸ್ಫೋಟಗೊಂಡಿದೆ. ಕೋಲಾರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಚಂದ್ರಾರೆಡ್ಡಿ ಶನಿವಾರ ಬಿಜೆಪಿ ಸೇರಿದ್ದಾರೆ.

ಕಾಂಗ್ರೆಸ್ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದ ಅವರಿಗೆ ಅಂತಿಮ ಕ್ಷಣದಲ್ಲಿ ಟಿಕೆಟ್ ತಪ್ಪಿತ್ತು. ಕಾಂಗ್ರೆಸ್ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಎಂ.ಎಲ್.ಅನಿಲ್‌ಕುಮಾರ್ ಅವರಿಗೆ ವರಿಷ್ಠರು ಮಣೆ ಹಾಕಿದ್ದರು. ಇದರಿಂದ ಬೇಸರಗೊಂಡಿದ್ದ ಚಂದ್ರಾರೆಡ್ಡಿ ನಾಮಪತ್ರ ಸಲ್ಲಿಕೆ ದಿನವೇ ಬಂಡಾಯದ ಬಾವುಟ ಹಾರಿಸಿ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು.

ಮಳೆ ಅನಾಹುತದ ಸಮೀಕ್ಷೆಗೆ ಜಿಲ್ಲೆಗೆ ಬಂದಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಚಂದ್ರಾರೆಡ್ಡಿ ಅವರೊಂದಿಗೆ ಮಾತುಕತೆ ನಡೆಸಲು ಯತ್ನಿಸಿ ವಿಫಲರಾಗಿದ್ದರು. ಪಕ್ಷದ ಅಭ್ಯರ್ಥಿ ಅನಿಲ್‌ಕುಮಾರ್ ಮನವೊಲಿಸಲು ಯತ್ನಿಸಿದರೂ ಮಣಿಯದ ಚಂದ್ರಾರೆಡ್ಡಿ ಬೆಂಗಳೂರಿನಲ್ಲಿ ಶನಿವಾರ ಮುಖ್ಯಮಂತ್ರಿ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ತಪ್ಪಿದ ಟಿಕೆಟ್: ಸುದರ್ಶನ್ ಬೇಸರ ‘ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದ ನನಗೆ ಪಕ್ಷ ಟಿಕೆಟ್ ನಿರಾಕರಿಸಿದ್ದರಿಂದ ಬೇಸರವಾಗಿದೆ’ ಎಂದು ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅಸಮಾಧಾನ ಹೊರಹಾಕಿದ್ದಾರೆ.

‘2013 ಮತ್ತು 2018ರ ವಿಧಾನಸಭೆ ಚುನಾವಣೆ ಸೇರಿದಂತೆ ನನಗೆ ಪದೇಪದೇ ಅವಕಾಶ ನಿರಾಕರಿಸಿರುವುದು ಸ್ವಾಭಿಮಾನದ ಪ್ರಶ್ನೆ. ಆತ್ಮಗೌರವ ಕಳೆದುಕೊಂಡು ರಾಜಕಾರಣ ಮಾಡಲ್ಲ’ ಎಂದು ಅವರು ಗುಡುಗಿದ್ದಾರೆ.

ವರ್ತೂರು ಪ್ರಕಾಶ್‌ಗೆ ಬಿಜೆಪಿ ಗಾಳ?

ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಅವರು ಮಾಜಿ ಶಾಸಕ ವರ್ತೂರು ಪ್ರಕಾಶ್ ಅವರನ್ನು ಭೇಟಿಯಾಗಿ ಬಿಜೆಪಿಗೆ ಸೇರಿ ಪರಿಷತ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಆಹ್ವಾನ ನೀಡಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ವರ್ತೂರು ಪ್ರಕಾಶ್‌ರ ರಾಜಕೀಯ ನಡೆ ಕುತೂಹಲ ಮೂಡಿಸಿದೆ.

‘ಎಲ್ಲಿ ಸೋಲುತ್ತೀರಿ ಅದನ್ನೂ ಹೇಳಿ’

ರಾಮನಗರ: ‘ವಿಧಾನ ಪರಿಷತ್ ಚುನಾವಣೆಯಲ್ಲಿ ಕನಿಷ್ಠ 15 ಸ್ಥಾನ ಗೆಲ್ಲುತ್ತೇವೆ ಎನ್ನುವ ಬಿಜೆಪಿಯವರು, ಸೋಲುವ ಉಳಿದ 10 ಕ್ಷೇತ್ರಗಳು ಯಾವುವು ಎಂಬುದನ್ನೂ ಬಹಿರಂಗಪಡಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಕನಕಪುರದಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು ‘ಬಿಜೆಪಿ 25 ಕ್ಷೇತ್ರಗಳನ್ನೂ ಗೆಲ್ಲಬಹುದು. ಅವರು ಮತ್ತು ಜೆಡಿಎಸ್‌ನವರು ಯಾವಾಗ ಕಿತ್ತಾಡುತ್ತಾರೋ ಯಾವಾಗ ಒಂದಾಗುತ್ತಾರೋ ಅವರಿಗೇ ಗೊತ್ತು’ ಎಂದು ಅವರು ಲೇವಡಿ ಮಾಡಿದರು.

‘ಆರ್ಥಿಕ ಸಂಕಷ್ಟಕ್ಕೆ ಕಾಂಗ್ರೆಸ್, ಬಿಜೆಪಿ ಕಾರಣ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ದೇಶದ ಇಂದಿನ ಆರ್ಥಿಕ ಸಂಕಷ್ಟಕ್ಕೆ ಬಿಜೆಪಿಯಷ್ಟೇ ಕಾಂಗ್ರೆಸ್ ಸಹ ಸಮಾನ ಕಾರಣ. 1991ರಲ್ಲಿ ಜಾಗತೀಕರಣ, ಖಾಸಗೀಕರಣ ನೀತಿಯ ಬೀಜವನ್ನು ಕಾಂಗ್ರೆಸ್ ಬಿತ್ತಿದರೆ, ಬಿಜೆಪಿ ಅದನ್ನು ವೃಕ್ಷವಾಗಿ ಬೆಳೆಸಿತು’ ಎಂದು ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಟೀಕಿಸಿದರು.

ನಗರದಲ್ಲಿ ಶನಿವಾರ ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ (ಎಐಡಿವೈಒ) 5ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ‘ಲಾಭದಲ್ಲಿದ್ದ ಸಾರ್ವಜನಿಕ ಸಂಸ್ಥೆಗಳನ್ನು ನಿಷ್ಪ್ರಯೋಜಕ ಎಂಬಂತೆ ಬಿಂಬಿಸುವ ಅಪಪ್ರಚಾರ ನಡೆದವು’ ಎಂದು ಹೇಳಿದರು.

ಪ್ರಜೆಗಳ ಹಕ್ಕಾದ ಶಿಕ್ಷಣ ಮತ್ತು ಆರೋಗ್ಯವನ್ನು ಉದ್ಯಮವನ್ನಾಗಿಸಲಾಗಿದೆ. ಹೊಸ ಶಿಕ್ಷಣ ನೀತಿಯಡಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಲಾಗಿದೆ. ವಿದ್ಯಾರ್ಥಿಗಳನ್ನು ಗ್ರಾಹಕರು ಮತ್ತು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನು ಶಿಕ್ಷಣ ಕ್ಷೇತ್ರದ ಕೆಲಸಗಾರರು ಎಂದು ಕರೆಯಲಾಗುತ್ತಿದೆ’ ಎಂದರು.

‘ಗಾಂಧೀಜಿ ಚಿತ್ರಕ್ಕೆ ಗುಂಡು ಹಾರಿಸುವ, ಸಂವಿಧಾನದ ಪ್ರತಿಗೆ ಬೆಂಕಿ ಹಚ್ಚಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ವಿರುದ್ಧ ಘೋಷಣೆ ಕೂಗುವ ಅತಿರೇಕಗಳನ್ನು ಕಾಣುತ್ತಿದ್ದೇವೆ. ಗೋಡ್ಸೆ ಪರಂಪರೆ ದೇಶಕ್ಕೆ ಅಪಾಯಕಾರಿ’ ಎಂದರು.

‘ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿದ್ದ ವ್ಯಕ್ತಿ ಪಕ್ಷದ ಕಚೇರಿಗೆ ತೆರಳಿ ಮತ ಕೇಳಿದ್ದು ಸರಿಯಲ್ಲ. ಯಾವುದೇ ಸಿದ್ಧಾಂತ ಹೊಂದಿದವರಾಗಿದ್ದರೂ ಆ ಸಿದ್ಧಾಂತ ಪ್ರತಿನಿಧಿಸುವ ಪಕ್ಷದೊಂದಿಗೆ ಮಾನಸಿಕ ಅಂತರ ಕಾಯ್ದುಕೊಳ್ಳಬೇಕಿತ್ತು’ ಎಂದು ಅಧ್ಯಕ್ಷರಾಗಿ ಆಯ್ಕೆಯಾದ ಡಾ.ಮಹೇಶ ಜೋಶಿ ಹೆಸರು ಉಲ್ಲೇಖಿಸದೇ ಹೇಳಿದರು.

‘ಆ ಪಕ್ಷದವರೂ ಇವರ ಗೆಲುವಿಗಾಗಿ ಶ್ರಮಿಸಿದ್ದು ಎಲ್ಲರಿಗೂ ಗೊತ್ತೇ ಇದೆ. ಪಕ್ಷದ ಕಚೇರಿಗೆ ತೆರಳಿ ಮತ ಕೇಳಿದ್ದು ವಿವಾದವಾಗುತ್ತಿದ್ದಂತೆಯೇ ಎಲ್ಲ ಪಕ್ಷದ ಕಚೇರಿಗಳಿಗೂ ತೆರಳಿದ್ದೆ ಎಂದು ಆ ಅಭ್ಯರ್ಥಿ ಸಮಜಾಯಿಷಿ ನೀಡಿದರು. ಆದರೆ, ಇದು ವಿಶ್ವಾಸಾರ್ಹತೆಯ ವಿಷಯವಾಗಿತ್ತು’ ಎಂದು ಅವರು ಅಭಿಪ್ರಾಯಪಟ್ಟರು.



ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಅವರು ಕೆಂಪು ಧ್ವಜವನ್ನು ಹಾರಿಸುವ ಮೂಲಕ ಎಐಡಿವೈಒ 5ನೇ ರಾಜ್ಯಮಟ್ಟದ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಂಘಟನೆಯ ರಾಜ್ಯ ಅಧ್ಯಕ್ಷೆ ಎಂ. ಉಮಾದೇವಿ, ಗುಲಬರ್ಗಾ ವಿ.ವಿ. ಪ್ರಾಧ್ಯಾಪಕ ಪ್ರೊ. ರಮೇಶ ಲಂಡನಕರ್, ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ, ಎಐಡಿವೈಒ ರಾಷ್ಟ್ರೀಯ ಅಧ್ಯಕ್ಷ ರಾಮಾಂಜನಪ್ಪ ಆಲ್ದಳ್ಳಿ, ರಾಷ್ಟ್ರೀಯ ಕಾರ್ಯದರ್ಶಿ ಪ್ರತಿಭಾ ನಾಯಕ್, ರಾಜ್ಯ ಕಾರ್ಯದರ್ಶಿ ಜಿ. ಶಶಿಕುಮಾರ್ ಇದ್ದರು

ದೆಹಲಿಗೆ ಹೋಗಿ ಟಿಕೆಟ್ ಗಿಟ್ಟಿಸಲು ಮನಸ್ಸು ಒಪ್ಪಲಿಲ್ಲ: ಎಸ್.ಆರ್. ಪಾಟೀಲ

ಪ್ರಜಾವಾಣಿ ವಾರ್ತೆ


ಎಸ್.ಆರ್. ಪಾಟೀಲ

ಬೆಂಗಳೂರು: ‘ನನಗೆ ಟಿಕೆಟ್ ತಪ್ಪುತ್ತದೆ ಎಂದುಕೊಂಡಿರಲೇ ಇಲ್ಲ. ಯಾಕೆ ಹೀಗಾಯಿತು ಎನ್ನುವುದೂ ಗೊತ್ತಿಲ್ಲ. ಅವರೆಲ್ಲ (ತಮ್ಮನಿಗೆ ಟಿಕೆಟ್‌ಗಾಗಿ ಎಂ.ಬಿ. ಪಾಟೀಲ) ದೆಹಲಿಗೆ ಹೋಗಿದ್ದಾಗ ನಾನು ಹಳ್ಳಿಯಲ್ಲೇ ಇದ್ದೆ’ ಎಂದು ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ತಪ್ಪಿಸಿಕೊಂಡಿರುವ, ಹಾಲಿ ವಿರೋಧ ಪಕ್ಷದ ನಾಯಕ ಎಸ್. ಆರ್.ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ನಾನು ಸ್ಥಾನಮಾನಕ್ಕಾಗಿ ಎಂದೂ ಲಾಬಿ ಮಾಡಿಲ್ಲ. ದೆಹಲಿವರೆಗೂ ಹೋಗಿ ಟಿಕೆಟ್ ಗಿಟ್ಟಿಸಿಕೊಳ್ಳಲು ಮನಸ್ಸು ಒಪ್ಪಲಿಲ್ಲ. ಬೆಂಗಳೂರಿನಲ್ಲಿ ಐಷಾರಾಮಿ ಜೀವನ ನಡೆಸಲು ನನಗೆ ಅಧಿಕಾರ ಬೇಕಿಲ್ಲ’ ಎಂದರು.

‘ಯಾವ ಅರ್ಹತೆ ಮೇಲೆ ಎಂ.ಬಿ. ಪಾಟೀಲ ಅವರ ತಮ್ಮನಿಗೆ ಟಿಕೆಟ್ ಕೊಟ್ಟಿದ್ದಾರೋ ಗೊತ್ತಿಲ್ಲ. ಅಧಿಕಾರಕ್ಕಾಗಿ ದೆಹಲಿಗೆ ಹೋಗಿ ಲಾಬಿ ಮಾಡುವ ಅಗತ್ಯ ನನಗೆ ಇಲ್ಲ. ಪಕ್ಷದ ತತ್ವ, ಸಿದ್ಧಾಂತವಷ್ಟೇ ಮುಖ್ಯ, ಟಿಕೆಟ್ ತಪ್ಪಿದ್ದಕ್ಕೆ ಯಾವ ನಾಯಕರ ಕಡೆಗೂ ಬೊಟ್ಟು ಮಾಡುವುದಿಲ್ಲ. ಪಕ್ಷ ನನಗೆ ತಾಯಿ ಸಮಾನ. ಪಕ್ಷದ ತೀರ್ಮಾನಕ್ಕೆ ಬದ್ಧನಾಗಿದ್ದೇನೆ’ ಎಂದರು.

‘ನನ್ನ ವಯಸ್ಸಿನ ಕಾರಣಕ್ಕೆ ಟಿಕೆಟ್ ತಪ್ಪಿದೆ ಎಂದೂ ಅನಿಸುತ್ತಿಲ್ಲ. ಮೇಲ್ಮನೆ ಅಂದ ಮೇಲೆ ಅಲ್ಲಿ ಹಿರಿಯರೇ ಇರುತ್ತಾರೆ ಅಲ್ಲವೇ? ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಮರ್ಥವಾಗಿ ಕೆಲಸ ನಿಭಾಯಿಸಿದ್ದೇನೆ. ಆದರೂ ಟಿಕೆಟ್ ಕೊಟ್ಟಿಲ್ಲ’ ಎಂದರು.

‘ಟಿಕೆಟ್ ತಪ್ಪಿರುವ ಬಗ್ಗೆ ಈಗಾಗಲೇ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿದ್ದಾರೆ. ಕುಳಿತು ಮಾತನಾಡೋಣ ಎಂದೂ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ನನ್ನ ಜೊತೆ ಚರ್ಚಿಸಲಿಲ್ಲ. ಅವರಿಗೆ ಏನು ಕೆಲಸವಿತ್ತೋ ಏನೋ. ಕೆಪಿಸಿಸಿ ಅಧ್ಯಕ್ಷರು ಭೇಟಿ ಮಾಡಿ ಚರ್ಚಿಸಿದರು’ ಎಂದು ಹೇಳಿದರು.

ಪೊಲೀಸರ ವಿರುದ್ಧ ಈಶ್ವರಪ್ಪ ಗರಂ

ಶಿವಮೊಗ್ಗ: ತಂಬಾಕು ಮಾರಾಟ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿದ ಪೊಲೀಸ್ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ, ಇನ್ನು ಮುಂದೆ ಪ್ರಕರಣ ದಾಖಲಿಸದಂತೆ ತಾಕೀತು ಮಾಡಿದ್ದಾರೆ.

ಶುಕ್ರವಾರ ನಗರದಲ್ಲಿ ಅಂಗಡಿ ಹಾಗೂ ಗೂಡಂಗಡಿಗಳ ಬಳಿ ಕಾರ್ಯಾಚರಣೆ ನಡೆಸಿದ ದೊಡ್ಡಪೇಟೆ ಠಾಣೆ ಪೊಲೀಸರು, ಅಂಗಡಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದರು.

ರೊಚ್ಚಿಗೆದ್ದ ಮಾಲೀಕರು ಪೊಲೀಸರೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ ಬಳಿ ದೂರಿದ್ದರು. ಈ ಬಗ್ಗೆ ದೊಡ್ಡಪೇಟೆ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ಫೋನಿನಲ್ಲೇ ತರಾಟೆಗೆ ತೆಗೆದುಕೊಂಡ ಸಚಿವರು , ‘ಇದ್ದಕ್ಕಿದ್ದ ಹಾಗೆ ಏಕೆ ನಿಮಗೆ ಕಾಯಿಲೆ ಬಂದಿದೆ?’ ಎಂದು ಹರಿಹಾಯ್ದಿದ್ದಾರೆ.

‘ದೇಶ, ರಾಜ್ಯದಲ್ಲಿ ಇಲ್ಲದ ಕಾನೂನು ಶಿವಮೊಗ್ಗದಲ್ಲಿ ಏಕೆ? ಮಾರಾಟಗಾರರಿಗೆ ಏಕೆ ತೊಂದರೆ ಕೊಡುತ್ತೀರಿ? ಇನ್ನು ಮುಂದೆ ಹೀಗೆ ಆಗದಂತೆ ನೋಡಿಕೊಳ್ಳಿ’ ಎಂದು ತಾಕೀತು ಮಾಡಿದ್ದಾರೆ.

ಕಾಲು ಸೆಳೆತ ರೋಗ: 600ಕ್ಕೂ ಹೆಚ್ಚು ಕುರಿ ಸಾವು

ಪ್ರಜಾವಾಣಿ ವಾರ್ತೆ



ಹಿರಿಯೂರು: ಸತತ ಮಳೆ, ಶೀತದ ವಾತಾವರಣದಿಂದ ತಾಲ್ಲೂಕಿನಲ್ಲಿ ಕುರಿ–ಮೇಕೆಗಳಲ್ಲಿ ಕಾಲು ಸೆಳೆತ ರೋಗ ಕಾಣಿಸಿಕೊಂಡಿದೆ.

ಕಳೆದ 10 ದಿನಗಳಲ್ಲಿ ಈ ರೋಗದಿಂದ 600ಕ್ಕೂ ಹೆಚ್ಚು ಕುರಿ–ಮೇಕೆಗಳು ಮೃತಪಟ್ಟಿವೆ. ಆರು ತಿಂಗಳ ಒಳಗಿನ ಕುರಿಗಳು ಹೆಚ್ಚಾಗಿ ಮೃತಪಡುತ್ತಿದ್ದು, ಸಾಕಾಣಿಕೆದಾರರಲ್ಲಿ ಆತಂಕ ಮೂಡಿಸಿದೆ.

‘ಹರ್ತಿಕೋಟೆ ಗ್ರಾಮದ ಸಮೀಪದ ಮಾರೇನಹಳ್ಳಿಯೊಂದರಲ್ಲೇ ಹತ್ತು ದಿನಗಳಲ್ಲಿ ನೂರಕ್ಕೂ ಹೆಚ್ಚು ಕುರಿಗಳು ಮೃತಪಟ್ಟಿವೆ’ ಎಂದು ಗ್ರಾಮದ ತಿಪ್ಪೇಸ್ವಾಮಿ ಹೇಳಿದರು.

‘ರೊಪ್ಪದಲ್ಲಿ ಕೂಡಿ ಹಾಕಿದ್ದ ಕುರಿಗಳನ್ನು ಬೆಳಿಗ್ಗೆ ಮೇಯಲು ಬಿಟ್ಟರೆ, ಹಲವು ಕುರಿಗಳು ಕುಂಟುತ್ತಿದ್ದವು. ಪರಿಶೀಲಿಸಿದಾಗ ಕಾಲಿನ ಗೊರಸಿನಲ್ಲಿ ಸೆಳೆತ ಕಂಡುಬಂತು. ಮರಿಗಳು, ಸೊರಗಿದ ಕುರಿಗಳಿಗೆ ಈ ರೋಗ ಬಂದರೆ ಉಳಿಯುವುದು ಕಡಿಮೆ’ ಎಂದು ಕುರಿಗಾಹಿ ಚಿತ್ತಣ್ಣ.

‘ನವೆಂಬರ್‌ನಲ್ಲಿ ಮೊದಲ ಮೂರು ವಾರ ಸತತ ಮಳೆಯಾಗಿದೆ. ಬಹಳಷ್ಟು ಜಮೀನುಗಳಲ್ಲಿ ನೀರು ನಿಂತಿದ್ದು, ತೇವಾಂಶ ಹೆಚ್ಚಿದೆ. ಕುರಿ–ಮೇಕೆಗಳು ಹೋದಾಗ ಕಾಲಿಗೆ ಮುಳ್ಳು ಚುಚ್ಚಿ, ಅದೇ ಕಾಲುಗಳಲ್ಲಿ ಕೆಸರಿನಲ್ಲಿ ಓಡಾಡಿದರೆ ಸೆಳೆತ ಉಂಟಾಗುತ್ತದೆ’ ಎಂದು ಯರಬಳ್ಳಿ ಪಶು ಆಸ್ಪತ್ರೆಯ ಡಾ.ವಾಸಂತಿ ಹೇಳಿದರು.

‘ಕಾಲು ಸೆಳೆತ ಇರುವ ಕುರಿಗಳಿಗೆ ನೋವು ನಿವಾರಕ ಹಾಗೂ ಆಂಟಿಬಯೋಟಿಕ್ ಔಷಧ ನೀಡಿದ್ದೇವೆ. ಭೂಮಿಯಲ್ಲಿ ತೇವಾಂಶ ಕಡಿಮೆ ಆಗುವವರೆಗೆ ಕುರಿಗಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು. ಮುಳ್ಳು ತುಳಿದ ಕುರಿಗಳು ಕೆಸರಿನಲ್ಲಿ ಓಡಾಡದಂತೆ ನೋಡಿಕೊಳ್ಳಬೇಕು’ ಎಂದು ಸಲಹೆ ನೀಡಿದ್ದಾರೆ.


ಶೇ 30ರಷ್ಟು ಅರಣ್ಯ ಬೆಳೆಸಲು ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅಲ್ಲಿನ ಒಟ್ಟು ವಿಸ್ತೀರ್ಣದ ಶೇ 30ರಷ್ಟು ಪ್ರದೇಶದಲ್ಲಿ ಅರಣ್ಯ ಬೆಳೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಇಲಾಖೆಯ ಅಧಿಕಾರಿಗಳಿಗೆ ಅರಣ್ಯ ಸಚಿವ ಉಮೇಶ ಕತ್ತಿ ಸೂಚಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಸಚಿವರು, ‘ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಮನಾದ ಅರಣ್ಯ ಪ್ರದೇಶವಿಲ್ಲ. ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಶೇ 78ರಷ್ಟು ಭೂಪ್ರದೇಶದಲ್ಲಿ ಅರಣ್ಯವಿದೆ. ಆದರೆ, ವಿಜಯಪುರ, ಬೀದರ್, ಕಲಬುರ್ಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಶೇ 10ರಷ್ಟು ಮಾತ್ರ ಅರಣ್ಯವಿದೆ. ಪ್ರತಿ ಜಿಲ್ಲೆಯಲ್ಲೂ ಒಟ್ಟು ವಿಸ್ತೀರ್ಣದ ಕನಿಷ್ಠ ಶೇ 30ರಷ್ಟು ಅರಣ್ಯ ಬೆಳೆಸಲು ತೀರ್ಮಾನಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಫೆಬ್ರುವರಿಯಲ್ಲಿ ತಾ.ಪಂ., ಜಿ.ಪಂ. ಚುನಾವಣೆ’

ಪ್ರಜಾವಾಣಿ ವಾರ್ತೆ


ಕೆ.ಎಸ್. ಈಶ್ವರಪ್ಪ

ದಾವಣಗೆರೆ: ‘ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಈಗಾಗಲೇ ಸಮಿತಿ ರಚಿಸಲಾಗಿದ್ದು, ಆ ಸಮಿತಿ ಜನವರಿಯಲ್ಲಿ ವರದಿ ಸಲ್ಲಿಸಲಿದೆ. ಫೆಬ್ರುವರಿಯಲ್ಲಿ ಚುನಾವಣೆ ನಡೆಯಬಹುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ವಿಶ್ವಾಸ ವ್ಯಕ್ತಪಡಿಸಿದರು.


ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಧಾನಪರಿಷತ್ತಿನ ಚುನಾವಣೆಯಲ್ಲಿ ಕಾಂಗ್ರೆಸ್ ತಮ್ಮ ಪಕ್ಷಕ್ಕೆ ಸಂಬಂಧವೇ ಇಲ್ಲದವರನ್ನು ಕಣಕ್ಕಿಳಿಸಿದೆ. ಕೇವಲ ಕೋಟ್ಯಧಿಪತಿ ಎಂಬ ಕಾರಣಕ್ಕೆ ಹಲವು ಕಡೆಗಳಲ್ಲಿ ಅಭ್ಯರ್ಥಿಗೆ ಟಿಕೆಟ್ ನೀಡಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ’ ಎಂದು ತಿಳಿಸಿದರು.

‘ಜೆಡಿಎಸ್ ಅಭ್ಯರ್ಥಿಗಳು ಇಲ್ಲದ ಕಡೆಗಳಲ್ಲಿ ಯಾರಿಗೆ ಬೆಂಬಲ ನೀಡಬೇಕು ಎಂದು ಕೊನೇ ಕ್ಷಣದಲ್ಲಿ ನಿರ್ಧರಿಸಲಾಗುವುದು ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಕಾಂಗ್ರೆಸ್ ಅನ್ನು ವಿರೋಧಿಸಿಕೊಂಡೇ ಬಂದ ಪಕ್ಷ ಜೆಡಿಎಸ್. ಹಾಗಾಗಿ ಬಿಜೆಪಿಗೆ ಬೆಂಬಲ ನೀಡಬೇಕು ಎಂಬುದು ನನ್ನ ಅಭಿಪ್ರಾಯ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೋವಿಡ್: 29.95 ಲಕ್ಷ ದಾಟಿದ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 322 ಮಂದಿ ಹೊಸದಾಗಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.95 ಲಕ್ಷ ದಾಟಿದೆ.



ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಿದ್ದು, ಒಂದು ದಿನದ ಅವಧಿಯಲ್ಲಿ 94 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.34 ರಷ್ಟು ದೃಢ ಪಟ್ಟಿದೆ. 3 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದ (149), ಧಾರವಾಡ (76) ಹಾಗೂ ಮೈಸೂರಿನಲ್ಲಿ (27) ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 20ಕ್ಕಿಂತ ಕಡಿಮೆಯಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದ್ದು, 6,754 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ 5,279 ಸಕ್ರಿಯ ಪ್ರಕರಣಗಳಿವೆ. ಯಾದಗಿರಿ, ವಿಜಯಪುರ ಸೇರಿದಂತೆ 9 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಸೋಂಕಿತರಲ್ಲಿ 176 ಮಂದಿ ಚೇತರಿಸಿಕೊಂಡಿದ್ದಾರೆ.

ಗುಣಮುಖರಾದವರ ಒಟ್ಟು ಸಂಖ್ಯೆ 29.50 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ ಚಿತ್ರದುರ್ಗ, ಧಾರವಾಡ ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 0.93 ರಷ್ಟು ಇದೆ.

ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,196ಕ್ಕೆ ಏರಿಕೆಯಾಗಿದೆ.

ಎಸ್‌ಡಿಎಂ ಕೋವಿಡ್ 281ಕ್ಕೆ ಏರಿಕೆ

ಧಾರವಾಡ: ಇಲ್ಲಿನ ಸತ್ತೂರಿನಲ್ಲಿರುವ ಎಸ್‌ಡಿಎಂ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿ ಮತ್ತೆ 77 ಜನರಲ್ಲಿ ಕೋವಿಡ್–19 ಸೋಂಕು ದೃಢಪಟ್ಟಿದೆ. ಇದರಿಂದ ಸೋಂಕಿತರ ಸಂಖ್ಯೆ 281ಕ್ಕೆ ಏರಿಕೆಯಾಗಿದೆ.

ಶುಕ್ರವಾರದವರೆಗೆ ಸೋಂಕಿತರ ಸಂಖ್ಯೆ 204 ಇತ್ತು. ಇವರಲ್ಲಿ ಇಬ್ಬರು ಸಿಬ್ಬಂದಿ ಹಾಗೂ ನಾಲ್ಕು ವಿದ್ಯಾರ್ಥಿಗಳಲ್ಲಿ ಮಾತ್ರ ಕೋವಿಡ್ ರೋಗ ಲಕ್ಷಣಗಳು ಕಂಡುಬಂದಿವೆ. ಉಳಿದವರಲ್ಲಿ ರೋಗದ ಲಕ್ಷಣಗಳು ಕಂಡುಬಂದಿಲ್ಲ ಎಂದು ಜಿಲ್ಲಾಧಿಕಾರಿ ನಿತೇಶ್ ಕೆ.ಪಾಟೀಲ ತಿಳಿಸಿದ್ದಾರೆ.

‘ಸೋಂಕಿತರನ್ನು ಕ್ವಾರಂಟೈನ್ ಮಾಡಲಾಗಿದೆ. ತಪಾಸಣೆಗೆ ಒಳಪಟ್ಟವರನ್ನು ಪ್ರತ್ಯೇಕವಾಗಿರಲು ಸೂಚಿಸಲಾಗಿದೆ. 1822 ಜನರ ತಪಾಸಣಾ ವರದಿಗಳು ಬರಬೇಕಿದೆ. ವಿದ್ಯಾರ್ಥಿ ನಿಲಯದಲ್ಲಿ ಕ್ವಾರಂಟೈನ್‌ನಲ್ಲಿರುವವರಿಗೆ ಚಿಕಿತ್ಸೆ ಹಾಗೂ ಔಷಧೋಪಚಾರ ನಡೆಯುತ್ತಿದೆ’ ಎಂದು ತಿಳಿಸಿದ್ದಾರೆ.

‘ಜಿಲ್ಲಾಡಳಿತದ ಆದೇಶದಂತೆ ಆಸ್ಪತ್ರೆಯ ಹೊರರೋಗಿಗಳ ವಿಭಾಗವನ್ನು ಮುಚ್ಚಲಾಗಿದೆ. ತುರ್ತು ವಿಭಾಗ ಕಾರ್ಯನಿರ್ವಹಿಸುತ್ತಿದೆ. ಸೋಂಕು ನಿಯಂತ್ರಿಸಲು ಕಾಲೇಜು ಮತ್ತು ಆಸ್ಪತ್ರೆಯು ಜಿಲ್ಲಾಡಳಿತದೊಂದಿಗೆ ಸಂಪೂರ್ಣವಾಗಿ ಸಹಕರಿಸುತ್ತಿದೆ’ ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

2ನೇ ಡೋಸ್ ಪಡೆಯದ 45 ಲಕ್ಷ ಜನ

ಪ್ರಜಾವಾಣಿ ವಾರ್ತೆ


ಡಾ.ಕೆ. ಸುಧಾಕರ್

ಬೆಂಗಳೂರು: ರಾಜ್ಯದಲ್ಲಿ ಮೊದಲನೇ ಡೋಸ್ ಕೋವಿಡ್ ಲಸಿಕೆ ಪಡೆದಿರುವವರ ಪೈಕಿ 45 ಲಕ್ಷ ಮಂದಿ ಇನ್ನೂ ಎರಡನೇ ಡೋಸ್ ಪಡೆದಿಲ್ಲ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಶೇ 90ರಷ್ಟು ಜನರು ಮೊದಲನೇ ಡೋಸ್ ಪಡೆದಿದ್ದಾರೆ. ಶೇ 57ರಷ್ಟು ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. ಹೊಸ ತಳಿಯ ಕೊರೊನಾ ವೈರಾಣು ಪತ್ತೆಯಾಗಿರುವುದರಿಂದ ಮುನ್ನೆಚ್ಚರಿಕೆ ಅಗತ್ಯ. ಬಾಕಿ ಇರುವ ಎಲ್ಲರೂ ತಕ್ಷಣವೇ ಲಸಿಕೆ ಪಡೆಯಬೇಕು’ ಎಂದರು.

‘ಒಮಿಕ್ರಾನ್’ ಎಂಬ ಹೆಸರಿನ ಹೊಸ ತಳಿಯ ಕೊರೊನಾ ವೈರಾಣು ಹರಡದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ಈವರೆಗೂ ಹೊಸ ತಳಿಯ ವೈರಾಣು ಪತ್ತೆಯಾಗಿಲ್ಲ. ಈ ತಳಿಯ ವೈರಾಣು ಪತ್ತೆಯಾಗಿರುವ ದೇಶಗಳಿಂದ ರಾಜ್ಯಕ್ಕೆ ಬರುವವರು ಕೋವಿಡ್ ನೆಗೆಟಿವ್ ವರದಿ ಹೊಂದಿದ್ದರೂ ಪುನಃ ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದರು.

ಧಾರವಾಡದ ಕಾಲೇಜು ಸಮಾರಂಭದಲ್ಲಿ ಪಾಲ್ಗೊಂಡವರಿಗೆ ಕೋವಿಡ್ ಸೋಂಕು ತಗುಲಿದೆ. 2,000 ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿದ್ದು, 281 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಇನ್ನೂ ಹಲವು ವಿದ್ಯಾರ್ಥಿಗಳ ಪರೀಕ್ಷಾ ವರದಿಗಳು ಬರಬೇಕಿದೆ ಎಂದರು.

ಔಷಧಿ ಖರೀದಿಗಾಗಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ₹ 38 ಕೋಟಿ ಬಿಡುಗಡೆ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಕುರಿತ ವ್ಯಾಜ್ಯಗಳು ನ್ಯಾಯಾಲಯಗಳಲ್ಲಿ ಇದ್ದ ಕಾರಣ ಕೆಲವು ಔಷಧಿಗಳ ಖರೀದಿ ವಿಳಂಬವಾಗಿದೆ. ಆದರೆ, ಯಾವುದೇ ಕೊರತೆ ಆಗದಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಸಿರಿಧಾನ್ಯ: ಬೇಕು ಮಾರುಕಟ್ಟೆ ಬಲ

• ವಿನಾಯಕ ಭಟ್

ದಾವಣಗೆರೆ: 'ನಾವು ಬರಿ ರೈತರಾಗಿ ಯೋಚಿಸುತ್ತಿದ್ದರೆ ಬಡವರಾಗಿಯೇ ಉಳಿಯುತ್ತೇವೆ; ಸಾಲ ಮಾಡಿ ನೇಣು ಹಾಕಿಕೊಳ್ಳಬೇಕಾಗುತ್ತದೆ. ಅದರ ಬದಲು ಒಬ್ಬ ಉದ್ಯಮಿಯಂತೆ ಯೋಚಿಸಿದರೆ ಕೃಷಿಯಲ್ಲೂ ಲಾಭ ಕಾಣಬಹುದು. ನಮ್ಮ ಉತ್ಪನ್ನಗಳಿಗೆ ನಾವೇ ಮಾರುಕಟ್ಟೆ ಕಂಡುಕೊಂಡರೆ ಸಂಕಷ್ಟವೂ ನಿವಾರಣೆಯಾಗಲಿದೆ'

– ಇದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಆದ್ರಿಕಟ್ಟೆ ಗ್ರಾಮದಲ್ಲಿ ಸಿರಿಧಾನ್ಯ ಬೆಳೆಯುವ ರೈತ ಮಹಿಳೆ ಎಂ.ಶೋಭಾ ಅವರ ಮನದಾಳದ ಮಾತು.

'ರಾಗಿ ಬೆಳೆಯಲು ನಾಲ್ಕು ತಿಂಗಳು ಭರ್ಜರಿ ಕೆಲಸ ಮಾಡುತ್ತೇವೆ. ಆಮೇಲೆ ಆರು ತಿಂಗಳು ಸುಮ್ಮನೆ ಕುಳಿತರೆ ಬಡವರಾಗದೇ ಇರುತ್ತೇವೆಯೇ? ವರ್ಷದ 12 ತಿಂಗಳೂ ಕೆಲಸ ಮಾಡಿದಾಗ ಮಾತ್ರ ಸ್ವಾವಲಂಬಿ ಬದುಕು ಕಾಣಬಹುದು. ನಾವು ಬೆಳೆದ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡದಿದ್ದರೆ ಆರು ತಿಂಗಳು ಕೃಷಿ ಮಾಡಿ, ಉಳಿದ ಆರು ತಿಂಗಳು ಕೈಕಟ್ಟಿಕೊಂಡು ಕೂರಬೇಕಾಗುತ್ತದೆ. ನಾವು ಶ್ರಮಪಟ್ಟು ಬೆಳೆದಿದ್ದನ್ನು ಖರೀದಿಸಿದ ಮತ್ಯಾರೋ ಲಾಭ ಮಾಡಿಕೊಳ್ಳುತ್ತಾರೆ' ಎನ್ನುತ್ತಾರೆ ಶೋಭಾ.

ಇತರ ಕೃಷಿ ಬೆಳೆಯ ಜೊತೆಗೆ ಸಿರಿಧಾನ್ಯವನ್ನೂ ಬೆಳೆಯುತ್ತಿರುವ ಶೋಭಾ ಅವರು ಸಾಮೆ, ನವಣೆಯನ್ನು ಸಂಸ್ಕರಿಸಿ ತಾವೇ ಮಾರಾಟ ಮಾಡುವ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಜೊತೆಗೆ ಸಿರಿಧಾನ್ಯದಿಂದ ಹಪ್ಪಳ–ಸಂಡಿಗೆಯನ್ನೂ ಮಾಡಿ ಮಾರುತ್ತಿದ್ದಾರೆ. 'ಸಿರಿಧಾನ್ಯವನ್ನು ಬೆಳೆದು ಬೀಜವನ್ನಷ್ಟೇ ಮಾರಿದರೆ ಹೆಚ್ಚೇನೂ ಲಾಭ ಸಿಗುವುದಿಲ್ಲ; ಅದನ್ನು ಸಂಸ್ಕರಿಸಿ ಮಾರಾಟ ಮಾಡಿದರೆ ಮಾತ್ರ ಒಳ್ಳೆಯ ಲಾಭ ಪಡೆಯಬಹುದು' ಎಂಬುದು ಅವರ ಅನುಭವದ ಮಾತು.



ಹೂವಿನಹಡಲಗಿಯ ಉತ್ತಂಗಿ ಗ್ರಾಮದಲ್ಲಿ ಬರಗು ಬೆಳೆಯನ್ನು ನೋಡುತ್ತಿರುವ ರೈತ ಕಾಟ್ರಹಳ್ಳಿ ಕಲ್ಲಪ್ಪ (ಸಂಗ್ರಹ ಚಿತ್ರ)

'ಸಿರಿಧಾನ್ಯ ಬೆಳೆಯಲು ರಾಸಾಯನಿಕ ಗೊಬ್ಬರ, ಕೀಟನಾಶಕ ಬೇಕಾಗಿಲ್ಲ. ಹೀಗಾಗಿ ಕೂಲಿ ವೆಚ್ಚ ಸೇರಿ ಒಂದು ಎಕರೆ ಸಿರಿಧಾನ್ಯ ಬೆಳೆಯಲು ₹ 10 ಸಾವಿರದಿಂದ ₹ 12 ಸಾವಿರ ವೆಚ್ಚವಾಗಲಿದೆ. ಎಕರೆಗೆ 6ರಿಂದ 8 ಕ್ವಿಂಟಲ್ ಬೀಜ ಸಿಗುತ್ತದೆ. ಬೀಜವನ್ನೇ ಮಾರಿದರೆ ಒಂದು ಕೆ.ಜಿಗೆ ₹ 30ರಿಂದ ₹ 40ರ ಒಳಗೆ ಸಿಗುತ್ತದೆ. ನಾವು ಸಾಮೆಯನ್ನು ಬೇಯಿಸಿ, ಒಣಗಿಸಿಟ್ಟುಕೊಳ್ಳುತ್ತೇವೆ. ಬೇಡಿಕೆಗೆ ತಕ್ಕಂತೆ ಅಕ್ಕಿ (ಸಂಸ್ಕರಿತ ಸಿರಿಧಾನ್ಯ) ಮಾಡಿ ಮಾರುತ್ತಿದ್ದೇವೆ. ಒಂದು ಕ್ವಿಂಟಲ್ ಬೀಜವನ್ನು ಸಂಸ್ಕರಿಸಿದರೆ ಸುಮಾರು 45 ಕೆ.ಜಿ. ಅಕ್ಕಿ ಸಿಗುತ್ತದೆ. ಒಂದು ಕೆ.ಜಿ. ಅಕ್ಕಿಯನ್ನು ₹ 150ರಿಂದ ₹ 200ರವರೆಗೂ ಮಾರಾಟ ಮಾಡುತ್ತೇವೆ. ಅಕ್ಕಿ ಮಾರಾಟ ಆಗದೇ ಉಳಿದರೆ ಹಪ್ಪಳ–ಸಂಡಿಗೆಯಂತಹ ಉಪ ಉತ್ಪನ್ನಗಳನ್ನು ಮಾಡುತ್ತಿದ್ದೇವೆ. ಇದರಿಂದ ವರ್ಷಪೂರ್ತಿ ಮನೆಯ ಮಂದಿಗೆ ಕೆಲಸ ಇರುತ್ತದೆ. ಜೊತೆಗೆ ಒಳ್ಳೆಯ ಲಾಭವೂ ಸಿಗುತ್ತಿದೆ' ಎಂದು ಶೋಭಾ ಮುಗುಳ್ನಕ್ಕರು.

'ಮನೆಯವರೆಲ್ಲ ಸೇರಿಕೊಂಡು ಸಿರಿಧಾನ್ಯ ಬೆಳೆದರೆ ಎಕರೆಗೆ ಖರ್ಚು ತೆಗೆದು ₹ 20 ಸಾವಿರ ಸಿಗುತ್ತದೆ. ನಾವೇ ಅಕ್ಕಿ ಮಾಡಿಸಿ ಮಾರಾಟ ಮಾಡಿದರೆ ಇನ್ನೂ ಹೆಚ್ಚಿನ ಲಾಭ ಪಡೆಯಬಹುದು. ಅಕ್ಕಿ ಮಾಡಿಸಿದ ಒಂದೆರಡು ತಿಂಗಳಲ್ಲಿ ಮಾರಾಟ ಆಗದಿದ್ದರೆ ಹುಳು ಕಾಣಿಸಿಕೊಳ್ಳುತ್ತದೆ. ಸರ್ಕಾರ ಸಿರಿಧಾನ್ಯ ಮೇಳಗಳನ್ನು ಆಗಾಗ ಆಯೋಜಿಸಿದರೆ ರೈತರಿಗೆ ಅನುಕೂಲವಾಗಲಿದೆ. ಎನ್‌ಜಿಒಗಳ ಮೂಲಕ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು' ಎಂಬುದು ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ಉತ್ತಂಗಿ ಗ್ರಾಮದ ರೈತ ಕಾಟ್ರಹಳ್ಳಿ ಕಲ್ಲಪ್ಪ ಅವರ ಬೇಡಿಕೆ.

'ಮಳೆಯಾಶ್ರಿತ ಒಣಭೂಮಿಯಲ್ಲಿ ಹೆಚ್ಚಿನ ಆರೈಕೆ ಇಲ್ಲದೇ ಸಿರಿಧಾನ್ಯ ಬೆಳೆಯುತ್ತದೆ. ಸರ್ಕಾರ ಪ್ರೋತ್ಸಾಹಧನವನ್ನೂ ನೀಡುತ್ತಿದೆ. ಖರ್ಚು ಕಡಿಮೆ ಇರುವುದರಿಂದ ಬೆಳೆ ಕೈಕೊಟ್ಟರೂ ಹೆಚ್ಚಿನ ನಷ್ಟವಂತೂ ಆಗುವುದಿಲ್ಲ. ಸಿರಿಧಾನ್ಯ ಬೀಜವನ್ನು ಮಿಲ್‌ಗೆ ತೆಗೆದುಕೊಂಡು ಹೋಗಿ ಮಾರಿದರೆ ಒಂದು ಕೆ.ಜಿ.ಗೆ ₹ 30ರಿಂದ ₹ 35ರವರೆಗೆ ಸಿಗುತ್ತದೆ. ಅದರ ಬದಲು ಅಕ್ಕಿ ಮಾಡಿ ಮಾರಿದರೆ ಕನಿಷ್ಠ ₹ 80ರಿಂದ ₹ 100 ಸಿಗುತ್ತದೆ. ಹೀಗಾಗಿ ಮನೆಯಲ್ಲೇ ಮಿಕ್ಸರ್‌ನಲ್ಲಿ ಅಕ್ಕಿ ಮಾಡಿ ಚಿತ್ರದುರ್ಗ–ದಾವಣಗೆರೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದೇವೆ. ಬರೀ ಬೀಜವನ್ನು ಮಾರಾಟ ಮಾಡುತ್ತೇವೆ ಎಂದರೆ ನಮ್ಮ ಊಟದ ಖರ್ಚಷ್ಟೇ ಹುಟ್ಟುತ್ತದೆ' ಎನ್ನುತ್ತಾರೆ ಚಳ್ಳಕೆರೆಯ ರೈತ ದಯಾನಂದಮೂರ್ತಿ.

ಭರವಸೆಯ ಬೆಳಕಾದ 'ಭೂಸಿರಿ ಮಿಲೆಟ್ಸ್'

ಹಾವೇರಿ ಜಿಲ್ಲೆಯ ಸಂಗೂರಿನಲ್ಲಿ ರೈತರೇ ಸೇರಿಕೊಂಡು ಸ್ಥಾಪಿಸಿದ 'ಭೂಸಿರಿ ಮಿಲೆಟ್ಸ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ'ಯು ಸಿರಿಧಾನ್ಯ ಬೆಳೆಯುವ ರೈತರ ಪಾಲಿಗೆ ಭರವಸೆಯಾಗಿದೆ.

ಸುಮಾರು 1,200 ರೈತರು ಬೆಳೆಯುವ ಸಿರಿಧಾನ್ಯಗಳನ್ನು ಖರೀದಿಸುತ್ತಿರುವ 'ಭೂಸಿರಿ ಮಿಲೆಟ್ಸ್' ಕಂಪನಿಯು, ಧಾನ್ಯವನ್ನು ಸಂಸ್ಕರಿಸಿ ದೇಶದ 20 ರಾಜ್ಯಗಳಲ್ಲಿ ಮಾರಾಟ ಮಾಡುವ ಸಂಪರ್ಕ ಜಾಲವನ್ನು ಸೃಷ್ಟಿಸಿಕೊಂಡಿದೆ.'ಉತ್ತರ ಕರ್ನಾಟಕದ ರೈತರಿಂದ ಸಿರಿಧಾನ್ಯಗಳನ್ನು ಖರೀದಿಸುತ್ತಿದ್ದೇವೆ. ಸಣ್ಣ ರೈತರು ಸಿರಿಧಾನ್ಯಗಳನ್ನು ಸಂಸ್ಕರಿಸಿ ಮಾರಾಟ ಮಾಡುವುದು ಕಷ್ಟದ ಕೆಲಸ. ರೈತರೇ ಸೇರಿಕೊಂಡು ಕಂಪನಿ ಮಾಡಿಕೊಂಡು ಒಂದು ಕಡೆ ಸಂಸ್ಕರಿಸಿ ಮಾರಾಟ ಮಾಡುವುದರಿಂದ ಬ್ರ್ಯಾಂಡ್ ಇಮೇಜ್ ಸಿಗಲಿದೆ. ಗುಣಮಟ್ಟವನ್ನೂ ಕಾಯ್ದುಕೊಳ್ಳಲು ಸಾಧ್ಯ' ಎನ್ನುತ್ತಾರೆ ಸಿರಿಧಾನ್ಯ ಬೆಳೆಯುವ ರೈತರೂ ಆಗಿರುವ 'ಭೂಸಿರಿ ಮಿಲೆಟ್ಸ್' ಕಂಪನಿಯ ಸಿಇಒ ಚಂದ್ರಕಾಂತ ಸಂಗೂರು.



ಕೋವಿಡ್ ಬಂದ ಬಳಿಕ ಸಿರಿಧಾನ್ಯಗಳಿಗೆ ಬೇಡಿಕೆ ಹೆಚ್ಚಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಾರಕ್ಕೆ ಎರಡು ದಿನ ಮಧ್ಯಾಹ್ನದ ಬಿಸಿಯೂಟದಲ್ಲಿ ಸಿರಿಧಾನ್ಯ ಬಳಕೆ ಮಾಡಿದರೆ ಬೆಳೆಗಾರರಿಗೂ ಅನುಕೂಲವಾಗಲಿದೆ

ಎಂ. ಶೋಭಾ
ರೈತ ಮಹಿಳೆ, ಆದ್ರಿಕಟ್ಟೆ, ಹೊಸದುರ್ಗ

ಸಂಸ್ಕರಣಾ ಘಟಕಗಳ ಸಂಕಟ

• ಸಂತೋಷ ಈ.ಚಿನಗುಡಿ

ಕಲಬುರಗಿ: ಸಿರಿಧಾನ್ಯಗಳಿಗೆ ನಿರಂತರವಾದ ಮಾರುಕಟ್ಟೆ ಇಲ್ಲ ಎಂಬುದೇ ಅವುಗಳ ಉತ್ಪಾದನೆ ಹಾಗೂ ಸಂಸ್ಕರಣಾ ಘಟಕಗಳ ಮುಂದಿರುವ ದೊಡ್ಡ ಸವಾಲು.

ಬೇಡಿಕೆ ಕಡಿಮೆ ಎಂಬ ಕಾರಣಕ್ಕೆ ಬೆಳೆಯುವವರ ಸಂಖ್ಯೆಯೂ ಕಡಿಮೆ. ಇದರಿಂದ ಸಂಸ್ಕರಣಾ ಘಟಕಗಳಿಗೆ ಬರುವ ಕಚ್ಚಾ ಸಾಮಗ್ರಿಯೂ ಅಷ್ಟಕ್ಕಷ್ಟೇ. ಈ ಯಂತ್ರವು ದುಡಿದು ಗಳಿಸಿದ್ದಕ್ಕಿಂತಲೂ ಅದರ ನಿರ್ವಹಣೆಗೇ ಹೆಚ್ಚು ವೆಚ್ಚವಾಗುತ್ತಿದೆ. ಲಕ್ಷಾಂತರ ರೂಪಾಯಿ ಹಾಕಿ ಸಂಸ್ಕರಣಾ ಘಟಕ ತೆರೆದಿರುವುದು 'ಆನೆ ಸಾಕಿದಂತಾಗಿದೆ' ಎಂಬುದು ಘಟಕಗಳ ಮಾಲೀಕರ ಅಭಿಮತ.

ಸಿರಿಧಾನ್ಯ ಸಂಸ್ಕರಿಸಿದ ಮೇಲೆ 15 ದಿನಗಳಲ್ಲೇ ಬಳಸಬೇಕು. ಇಲ್ಲದಿದ್ದರೆ ಹುಳ ಹಿಡಿಯುತ್ತದೆ. ಹೀಗಾಗಿ, ರೈತರು ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಧಾನ್ಯಗಳನ್ನು ಸಂಸ್ಕರಣಾ ಘಟಕಗಳಿಗೆ ತರುತ್ತಾರೆ. ಒಂದು ಗಂಟೆಯಲ್ಲಿ ಒಂದು ಟನ್ ಧಾನ್ಯ ಸಂಸ್ಕರಿಸಬಲ್ಲ ಯಂತ್ರದಲ್ಲಿ ಒಂದು ತಿಂಗಳಿಗೆ ಕನಿಷ್ಠ 10 ಟನ್ ಕೂಡ ಆಗುವುದಿಲ್ಲ.

'ಸಿರಿಧಾನ್ಯಗಳ ಉಪ ಉತ್ಪನ್ನ ಸಿದ್ಧಪಡಿಸುವ ತರಬೇತಿ ಅಗತ್ಯ. ಸಿರಿಧಾನ್ಯಗಳದ್ದೇ ಹೋಟೆಲ್, ಬೇಕರಿ, ಸ್ನ್ಯಾಕ್ಸ್‌ಗಳ ಮಳಿಗೆಗಳ ಆರಂಭಕ್ಕೆ ಸರ್ಕಾರ ಪ್ರೋತ್ಸಾಹ ನೀಡಬೇಕು' ಎನ್ನುತ್ತಾರೆ ರೈತ ಶಿವಾನಂದ ಬೆಳ್ಳೆ.

'2016–17ರಲ್ಲಿ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಎಕರೆಗೆ ₹ 10 ಸಾವಿರ ನೆರವು ನೀಡುವ ಯೋಜನೆ ಇತ್ತು. ಅದು ನಿಂತ ಮೇಲೆ ರೈತರು ಬೆಳೆಯುವುದು ಕಡಿಮೆಯಾಯಿತು' ಎನ್ನುತ್ತಾರೆ ಕೃಷಿ ವಿಜ್ಞಾನಿ ರಾಜು ತೆಗ್ಗಳ್ಳಿ.

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆ (ಹೈದರಾಬಾದ್)ಯು ರೈತ ಉತ್ಪಾದಕರ ಸಂಸ್ಥೆಗಳನ್ನು ಕಟ್ಟಿ, ಅದರ ಮೂಲಕ ಸಂಸ್ಕರಣಾ ಘಟಕ ಸ್ಥಾಪನೆ ಮಾಡುವ ಪ್ರಾಯೋಗಿಕ ಯೋಜನೆ ಆರಂಭಿಸಿದೆ. ಮೂರು ವರ್ಷಗಳ ನಂತರ ಘಟಕವು ರೈತರ ಗುಂಪಿಗೆ ಸೇರುತ್ತದೆ. ರಾಜ್ಯದಲ್ಲಿ ಈ ವರ್ಷ ಇಂಥ 21 ಸಿರಿಧಾನ್ಯ ಸಂಸ್ಥೆಗಳನ್ನು ಕಟ್ಟಲಾಗಿದೆ. ರೈತರಿಗೆ ₹ 100ಕ್ಕೆ ಕೆ.ಜಿ. ಯಂತೆ ಬಿತ್ತನೆಬೀಜಗಳನ್ನೂ ಇದು ಸರಬರಾಜು ಮಾಡುತ್ತಿದೆ. ಆಸಕ್ತರು 04024599382 ಸಂಪರ್ಕಿಸಬಹುದು.



ಕಲಬುರಗಿಯಲ್ಲಿರುವ ಸಿರಿಧಾನ್ಯಗಳ ಸಂಸ್ಕರಣಾ ಘಟಕ

₹ 47 ಲಕ್ಷ ವೆಚ್ಚದ ಸಂಸ್ಕರಣಾ ಯಂತ್ರ

• ನಾಗರಾಜ ಚಿನಗುಂಡಿ

ರಾಯಚೂರು: ಸಿರಿಧಾನ್ಯ ಬೆಳೆಯುವ ರೈತರ ಅನುಕೂಲಕ್ಕಾಗಿ ರಾಯಚೂರು ವಿಶ್ವವಿದ್ಯಾಲಯದಲ್ಲಿ ₹ 47 ಲಕ್ಷ ವೆಚ್ಚದಲ್ಲಿ ಸಂಸ್ಕರಣಾ ಯಂತ್ರ ಹಾಕಲಾಗಿದೆ. ಮೂರು ತಿಂಗಳಿಂದ ಯಂತ್ರವು ಕೆಲಸ ಮಾಡುತ್ತಿದೆ. ಈ ಯಂತ್ರದಿಂದ ಗಂಟೆಗೆ ಒಂದು ಟನ್ ಸಿರಿಧಾನ್ಯ ಸಂಸ್ಕರಣೆ ಮಾಡುವುದರ ಜೊತೆಗೆ ಪ್ಯಾಕಿಂಗ್ ಹಾಗೂ ಲೇಬಲಿಂಗ್ ಕೂಡ ಮಾಡಬಹುದಾಗಿದೆ. ಸಂಸ್ಕರಣೆ ಮಾಡಲು ಪ್ರತಿ ಕೆ.ಜಿ.ಗೆ ₹ 5 ಹಾಗೂ ಪ್ಯಾಕಿಂಗ್ ಹಾಗೂ ಲೇಬಲಿಂಗ್‌ಗೆ ಹೆಚ್ಚುವರಿ ₹ 2 ಶುಲ್ಕ ಪಡೆಯಲಾಗುತ್ತದೆ.

'ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಿಂದ ರೈತರು ಸಂಸ್ಕರಣೆಗಾಗಿ ಸಿರಿಧಾನ್ಯಗಳನ್ನು ತೆಗೆದುಕೊಂಡು ಬರುತ್ತಿದ್ದಾರೆ. ಸಿರಿಧಾನ್ಯ ಮೌಲ್ಯವರ್ಧನೆ ತರಬೇತಿ ವ್ಯವಸ್ಥೆಯೂ ವಿಶ್ವವಿದ್ಯಾಲಯದಲ್ಲಿದೆ' ಎನ್ನುವುದು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಡಾ.ಉದಯಕುಮಾರ್ ನಿಡೋಣಿ ಅವರ ಹೇಳಿಕೆ.

40 ಎಚ್‌ಪಿ ಸಾಮರ್ಥ್ಯದ ಸಂಸ್ಕರಣಾ ಘಟಕ ಹಾಕಿದ್ದು, ಕಚ್ಚಾ ಸಾಮಗ್ರಿ ಕೊರತೆಯಿಂದ ಸ್ಥಗಿತಗೊಂಡಿದೆ. ಸರ್ಕಾರ ಇಂಥ ಸಮಸ್ಯೆಗಳನ್ನು ನಿವಾರಿಸಬೇಕು

ಡಾ.ದೇವಿಂದ್ರಪ್ಪ ಕಟ್ಟಿಮನಿ
ಸಿಇಒ,ಕಲಬುರಗಿ, ಯಾದಗಿರಿ, ಬೀದರ್ ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟ

ಆರೋಗ್ಯಕರ ಜೀವನಕ್ಕೆ ಧಾನ್ಯವೇ 'ಸಿರಿ'

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನಶೈಲಿ ಹಾಗೂ ಆಹಾರ ಪದ್ಧತಿಯಿಂದ ಕ್ಯಾನ್ಸರ್, ಹೃದಯ ಸಮಸ್ಯೆ, ಮಧುಮೇಹ, ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳು ರಾಜ್ಯದಲ್ಲೂ ಹೆಚ್ಚುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಎಲ್ಲ ವಯೋಮಾನದವರಲ್ಲೂ ಆರೋಗ್ಯ ಸಂಬಂಧಿ ಸಮಸ್ಯೆಗಳು ಕಾಡುತ್ತಿವೆ. ಈ ವರ್ಷ ಕೋವಿಡ್ ನಡುವೆಯೂ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ 12.80 ಲಕ್ಷ ಮಂದಿ ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ವಿವಿಧ ಸಾಂಕ್ರಾಮಿಕವಲ್ಲದ ರೋಗಗಳ ಸಂಬಂಧ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಎನ್‌ಸಿಡಿ ಕ್ಲಿನಿಕ್‌ಗಳಿಗೆ ಭೇಟಿ ನೀಡಿದ್ದಾರೆ. 2019–20ನೇ ಸಾಲಿನಲ್ಲಿ ಈ ಸಂಖ್ಯೆ 36.07 ಲಕ್ಷವಿತ್ತು.

ಕ್ಯಾನ್ಸರ್, ಮಧುಮೇಹದಂಥ ಕಾಯಿಲೆ ಹೆಚ್ಚಳಕ್ಕೆ ಪಾಶ್ಚಿಮಾತ್ಯ ಆಹಾರ ಪದ್ಧತಿಯೂ ಕಾರಣ ಎಂದು ಕಳವಳ ವ್ಯಕ್ತಪಡಿಸುವ ಆಹಾರ ತಜ್ಞರು, ಆರೋಗ್ಯ ವೃದ್ಧಿ ಹಾಗೂ ರೋಗಗಳ ನಿಯಂತ್ರಣಕ್ಕೆ ಅಧಿಕ ಪೌಷ್ಟಿಕಾಂಶ ಒಳಗೊಂಡ ರಾಗಿ, ಜೋಳ, ಸಜ್ಜೆ, ನವಣೆ ಸೇರಿದಂತೆ ವಿವಿಧ ಸಿರಿಧಾನ್ಯಗಳನ್ನು ದೈನಂದಿನ ಆಹಾರದಲ್ಲಿ ಬಳಸಬೇಕೆಂದು ಸೂಚಿಸುತ್ತಾರೆ.



ಡಾ. ಉಷಾ



ಡಾ.ಕೆ.ಸಿ. ರಘು

'ಸರಿಯಾದ ಆಹಾರ ಪದ್ಧತಿ ಅಳವಡಿಸಿಕೊಳ್ಳದ ಪರಿಣಾಮ ಮನುಷ್ಯನಲ್ಲಿ ಹೊಸ ಹೊಸ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ದಿನಕ್ಕೆ ಒಂದು ಹೊತ್ತು ಸಿರಿಧಾನ್ಯದ ಆಹಾರವನ್ನು ಸೇವಿಸಿದರೆ ಸಾಕಾಗುತ್ತದೆ. ಅದರೊಂದಿಗೆ ಹಾಲು ಮತ್ತು ಮೊಸರಿಗೆ ಪ್ರಾಮುಖ್ಯತೆ ನೀಡಿದರೆ ಒಳ್ಳೆಯದು. ಮೊಳಕೆ ಬರಿಸಿ, ಹುರಿದು, ಹುಳಿ ಬರಿಸುವುದು ಸೇರಿದಂತೆ ವಿವಿಧ ಬಗೆಯಲ್ಲಿ ಸಿರಿಧಾನ್ಯ ಉಪಯೋಗಿಸಬಹುದು' ಎಂದು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಪ್ರಾಧ್ಯಾಪಕಿ ಡಾ. ಉಷಾ ರವೀಂದ್ರ ವಿವರಿಸಿದರು.

'ಸಿರಿಧಾನ್ಯ ಎಲ್ಲ ರೋಗಗಳಿಗೆ ರಾಮಬಾಣ ಎನ್ನಲಾಗದು. ಇವುಗಳನ್ನು ಪಾಲಿಶ್ ಮಾಡಿ, ಸೇವಿಸಿದರೆ ಉತ್ತಮ ಫಲಿತಾಂಶ ಸಿಗದು. ಒಳ್ಳೆಯ ಆಹಾರ ಪದ್ಧತಿಯಿಂದ ಕಾಯಿಲೆ ಬರುವುದನ್ನು ಶೇ 90 ರಷ್ಟು ಕಡಿಮೆ ಮಾಡಬಹುದು' ಎನ್ನುತ್ತಾರೆ ಆಹಾರ ತಜ್ಞ ಡಾ.ಕೆ.ಸಿ. ರಘು.

ಸಿರಿಧಾನ್ಯಕ್ಕೆ ಹೊಸ ಬ್ರ್ಯಾಂಡ್ ಸೃಷ್ಟಿ!

• ಆರ್.ಜಿತೇಂದ್ರ

ರಾಮನಗರ: ಸಿರಿಧಾನ್ಯಕ್ಕೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂಬ ಕಾರಣಕ್ಕೆ, ಈ ರೈತ ತಾವೇ ಬ್ರ್ಯಾಂಡ್ ಸೃಷ್ಟಿಸಿ ಮಾರಾಟ ಆರಂಭಿಸಿದರು. 'ರಾಮ್‌ಗೋಲ್ಡ್' ಹೆಸರಿನ ಈ ಉತ್ಪನ್ನವು ಈಗ ದೇಶ–ವಿದೇಶಗಳಿಗೂ ತಲುಪುತ್ತಿದೆ.

ರಾಮನಗರ ತಾಲ್ಲೂಕಿನ ಬಿಳಗುಂಬದವರಾದ ಬಿ.ಸಿ. ವಾಸು, ಸಿರಿಧಾನ್ಯ ಕೃಷಿ ಜೊತೆಗೆ ಅದರ ಸಂಸ್ಕರಣೆ–ಮಾರಾಟದ ಮೂಲಕ ಉತ್ತಮ ಬದುಕು ಕಟ್ಟಿಕೊಂಡಿದ್ದಾರೆ. ಕುಟುಂಬದವರ ಜೊತೆಗೆ ಸುತ್ತಲಿನ ನಾಲ್ಕಾರು ಮಂದಿಗೂ ಉದ್ಯೋಗದಾತರಾಗಿ ಹೊರಹೊಮ್ಮಿದ್ದಾರೆ.



ವಾಸು

ವಾಸು ಆರು ವರ್ಷದ ಹಿಂದೆ ತಮ್ಮ ತೋಟದಲ್ಲೇ ಸಿರಿಧಾನ್ಯ ಸಂಸ್ಕರಣಾ ಘಟಕ ಸ್ಥಾಪಿಸಿದ್ದು, ಇಲ್ಲಿನ ಉತ್ಪನ್ನಗಳನ್ನು 'ರಾಮ್‌ಗೋಲ್ಡ್' ಹೆಸರಿನ ಮೂಲಕ ಮಾರಾಟ ಮಾಡಲಾಗುತ್ತಿದೆ. ₹ 65 ಲಕ್ಷ ಮೂಲ ಬಂಡವಾಳದೊಂದಿಗೆ ಆರಂಭವಾದ ಈ ಘಟಕವು ಸುತ್ತಮುತ್ತಲಿನ ರೈತರ ಉತ್ಪನ್ನಗಳಿಗೂ ಮಾರುಕಟ್ಟೆ ಒದಗಿಸುತ್ತಿದೆ. ಧಾನ್ಯಗಳ ಮೌಲ್ಯವರ್ಧನೆಯಲ್ಲಿ ಅವರು ಸಿಎಫ್‌ಟಿಆರ್‌ಐ ಮೊದಲಾದ ಸಂಸ್ಥೆಗಳ ಮಾರ್ಗದರ್ಶನ ಪಡೆಯುತ್ತಿದ್ದಾರೆ.

ಲಾಕ್‌ಡೌನ್‌ಗೆ ಮುನ್ನ, ವಾಸು ತಿಂಗಳಿಗೆ 10 ಟನ್‌ನಷ್ಟು ಸಿರಿಧಾನ್ಯ ಮಾರಾಟ ಮಾಡುತ್ತಿದ್ದರು. ಕೋವಿಡ್ ಅವಧಿಯಲ್ಲಿ ಕುಸಿದ ಮಾರಾಟ ಇದೀಗ ಚೇತರಿಕೆ ಕಾಣುತ್ತಿರುವುದಾಗಿ ಅವರು ಹೇಳುತ್ತಾರೆ.

ರಾಮನಗರದ ಜಾನಪದ ಲೋಕದ ಮುಂಭಾಗ 'ಎಚ್‌.ಡಿ. ದೇವೇಗೌಡ ಸಿರಿಧಾನ್ಯ ಮಳಿಗೆ' ಹಾಗೂ ರಾಮನಗರ ಬಸ್ ನಿಲ್ದಾಣದ ಸಮೀಪ ಇವರದ್ದೇ ಆದ ಸಿರಿಧಾನ್ಯ ಮಾರಾಟ ಮಳಿಗೆಗಳಿವೆ. ಹಾಪ್‌ಕಾಮ್ಸ್‌ನಲ್ಲೂ ಈ ಉತ್ಪನ್ನಗಳು ಸಿಗುತ್ತವೆ. ಜೊತೆಗೆ, ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡಿದರೆ ಮನೆಗೇ ಕೊರಿಯರ್ ಮೂಲಕ ಕಳುಹಿಸುವ ವ್ಯವಸ್ಥೆಯೂ ಇದೆ.

'ಎಥ್ನಿಕ್ ಕೆಫೆ'ಯಲ್ಲಿ ಉತ್ತಮ ವಹಿವಾಟು

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಹುಲಕೋಟಿಯ ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿರುವ ಎಥ್ನಿಕ್ ಕೆಫೆ ಮತ್ತು ಸಾವಯವ ಆಹಾರ ಮಳಿಗೆ ಉತ್ತಮ ವಹಿವಾಟು ನಡೆಸುವುದರ ಜತೆಗೆ ಸಿರಿಧಾನ್ಯಗಳಿಂದ ತಯಾರಾದ ತಿನಿಸುಗಳ ರುಚಿಯನ್ನು ಜನರಿಂದ ಜನರಿಗೆ ದಾಟಿಸುವ ಕೆಲಸವನ್ನೂ ಮಾಡುತ್ತಿದೆ.

'ಕೆಫೆಗೆ ಬಂದವರು ಸಿರಿಧಾನ್ಯದಿಂದ ತಯಾರಾದ ತಿಂಡಿ– ತಿನಿಸುಗಳು ಇಷ್ಟವಾದಲ್ಲಿ ಪದಾರ್ಥಗಳನ್ನೂ ಕೊಂಡೊಯ್ಯುತ್ತಾರೆ' ಎನ್ನುತ್ತಾರೆ ಹೋಟೆಲ್‌ನ ವ್ಯವಸ್ಥಾಪಕ ಬಸವರಾಜ ಹಣ್ಣಿನಾಯ್ಕರ್.

ಎಥ್ನಿಕ್ ಕೆಫೆಗೆ ಆಗಾಗ ಭೇಟಿ ನೀಡುವ ನವಲಗುಂದದ ಬಸವನಗೌಡ ಪಾಟೀಲರು ಸಿರಿಧಾನ್ಯದ ಪಡ್ಡು ಸವಿಯುತ್ತಿದ್ದರು. 'ಸಿರಿಧಾನ್ಯಗಳಿಂದ ತಯಾರಾದ ತಿನಿಸುಗಳ ಬೆಲೆ ಸ್ವಲ್ಪ ದುಬಾರಿ ಅನಿಸಿದರೂ ಆರೋಗ್ಯಕ್ಕೆ ಅತ್ಯುತ್ತಮ. ಕಲಬೆರಕೆ ವಸ್ತುಗಳಿಂದ ತಯಾರಾದ ತಿಂಡಿ ತಿನಿಸುಗಳು ಬಾಯಿಗೆ ರುಚಿ ನೀಡುತ್ತವೆ. ಆದರೆ ಸಾವಯವ, ಸಿರಿಧಾನ್ಯಗಳಿಂದ ತಯಾರಿಸಿದ ತಿನಿಸುಗಳನ್ನು ತಿಂದಾಗಲಷ್ಟೇ ನಿಜವಾದ ರುಚಿ ನಾಲಗಗೆ ತಿಳಿಯುತ್ತದೆ' ಎಂದು ಪ್ರತಿಕ್ರಿಯಿಸಿದರು.



ಮಾರಾಟಕ್ಕಿಟ್ಟ ಸಾವಯವ ಪದಾರ್ಥಗಳು ಹಾಗೂ ಸಿರಿಧಾನ್ಯಗಳು

'ಸಾವಯವ, ಸಿರಿಧಾನ್ಯ ಕೆಫೆ ಚೆನ್ನಾಗಿ ನಡೆಯುತ್ತಿದೆ. ಸ್ಥಳೀಯರಿಗಿಂತಲೂ ಹೈವೆಯಲ್ಲಿ ಅಡ್ಡಾಡುವ ಗ್ರಾಹಕರೇ ನಮ್ಮ ಕೆಫೆಯ ಗ್ರಾಹಕರು. ಒಮ್ಮೆ ಇಲ್ಲಿಗೆ ಬಂದು ರುಚಿ ನೋಡಿದವರು ಮತ್ತೊಮ್ಮೆ ಖಂಡಿತ ಬರುತ್ತಾರೆ. ರೆಸ್ಟೊರೆಂಟ್ ಅತ್ಯುತ್ತಮ ವಹಿವಾಟು ನಡೆಸುತ್ತಿದೆ ಅಂತ ಹೇಳುವಂತಿಲ್ಲ. ಆದರೆ, ನಷ್ಟದಲ್ಲೇನೂ ನಡೆಯುತ್ತಿಲ್ಲ. ವಾರಾಂತ್ಯದಲ್ಲಿ ವಹಿವಾಟು ಜೋರಾಗಿರುತ್ತದೆ' ಎನ್ನುತ್ತಾರೆ ಕೆವಿಕೆ ಕಾರ್ಯಕ್ರಮ ಸಂಯೋಜಕ ಡಾ. ಎಲ್. ಜಿ.ಹಿರೇಗೌಡರ.

ಸಿರಿಧಾನ್ಯ: ಸಂಸ್ಕರಣೆಯೇ ಸವಾಲು!

ಒಂದನೇ ಪುಟದಿಂದ

ಈಗಿರುವ ಕೆಲವು ಮಿಲ್‌ಗಳಲ್ಲಿ ಸಿರಿಧಾನ್ಯ ಸಂಸ್ಕರಿಸಿದಾಗ ಶೇ 100 ಶುದ್ಧ ಅಕ್ಕಿ ಸಿಗುವುದು ತೀರಾ ಕಡಿಮೆ. ಇದನ್ನು ಮತ್ತೆ ಸ್ವಚ್ಛಗೊಳಿಸಲು ವೆಚ್ಚ– ಶ್ರಮ ಎರಡೂ ಹೆಚ್ಚು. ಎಲ್ಲ ಬಗೆಯ ಸಿರಿಧಾನ್ಯಗಳನ್ನು ಒಂದೇ ಯಂತ್ರದಲ್ಲಿ ಸಂಸ್ಕರಿಸುವ ವ್ಯವಸ್ಥೆಯಿನ್ನೂ ಬಂದಿಲ್ಲ ಎನ್ನುತ್ತಾರೆ ಕೃಷಿಕ ಶಂಕರ ಲಂಗಟಿ.

ಸಬ್ಸಿಡಿ ಮೂಲಕ ಖರೀದಿಸಿ ಬಳಸುತ್ತಿರುವ ಸಂಸ್ಕರಣಾ ಯಂತ್ರಗಳ ಗುಣಮಟ್ಟವೂ ಅಷ್ಟಕ್ಕಷ್ಟೆ ಎನ್ನುವುದು ಅವುಗಳನ್ನು ಬಳಸುತ್ತಿರುವವರ ಅಭಿಪ್ರಾಯ. ಇದರ ನಡುವೆ ರಾಜ್ಯದಲ್ಲಿರುವ ಸಿರಿಧಾನ್ಯದ ಜನಪ್ರಿಯತೆ–ಬೇಡಿಕೆಯು ಬಂಡವಾಳವಾಗಿದ್ದು ತಮಿಳುನಾಡಿನ ಬೆರಳೆಣಿಕೆಯಷ್ಟು ಮಿಲ್ಲರ್‌ಗಳಿಗೆ. ಅವರು ಅಗ್ಗದ ಬೆಲೆಗೆ ಸಿರಿಧಾನ್ಯ ಅಕ್ಕಿ ತಂದು ರಾಜ್ಯದಲ್ಲಿ ಮಾರುತ್ತಿದ್ದಾರೆ. ಹೀಗಾಗಿ, ಸ್ಥಳೀಯ ರೈತರಿಂದ ಖರೀದಿ ಕಡಿಮೆಯಾಗಿದೆ. ರೈತರಲ್ಲೂ ಬೆಳೆಯುವ ಆಸಕ್ತಿ ಕಡಿಮೆಯಾಗುತ್ತಿದೆ' ಎಂದು ವಿಶ್ಲೇಷಿಸುತ್ತಾರೆ ಸಹಜ ಸಮೃದ್ಧ ಕೃಷಿಕರ ಬಳಗದ ಸಂಚಾಲಕ ಜಿ.ಕೃಷ್ಣಪ್ರಸಾದ್.

ಖರ್ಚೆಲ್ಲ ಸೇರಿ ಒಂದು ಕೆ.ಜಿ. ನವಣೆಗೆ ₹70– ₹75, ಸಾಮೆಗೆ ₹100– ₹120 ಬೆಲೆ ನಿಗದಿ ಮಾಡಬೇಕು ಎಂಬುದು ಹಾಸನ- ಕೊಡಗು ಜಿಲ್ಲೆಗಳ ಪ್ರಾಂತೀಯ ಸಾವಯವ ಕೃಷಿಕರ ಸಹಕಾರ ಸಂಘಗಳ ಒಕ್ಕೂಟ ಸಿಇಒ ಜಯಪ್ರಸಾದ್ ಬಿ.ಸಿ ಅಭಿಪ್ರಾಯ. 'ತಮಿಳುನಾಡು, ಆಂಧ್ರದಲ್ಲಿರುವಂತೆ ಹೈಟೆಕ್ ಯಂತ್ರ ಬಳಸಿ ದೊಡ್ಡ ಪ್ರಮಾಣದಲ್ಲಿ ಧಾನ್ಯ ಸಂಸ್ಕರಿಸಿದರೆ ಗುಣಮಟ್ಟದ ಅಕ್ಕಿ ಜೊತೆಗೆ ಸ್ವಲ್ಪ ಕಡಿಮೆ ದರಕ್ಕೆ ಮಾರಬಹುದು. ರೈತರ ಮಟ್ಟದಲ್ಲಿ ಅಂಥ ಯಂತ್ರಗಳ ಅನುಷ್ಠಾನ ಅಸಾಧ್ಯ' ಎನ್ನುತ್ತಾರೆ ಸಿರಾ ಸಮೀಪದ ಹೆಂದೊರೆಯ ಸಿರಿಧಾನ್ಯ ಬೆಳೆಗಾರ ರಘು.

ಪ್ರೋತ್ಸಾಹಧನದ ಬದಲು ಮಾರುಕಟ್ಟೆ ಖಾತರಿ ಕೊಟ್ಟರೆ ಸಾಕು. ಸಿರಿಧಾನ್ಯ ಬೆಳೆಯುವರ ಸಂಖ್ಯೆ ಹೆಚ್ಚಾಗುತ್ತದೆ ಎನ್ನುತ್ತಾರೆ ಅಜ್ಜಂಪುರ ಸಮೀಪದ ಭೂತನಹಳ್ಳಿ ಕೃಷಿಕ ಈಶ್ವರಪ್ಪ.

ಆಂಧ್ರಪ್ರದೇಶದಲ್ಲಿ 'ಮಿಷನ್ ಆನ್ ಮಿಲೆಟ್ಸ್' ಅಡಿಯಲ್ಲಿ ರೈತರಿಂದ ಸಿರಿಧಾನ್ಯ ಖರೀದಿಸಿ ಪಡಿತರ, ಅಂಗನವಾಡಿ ಮೂಲಕ ವಿತರಿಸಲಾಗುತ್ತಿದೆ. ಛತ್ತೀಸ್‌ಗಡದಲ್ಲೂ 'ಮಿಲ್ಲೆಟ್ ಮಿಷನ್' ಆರಂಭವಾಗಿದೆ. ಒಡಿಶಾದಲ್ಲೂ ಬೆಂಬಲ ಬೆಲೆಯಡಿ ಸಿರಿಧಾನ್ಯ ಖರೀದಿಸಲಾಗುತ್ತಿದೆ. ಈ ಮಾದರಿಗಳನ್ನು ಕರ್ನಾಟಕ ಸರ್ಕಾರವೂ ಅನುಸರಿಸಬಹುದು ಎನ್ನುತ್ತಾರೆ ಕೃಷ್ಣಪ್ರಸಾದ್.

ದೊಡ್ಡ ಯಂತ್ರ ಅಗತ್ಯ

ದೊಡ್ಡ ಪ್ರಮಾಣದ, ಆಧುನಿಕ ತಂತ್ರಜ್ಞಾನವಿರುವ ಯಂತ್ರಗಳ ಕೊರತೆಯಿಂದಾಗಿ, ನಮ್ಮ ರಾಜ್ಯದ ಸಿರಿಧಾನ್ಯಗಳು ತಮಿಳುನಾಡಿನಲ್ಲಿ ಸಂಸ್ಕರಣೆಗೊಂಡು, ರಾಜ್ಯಕ್ಕೆ ಬರುತ್ತಿವೆ. ಸರ್ಕಾರ ದೊಡ್ಡ ಯಂತ್ರಗಳ ಅಳವಡಿಕೆಗೆ ನೆರವಾದರೆ, ಜನರಿಗೆ ಕಡಿಮೆ ಬೆಲೆಗೆ ಧಾನ್ಯಗಳು ಲಭ್ಯವಾಗುವಂತೆ ಮಾಡಬಹುದು.

ಆರ್.ಕೆ.ಮಧು, ಸಿಇಒ ತುಮಕೂರು ಜಿಲ್ಲೆ ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟ

(ಪೂರಕ ಮಾಹಿತಿ : ಕೆ.ಜೆ. ಮರಿಯಪ್ಪ, ತುಮಕೂರು, ಸಿದ್ದು ಆರ್.ಜಿ.ಹಳ್ಳಿ, ಹಾವೇರಿ)

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 28-11-1996

• ಚಂಡಮಾರುತ: ಆಂಧ್ರಕ್ಕೆ 650 ಕೋಟಿ ನೆರವು

ನವದೆಹಲಿ, ನ. 27 (ಪಿಟಿಐ)– ಆಂಧ್ರ ಪ್ರದೇಶದಲ್ಲಿ ಇತ್ತೀಚೆಗೆ ಸಂಭವಿಸಿದ ಚಂಡಮಾರುತ ಸಂತ್ರಸ್ತರ ಪರಿಹಾರ ಹಾಗೂ ಪುನರ್ವಸತಿಗಾಗಿ 650 ಕೋಟಿ ರೂಪಾಯಿಗಳ ವಿಶೇಷ ನೆರವನ್ನು ಪ್ರಧಾನಿ ಎಚ್‌.ಡಿ. ದೇವೇಗೌಡರು ಇಂದು ಪ್ರಕಟಿಸಿದರು.

ನೈಸರ್ಗಿಕ ವಿಕೋಪಗಳ ಸಂಬಂಧ ಯಾವ ರಾಜ್ಯವು ಇದುವರೆಗೆ ಇಷ್ಟೊಂದು ಬೃಹತ್ ಮೊತ್ತದ ಕೇಂದ್ರದ ನೆರವನ್ನು ಪಡೆದಿರಲಿಲ್ಲ ಎನ್ನಲಾಗಿದ್ದು, ಇದರಿಂದ ಈಗ ಆಂಧ್ರ ಅಂಥ ನೆರವು ಪಡೆದ ಮೊದಲ ರಾಜ್ಯವಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 28-11-1971

• ಈ ವಾರ ಸಂಸತ್ತಿನಲ್ಲಿ ಸಂವಿಧಾನದ 25ನೇ ತಿದ್ದುಪಡಿ ಮಂಡನೆ

ನವದೆಹಲಿ, ನ. 27– ಲೋಕಸಭೆಯಲ್ಲಿ ನವೆಂಬರ್ 30 ಮತ್ತು ಡಿಸೆಂಬರ್ 1ರಂದು ಪರಿಶೀಲನೆಗೆ ಬರಲಿರುವ 25ನೇ ಸಂವಿಧಾನ ತಿದ್ದುಪಡಿ ಮಸೂದೆಯಲ್ಲಿ ಮತ್ತಷ್ಟು ತಿದ್ದುಪಡಿಗಳನ್ನು ಸೇರಿಸಲು ಸರ್ಕಾರ ನಿರ್ಧರಿಸಿದೆಯೆಂದು ತಿಳಿದು ಬಂದಿದೆ.

ಕೋಮು ಅಥವಾ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿ ನಡೆಸುತ್ತಿರುವ ಶಿಕ್ಷಣ ಸಂಸ್ಥೆ ಆಸ್ತಿಯನ್ನು ಕಡ್ಡಾಯವಾಗಿ ವಶಪಡಿಸಿಕೊಳ್ಳುವ ಪ್ರಕರಣದಲ್ಲಿ ಅದಕ್ಕೆ ಮಾರುಕಟ್ಟೆ ದರಕ್ಕಿಂತ ಕಡಿಮೆ ಇಲ್ಲದಂತೆ ಪರಿಹಾರ ನೀಡಬೇಕೆಂದು ಈ ಪೈಕಿ ಒಂದು ತಿದ್ದುಪಡಿಯಲ್ಲಿ ಸೂಚಿಸಲಾಗಿದೆ.

ದಿನ ಭವಿಷ್ಯ

ಭಾನುವಾರ 28 ನವೆಂಬರ್ 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಅನೂರಾಧಾ ನವಮೀ ಗಂ. 43-11 (ರಾ. 11-47) ಭಾನುವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 27-34 (ಸಾ. 5-32) ವಿಷ್ಕಂಭ ನಾಮ ಯೋಗ ಗಂ. 47-34 ತೈತಲ ಕರಣ ಗಂ. 13-42 ವಿಷ ಗಂ. 45-32 ಅಮೃತ ಗಂ 10-42 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-26 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 5

ಮೇಷ: ಕೈಗೊಂಡ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ಆರ್ಥಿಕ ಸುಧಾರಣೆ. ಬಹುದಿನಗಳಿಂದ ನ್ಯಾಯಾಲಯದಲ್ಲಿರುವ ವ್ಯಾಜ್ಯವು ನಿಮಗೆ ಅನುಕೂಲಕರ ರೀತಿಯಲ್ಲಿ ಇತ್ಯರ್ಥವಾಗುವುದು.

ವೃಷಭ: ವೃತ್ತಿ ಬದಲಾವಣೆ ಅಥವಾ ವರ್ಗಾವಣೆಯ ಸಾಧ್ಯತೆ ಕಂಡುಬರುವುದು. ಮಹಿಳಾ ರಾಜಕಾರಣಿಗಳಿಗೆ ಅದೃಷ್ಟದ ದಿನ. ಕೃಷಿಕರಿಗೆ ಹೆಚ್ಚಿನ ಧನಾಗಮನದ ನಿರೀಕ್ಷೆ. ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಡುವಿರಿ.

ಮಿಥುನ: ಮೇಲಾಧಿಕಾರಿಗಳಿಂದ ಪ್ರಶಂಸೆ, ಪ್ರೋತ್ಸಾಹಗಳು ಉದ್ಯೋಗದಲ್ಲಿ ಹೆಚ್ಚಿನ ಆಸಕ್ತಿ ಮೂಡುವುದು. ಪ್ರಾಪ್ತ ವಯಸ್ಕರಿಗೆ ಉತ್ತಮ ಸಂಬಂಧ ಕೂಡಿಬರಲಿದೆ. ಧಾರ್ಮಿಕ ಕಾರ್ಯ ನಡೆಸಲಿದ್ದೀರಿ.

ಕರ್ಕಾಟಕ: ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿಯಾಗುವ ಸಾಧ್ಯತೆ. ನೌಕರಸ್ಥರು ಸಹೋದ್ಯೋಗಿಗಳಿಂದ ಮುಜುಗರದ ಸನ್ನಿವೇಷಗಳನ್ನು ಎದುರಿಸಬೇಕಾದೀತು. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನವಾಗಿದೆ.

ಸಿಂಹ: ಕೆಲಸ ಕಾರ್ಯಗಳಲ್ಲಿ ಆತುರತೆ ಸಲ್ಲದು. ತೊಡಗಿಕೊಂಡ ಕೆಲಸಗಳಲ್ಲಿ ಶ್ರದ್ಧೆಯಿಂದಾಗಿ ಪ್ರಗತಿಯನ್ನು ಕಾಣುವಿರಿ. ಪ್ರೇಮ ಪ್ರಕರಣದಿಂದ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಕೃಷಿಕರಿಗೆ ಸಂಕಷ್ಟ ತಲೆದೋರುವ ಸಾಧ್ಯತೆ.

ಕನ್ಯಾ: ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಸ್ವಜನರಿಂದಲೇ ವಂಚನೆಯ ಸಾಧ್ಯತೆ. ಎಚ್ಚರಿಕೆಯಿಂದಿರುವುದು ಒಳಿತು. ಹಣಕಾಸಿನ ವಿಚಾರದಲ್ಲಿ ಚೇತರಿಕೆ ಕಂಡುಬರುವುದು.

ತುಲಾ: ಮನೆಗೆ ಅಪರೂಪದ ವಿಶೇಷ ವ್ಯಕ್ತಿಗಳ ಆಗಮನ ಸಾಧ್ಯತೆ. ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ವ್ಯಾಪಾರಸ್ಥರಿಗೆ ವಿಶೇಷ ಲಾಭದ ನಿರೀಕ್ಷೆ.

ವೃಶ್ಚಿಕ: ಆರೋಗ್ಯದಲ್ಲಿ ಗಣನೀಯ ಚೇತರಿಕೆ ಕಂಡುಕೊಳ್ಳುವಿರಿ. ಆರ್ಥಿಕ ಪ್ರಗತಿಯಿಂದಾಗಿ ಸಂತಸ ಮೂಡಿಬರಲಿದೆ. ಮಕ್ಕಳಿಂದ ವಿಶೇಷ ಗೌರವ ಪ್ರಾಪ್ತಿಯಾಗುವುದು. ಹಿರಿಯರ ಹಿತವಚನಗಳನ್ನು ಗೌರವಿಸುವುದು ಉತ್ತಮ.

ಧನು: ಅನಗತ್ಯ ಕೆಲಸ ಕಾರ್ಯಗಳಲ್ಲಿ ತೊಡಗುವುದು ಬೇಡ. ಆರ್ಥಿಕ ಚೇತರಿಕೆ ಯಿಂದಾಗಿ ನೆಮ್ಮದಿ ಪ್ರಾಪ್ತಿ. ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿ ಕಂಡುಬರುವುದು.

ಮಕರ: ಬಹುದಿನಗಳಿಂದಿರುವ ಕೆಲಸದ ಒತ್ತಡಗಳಿಂದ ಮುಕ್ತಿದೊರೆತು ನಿರಾಳರಾಗುವಿರಿ. ಧಾರ್ಮಿಕ ವಿಚಾರಗಳತ್ತ ಸೆಳೆತ ಹೆಚ್ಚಾಗಿ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ.

ಕುಂಭ: ಆರೋಗ್ಯದಲ್ಲಿ ಏರುಪೇರು ಸಂಭವ. ಹೊಸ ಉದ್ಯಮವೊಂದರಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಕಂಡುಬರುವುದು. ಕಾರ್ಯಕ್ಷೇತ್ರದಲ್ಲಿನ ಸಮಸ್ಯೆಗಳ ಪರಿಹಾರ ಸಾಧ್ಯತೆ.

ಮೀನ: ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣಲಿದ್ದೀರಿ. ಮಹಿಳೆಯರ ಆಸೆ ಆಕಾಂಕ್ಷೆಗಳು ಕೈಗೂಡುವ ಸಾಧ್ಯತೆ. ಬಾಂಧವ್ಯದಲ್ಲಿ ವೃದ್ಧಿ, ಹಿತೈಷಿಗಳ ದರ್ಶನದಿಂದ ಮನಸ್ಸಿಗೆ ನೆಮ್ಮದಿ. ವಯುಕ್ತಿಕ ಬದುಕಿನಲ್ಲಿ ಸಂತೃಪ್ತಿ.

ನಿಮ್ಮ ಜನ್ಮದಿನ 28-ನವೆಂಬರ್


ನಿಮ್ಮ ಜನ್ಮದಿನ: ಈ ದಿನವು ಅತ್ಯಂತ ಶುಭಕರವಾಗಿದ್ದು, ಸ್ವಚ್ಛಂದ ಬದುಕಿಗೊಂದು ನಾಂದಿಯಾಗಲಿದೆ. ವಿದ್ಯಾಭ್ಯಾಸದಲ್ಲಿ ಯಶಸ್ಸನ್ನು ಕಾಣುವಿರಿ. ಸ್ವಂತ ಉದ್ಯೋಗ ರಂಗದಲ್ಲಿ ಉತ್ತಮ ಅವಕಾಶಗಳು ಲಭ್ಯವಾಗಲಿವೆ. ವ್ಯವಸಾಯೋತ್ಪನ್ನ ಮಾರಾಟಗಾರರಿಗೆ ಅತ್ಯಂತ ಲಾಭದಾಯಕವಾಗಿದೆ.

ಪದಬಂಧ 4791

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಣದ ನೆರವು (5)
3. ಕಾಸಿದ್ರೆ ಶಿವನ ನೆಲೆ ಕಂಡೀತು! (3)
5.ಯಾವುದೇ ತಪ್ಪು ಮಾಡದವನು (5)
7.ವ್ಯಾಕರಣದಲ್ಲಿ ರೂಪಭೇದ ಹೊಂದದ ಶಬ್ದ (3)
8.ನವ ಬಾಳಿದು (5)
10. ಬೆಂದಕ್ಕಿ ಕಾಳು ಇಲ್ಲಿದೆ (3)
11.ಈತ ಅರಣ್ಯ ರಕ್ಷಕ (5)
14.ಮುಚ್ಚಿಡಬೇಕಾದ ಗೌಪ್ಯ (3)
15.ಯುದ್ಧದ ಕೇಸರಿಯಿದು (5)

ಮೇಲಿಂದ ಕೆಳಕ್ಕೆ
1.ಅಧಮನ ರಕ್ತ ನಾಳ! (3)
2.ಸರಸದ ಮಾತುಕತೆ (3)
4.ಸರಸ ಸಮಯವಾಗಿರುವ ವೇಳೆ (3)
6.ಸಮಕ್ಷದಲ್ಲಿ ಅಸುರ ಕಾಣಿಸಿದನಲ್ಲಾ? (3)
7.ಅಶಕ್ತನ ಆಹಾರ! (3)
8.ನಾಭಿ ಇಲ್ಲಿ ಕಾಣುತ್ತಿದೆ (3)
9.ವನದಲ್ಲಿ ಕಾಣಿಸಿಹ ಅಭಿವೃದ್ಧಿ (3)
10.ಅಬ್ಬಾ! ಬರ ಬಂದರೂ ಇಷ್ಟು ಆರ್ಭಟವೇ? (3)
12.ಮರದ ಹತ್ತಿರವಿರುವ ಹಳ್ಳಿಗ (3)
13.ಚಿಲಕಕ್ಕಾಗಿ ನಡೆದಿರುವ ಜಗಳ! (3)



4790ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಲತರಂಗ 4.ಕಪೋಲ
5.ವಿನಯ 9.ಕನ್ನ 10.ಗುಲಾಬಿ
11.ಡಿಕಿಂ 12.ಕೆರೆತ 15.ಕುಟೀರ
16.ಪಕ್ಷಿಸಂಕುಲ
ಮೇಲಿಂದ ಕೆಳಕ್ಕೆ:
1.ಅಂತರ 2.ಜಲ 3.ಗವಿ
4.ಕರ್ಣಾಕರ್ಣಿಕೆ 6.ಯಮಕಿಂಕರ
7.ಹಗುರ 8.ನಂಬಿಕೆ 13.ತಪ
14.ಪ್ರಸಂಗ 15.ಕುಲ

ಸುಡೊಕು 5177

7				5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5176 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ಮುಂಬೈ ದಾಳಿಕೋರರಿಗೆ ಶೀಘ್ರ ಶಿಕ್ಷೆಯಾಗಲಿ’

ವಾಷಿಂಗ್ಟನ್ (ಪಿಟಿಐ): 2008ರ ನವೆಂಬರ್ 11ರಂದು ಮುಂಬೈನಲ್ಲಿ ದಾಳಿ ನಡೆಸಿದ ಭಯೋತ್ಪಾದಕರ ವಿರುದ್ಧದ ವಿಚಾರಣೆಯನ್ನು ತ್ವರಿತಗೊಳಿಸಿ, ಅವರಿಗೆ ಶಿಕ್ಷೆ ವಿಧಿಸಬೇಕು ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಆಗ್ರಹಿಸಿದರು.

ಮುಂಬೈ ಮೇಲಿನ ದಾಳಿಗೆ 13ನೇ ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ಈ ಭೀಕರ ದಾಳಿಯ ಆಘಾತದಿಂದ ಪುಟಿದೆದ್ದ ಮುಂಬೈ ನಿವಾಸಿಗಳ ನಡೆಯನ್ನು ಅವರು ಶ್ಲಾಘಿಸಿದರು.

‘ಆರು ಜನ ಅಮೆರಿಕನ್ನರು ಸೇರಿದಂತೆ ದಾಳಿಯಲ್ಲಿ ಮೃತಪಟ್ಟವರನ್ನು ನಾವು ಸ್ಮರಿಸಬೇಕು. ಆದರೆ, ಅಪರಾಧಿಗಳಿಗೆ ಶಿಕ್ಷೆಯಾಗಬೇಕಾಗಿದೆ’ ಎಂದು ಬ್ಲಿಂಕನ್ ಟ್ವೀಟ್ ಮಾಡಿದ್ದಾರೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರಧಾನಿಗೆ ಪತ್ರ– ಪ್ರತಿಭಟನೆ ಕೈಬಿಡಲು ಕೃಷಿ ಸಚಿವರ ಮನವಿ

ಟ್ರ್ಯಾಕ್ಟರ್ ರ್‍ಯಾಲಿ ಕೈಬಿಟ್ಟ ಎಸ್‌ಕೆಎಂ

ನವದೆಹಲಿ (ಪಿಟಿಐ): ಕೃಷಿಕರ ಬೇಡಿಕೆಗಳ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು, ನ.29ರಂದು ಸಂಸತ್ ಭವನದವರೆಗೆ ನಡೆಸಲು ಉದ್ದೇಶಿಸಿದ್ದ ಟ್ರ್ಯಾಕ್ಟರ್ ರ್‍ಯಾಲಿಯನ್ನು ಕೈಬಿಟ್ಟಿರುವುದಾಗಿ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಹೇಳಿದೆ.

ಡಿ.4ರಂದು ಮತ್ತೊಮ್ಮೆ ಸಭೆ ಸೇರಿ, ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸುವುದಾಗಿ ಶನಿವಾರ ತಿಳಿಸಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನವು ನ.29ರಂದು ಆರಂಭವಾಗಲಿದ್ದು, ಅದೇ ದಿನ ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ರೈತರ ಸಂಘಟನೆಗಳ ಒಕ್ಕೂಟ ಎಸ್‌ಕೆಎಂ ತೀರ್ಮಾನಿಸಿತ್ತು.

‘ಸಂಸತ್ ಭವನದವರೆಗೆ ಸೋಮವಾರ ನಡೆಸಲು ಉದ್ದೇಶಿಸಿದ್ದ ರ್‍ಯಾಲಿ ರದ್ದಾಗಿದೆ. ನಮ್ಮ ಬೇಡಿಕೆಗಳ ಕುರಿತು ಪ್ರಧಾನಿಗೆ ಪತ್ರ ಬರೆದಿದ್ದು, ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದೇವೆ. ಆ ಬಳಿಕ ಡಿ.4ರಂದು ಮತ್ತೊಂದು ಸಭೆ ನಡೆಸಿ, ಹೋರಾಟ ನಿರ್ಧರಿಸುತ್ತೇವೆ’ ಎಂದು ಎಸ್‌ಕೆಎಂ ಮುಖಂಡ ದರ್ಶನ್ ಪಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ನವದೆಹಲಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ರೈತ ನಾಯಕ ದರ್ಶನ್ ಪಾಲ್ ಮತ್ತಿತ್ತರರು ಮಾತನಾಡಿದರು –ಪಿಟಿಐ ಚಿತ್ರ

ಸರ್ಕಾರವು ರೈತರೊಂದಿಗೆ ಗೌರವಯುತ ಮಾರ್ಗದಲ್ಲಿ ಮಾತುಕತೆ ನಡೆಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ಇದಕ್ಕೂ ಮುನ್ನ, ಪ್ರತಿಭಟನೆಯನ್ನು ಕೈಬಿಡುವಂತೆ ಶನಿವಾರ ಮನವಿ ಮಾಡಿದ್ದ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ‘ಭತ್ತದ ಕೂಳೆಗೆ ಬೆಂಕಿ ಹಾಕುವುದನ್ನು ಅಪರಾಧ ಎಂದು ಪರಿಗಣಿಸಬಾರದು ಎಂಬ ಕೃಷಿಕರ ಬೇಡಿಕೆಯನ್ನು ಸರ್ಕಾರ ಒಪ್ಪಿಕೊಂಡಿದೆ. ಬೆಳೆ ವೈವಿಧ್ಯತೆ, ಕನಿಷ್ಠ ಬೆಂಬಲ ಬೆಲೆ ಖಾತರಿ ಸೇರಿದಂತೆ ಇತರೆ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಬೇಕಿದೆ. ಪ್ರಧಾನಮಂತ್ರಿ ಈಗಾಗಲೇ ಪ್ರಕಟಿಸಿರುವಂತೆ ಸಮಿತಿ ರಚನೆಯೊಂದಿಗೆ ಈ ಬೇಡಿಕೆಗಳನ್ನೂ ಈಡೇರಿಸಲಾಗುವುದು’ ಎಂದು ಹೇಳಿದ್ದರು.

‘ಪ್ರತಿಭಟನನಿರತ ರೈತರ ಮೇಲೆ ಹೂಡಿರುವ ಮೊಕದ್ದಮೆಗಳ ವಾಪಸಾತಿಯು ರಾಜ್ಯಗಳ ವ್ಯಾಪ್ತಿಗೆ ಬರಲಿದೆ. ಪ್ರಕರಣಗಳ ಗಂಭೀರತೆ ಆಧರಿಸಿ ಪ್ರಕರಣ ಕೈಬಿಡುವುದು ಹಾಗೂ ಪರಿಹಾರ ಘೋಷಣೆ ಕುರಿತು ರಾಜ್ಯ ಸರ್ಕಾರಗಳೇ ತೀರ್ಮಾನಿಸಬೇಕಿದೆ. ಮೂರು ಕೃಷಿ ಕಾಯ್ದೆಗಳನ್ನು ಕೈಬಿಡಲಾಗುವುದು ಎಂದು ಸರ್ಕಾರ ಪ್ರಕಟಿಸಿದ ನಂತರವೂ ಮುಷ್ಕರ ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಹೀಗಾಗಿ, ದೊಡ್ಡ ಮನಸ್ಸು ಮಾಡಿ ಧರಣಿ ಕೈಬಿಡಬೇಕು’ ಎಂದು ಕೋರಿದ್ದರು.

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನದಂದೇ ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವ ಮಸೂದೆಯನ್ನು ಸರ್ಕಾರವು ಲೋಕಸಭೆಯಲ್ಲಿ ಮಂಡಿಸಲಿದೆ. ಕೃಷಿ ಕಾಯ್ದೆ ರದ್ದತಿ ಮಸೂದೆ, 2021 ಅನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮಂಡಿಸಲಿದ್ದಾರೆ. ಈ ವಿಷಯವು, ಆಡಳಿತ ಹಾಗೂ ವಿರೋಧಪಕ್ಷಗಳ ನಡುವಿನ ತೀವ್ರ ಹಣಾಹಣಿಗೆ ವೇದಿಕೆಯಾಗುವ ನಿರೀಕ್ಷೆ ಇದೆ.

ಸುದ್ದಿ 2 ನಿಮಿಷ

ಏರ್‌ಸೆಲ್–ಮ್ಯಾಕ್ಸಿಸ್ ಪ್ರಕರಣ ಪಿ.ಚಿದಂಬರಂ, ಪುತ್ರನಿಗೆ ಸಮನ್ಸ್

ನವದೆಹಲಿ (ಪಿಟಿಐ): ಏರ್‌ಸೆಲ್–ಮ್ಯಾಕ್ಸಿಸ್ ಪ್ರಕರಣದಲ್ಲಿ ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಮತ್ತು ಅವರ ಪುತ್ರ ಕಾರ್ತಿ ಅವರಿಗೆ ಡಿಸೆಂಬರ್ 20ರಂದು ವಿಚಾರಣೆಗೆ ಹಾಜರಾಗುವಂತೆ ದೆಹಲಿ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.

ಸಿಬಿಐ ಮತ್ತು ಜಾರಿ ನಿರ್ದೇಶನಾಲಯ ಈ ಕುರಿತು ಸಲ್ಲಿಸಿದ್ದ ಆರೋಪಪಟ್ಟಿಯನ್ನು ಪರಿಗಣಿಸಿದ ವಿಶೇಷ ನ್ಯಾಯಾಧೀಶರಾದ ಎಂ.ಕೆ. ನಾಗಪಾಲ್ ಅವರು ಸಮನ್ಸ್ ಜಾರಿಗೊಳಿಸಲು ಅಗತ್ಯ ಸಾಕ್ಷ್ಯಾಧಾರಗಳಿವೆ ಎಂದು ಅಭಿಪ್ರಾಯಪಟ್ಟರು. ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಈ ಇಬ್ಬರ ವಿರುದ್ಧ ಮೊಕದ್ದಮೆ ದಾಖಲಿಸಿವೆ.

ತನಿಖೆಗೆ ಪೂರಕವಾಗಿ ಅಗತ್ಯ ಮಾಹಿತಿ ಒದಗಿಸಲು ಕೋರಿ ಬ್ರಿಟನ್ ಮತ್ತು ಸಿಂಗಪುರ ಕೋರ್ಟ್‌ಗೆ ಪತ್ರ ಬರೆಯಲಾಗಿದೆ. ಈ ವಿಷಯದಲ್ಲಿ ಭಾಗಶಃ ಪ್ರಗತಿ ಕಾಣಿಸಿಕೊಂಡಿದೆ ಎಂದು ಇದಕ್ಕೂ ಮುನ್ನ ತನಿಖಾ ಸಂಸ್ಥೆಗಳ ಅಧಿಕಾರಿಗಳು ಕೋರ್ಟ್‌ಗೆ ತಿಳಿಸಿದರು. ವಿದೇಶಿ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಮಾಹಿತಿ ಕೋರಿ ಕೋರ್ಟ್ ಮೂಲಕವೇ ಪತ್ರ ಕಳುಹಿಸಲಾಗುತ್ತದೆ.



ಪಾಕ್‌ನಿಂದ ಭಾರಿ ಮಾದಕ ವಸ್ತುಗಳ ರವಾನೆ: ಡಿಜಿಪಿ ದಿಲ್‌ಬಾಗ್ ಸಿಂಗ್

ಜಮ್ಮು: ಭಯೋತ್ಪಾದನೆಗೆ ಹಣಕಾಸು ನೆರವು ನೀಡುವ ಸಲುವಾಗಿ ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದು, ಈ ಕೃತ್ಯಕ್ಕೆ ಇಲ್ಲಿನ ಯುವಕರು ಬಲಿಪಶುಗಳಾಗುತ್ತಿದ್ದಾರೆ ಎಂದು ಜಮ್ಮು ಮತ್ತು ಕಾಶ್ಮೀರದ ಡಿಜಿಪಿ ದಿಲ್‌ಬಾಗ್ ಸಿಂಗ್ ಹೇಳಿದರು.

ಮಾದಕವಸ್ತು ನಿಯಂತ್ರಣ ಬ್ಯುರೋ ಶುಕ್ರವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗುರುವಾರ (ನ.25) ಜಾಗರ್ ಕೋಟ್ಲಿಯಲ್ಲಿ 52 ಕೆ.ಜಿ ಹೆರಾಯಿನ್ ಸಿಕ್ಕಿದೆ. ಅಲ್ಲದೇ ಇದಕ್ಕೂ ಮುನ್ನ ಪೂಂಚ್, ಬಾರಾಮುಲ್ಲಾ, ಕುಪ್ವಾರ ಸೇರಿದಂತೆ ಗಡಿ ಪ್ರದೇಶಗಳಲ್ಲಿ ಹೆರಾಯಿನ್ ದೊರೆತಿದೆ. ಮಾದಕ ವಸ್ತು ಪೂರೈಕೆಗಾಗಿ ಯೋಜಿತ ತಯಾರಿ ನಡೆಸಿರುವ ಪಾಕಿಸ್ತಾನವು ತನ್ನ ದುರುದ್ದೇಶಗಳಿಗೆ ಇಲ್ಲಿನ ಯುವಕರನ್ನು ಬಳಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಪಡಿಸುವ ಪ್ರಮಾಣವನ್ನು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಪೊಲೀಸರು ವೃತ್ತಿಪರವಾಗಿ ಕಾರ್ಯ ನಿರ್ವಹಿಸಬೇಕು. ಅಂತರರಾಜ್ಯ ಮಾದಕವಸ್ತು ಜಾಲವನ್ನು ಗುರುತಿಸಬೇಕು ಎಂದು ಸೂಚಿಸಿದರು.

ಆಫ್ರಿಕಾದ ದೇಶಗಳಿಗೆ ವಿಮಾನ ಪ್ರಯಾಣ ನಿರ್ಬಂಧಿಸುವ ಧಾವಂತ

ಕೊರೊನಾ ಹೊಸ ತಳಿ: ಎಲ್ಲೆಡೆ ದಿಗಿಲು

ಜೊಹಾನ್ಸ್‌ಬರ್ಗ್/ ಲಂಡನ್/ ಬರ್ಲಿನ್ (ರಾಯಿಟರ್ಸ್/ ಪಿಟಿಐ): ಕೊರೊನಾ ಹೊಸ ರೂಪಾಂತರ ತಳಿ ‘ಓಮಿಕ್ರಾನ್’ ಪತ್ತೆಯಾಗಿರುವ ದಕ್ಷಿಣ ಆಫ್ರಿಕಾದ ದೇಶಗಳಿಗೆ ಹಲವು ದೇಶಗಳು ತಾತ್ಕಾಲಿಕವಾಗಿ ವಿಮಾನ ಪ್ರಯಾಣ ನಿರ್ಬಂಧಿಸಿವೆ.

ಅಮೆರಿಕ, ಬ್ರೆಜಿಲ್, ಕೆನಡಾ, ಸೌದಿ ಅರೇಬಿಯಾ, ಆಸ್ಟ್ರೇಲಿಯಾ, ಶ್ರೀಲಂಕಾ, ಥಾಯ್ಲೆಂಡ್, ಜಪಾನ್, ಫಿಲಿಪ್ಪೀನ್ಸ್, ಯುಎಇ, ಮಾರಿಷಸ್, ಒಮಾನ್ ದೇಶಗಳು ಶನಿವಾರ ಈ ನಿರ್ಧಾರ ತೆಗೆದುಕೊಂಡಿವೆ.

ಜರ್ಮನಿ, ಆಸ್ಟ್ರಿಯಾ, ಜೆಕ್ ಗಣರಾಜ್ಯ, ಸೈಪ್ರಸ್, ನೆದರ್ಲೆಂಡ್ಸ್ ಮತ್ತು ಬ್ರಿಟನ್ ದೇಶಗಳು ಶುಕ್ರವಾರವೇ ವಿಮಾನ ಪ್ರಯಾಣ ನಿರ್ಬಂಧಿಸಿವೆ. ಅಮೆರಿಕದಲ್ಲಿ ಸೋಮವಾರದಿಂದ ಈ ಆದೇಶ ಜಾರಿಗೆ ಬರಲಿದೆ.

27 ಸದಸ್ಯ ದೇಶಗಳು ಕಠಿಣ ಪ್ರಯಾಣದ ನಿರ್ಬಂಧಗಳನ್ನು ತೆಗೆದುಕೊಳ್ಳುವಂತೆ ಐರೋಪ್ಯ ಒಕ್ಕೂಟದ ತುರ್ತು ಸಭೆಯಲ್ಲಿ ಸೂಚಿಸಲಾಗಿದೆ. ಈಗಾಗಲೇ ಒಕ್ಕೂಟದ ಕೆಲವು ದೇಶಗಳು ವಿಮಾನಯಾನ ನಿರ್ಬಂಧಿಸಿವೆ.

ಒಂದೊಂದೇ ದೇಶಗಳ ಸರ್ಕಾರಗಳು ಅಂತರರಾಷ್ಟ್ರೀಯ ವಿಮಾನಯಾನವನ್ನು ನಿರ್ಬಂಧಿಸುತ್ತಿವೆ. ಆದಷ್ಟು ಬೇಗ ದಕ್ಷಿಣ ಆಫ್ರಿಕಾವನ್ನು ತೊರೆಯುವ ಉದ್ದೇಶದಿಂದ ಜೊಹಾನ್ಸ್‌ಬರ್ಗ್ ವಿಮಾನ ನಿಲ್ದಾಣಕ್ಕೆ ಪ್ರವಾಸಿಗರು ಧಾವಿಸಿ ಬರುತ್ತಿದ್ದಾರೆ. ‘ವಿಶ್ವದ ವಿವಿಧ ದೇಶಗಳು ವಿಮಾನಯಾನ ನಿರ್ಬಂಧಿಸುತ್ತಿರುವುದು ಕ್ರೂರ ನಡೆ’ ಎಂದು ದಕ್ಷಿಣ ಆಫ್ರಿಕಾದ ಆರೋಗ್ಯ ಸಚಿವಾಲಯ ಕಿಡಿಕಾರಿದೆ. ಹೊಸ ತಳಿಯನ್ನು ಪತ್ತೆ ಮಾಡಿದ್ದಕ್ಕೆ ಪ್ರಶಂಸಿಸಬೇಕೇ ಹೊರತು ಶಿಕ್ಷಿಸಬಾರದು ಎಂದೂ ಹೇಳಿದೆ.


ಜೊಹಾನ್ಸ್‌ಬರ್ಗ್ ವಿಮಾನ ನಿಲ್ದಾಣದಲ್ಲಿ ವಿಮಾನಕ್ಕಾಗಿ ಕಾಯುತ್ತಿರುವ ಪ್ರಯಾಣಿಕರು–ರಾಯಿಟರ್ಸ್ ಚಿತ್ರ

ಏಷ್ಯಾ ಖಂಡವನ್ನು ಓಮಿಕ್ರಾನ್ ತಲುಪಿದ್ದು, ಹಾಂಗ್‌ಕಾಂಗ್‌ನಲ್ಲಿ ಒಂದು ಪ್ರಕರಣ ಶುಕ್ರವಾರ ಪತ್ತೆಯಾಗಿತ್ತು. ಆಫ್ರಿಕಾ ದೇಶಗಳಿಗೆ ವಿಮಾನ ಸಂಚಾರವನ್ನು ಥಾಯ್ಲೆಂಡ್ ಸ್ಥಗಿತಗೊಳಿಸಿದೆ.

ಹೊಸ ತಳಿಯನ್ನು ಎದುರಿಸಲು ಕಠಿಣ ಕ್ರಮಕ್ಕೆ ನೆದರ್ಲೆಂಡ್ಸ್ ಮುಂದಾಗಿದೆ. ಅಂಗಡಿಗಳು, ಬಾರ್, ರೆಸ್ಟೊರೆಂಟ್‌ಗಳನ್ನು ಬೇಗನೇ ಮುಚ್ಚುವಂತೆ ಸೂಚಿಸಲಾಗಿದೆ. ಭಾನುವಾರದಿಂದ ಅನ್ವಯವಾಗುವಂತೆ, ಇಡೀ ದೇಶದಲ್ಲಿ ಸಂಜೆ 5 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ಲಾಕ್‌ಡೌನ್ ಜಾರಿಯಲ್ಲಿರಲಿದೆ. ಆಫ್ರಿಕಾದ ದೇಶಗಳಿಂದ ಬರುವ ಪ್ರಯಾಣಿಕರಿಗೆ ಜಪಾನ್ 10 ದಿನಗಳ ಕ್ವಾರಂಟೈನ್ ವಿಧಿಸಲಿದೆ.

ಆಸ್ಟ್ರೇಲಿಯಾ ಕೆಲವು ಕ್ರಮಗಳನ್ನು ಪ್ರಕಟಿಸಿದೆ. ಆಫ್ರಿಕಾದ 9 ದೇಶಗಳಿಂದ ಬರುವ ಆಸ್ಟ್ರೇಲಿಯಾ ನಾಗರಿಕರಲ್ಲದವರಿಗೆ ದೇಶ ಪ್ರವೇಶಿಸಲು ಅವಕಾಶವಿಲ್ಲ. ಅಲ್ಲಿಂದ ಬರುವ ಆಸ್ಟ್ರೇಲಿಯಾ ನಿವಾಸಿಗಳು ಮತ್ತು ಅವರ ಅವಲಂಬಿತರಿಗೆ 14 ದಿನಗಳ ಕ್ವಾರಂಟೈನ್ ಮಾಡಲಾಗುತ್ತದೆ. 14 ದಿನಗಳ ಹಿಂದೆ ದೇಶ ಪ್ರವೇಶಿಸಿರುವ 20 ಮಂದಿಯನ್ನು ಕ್ವಾರಂಟೈನ್ ಮಾಡಲಾಗಿದೆ. ‘ಇದಕ್ಕಿಂತಲೂ ಹೆಚ್ಚಿನ ನಿರ್ಬಂಧ ವಿಧಿಸಬೇಕಾದ ಸ್ಥಿತಿ ಎದುರಾದರೆ ನಿರ್ದಾಕ್ಷಿಣ್ಯವಾಗಿ ಜಾರಿ ಮಾಡಲಾಗುವುದು ಎಂದು ಆರೋಗ್ಯ ಸಚಿವ ಗ್ರೆಗ್ ಹಂಟ್ ತಿಳಿಸಿದ್ದಾರೆ.

- ಬೂಸ್ಟರ್ ಡೋಸ್ ನೀಡಿಕೆಯನ್ನು ತುರ್ತಾಗಿ ಮುಗಿಸುವಂತೆ ಬ್ರಿಟನ್‌ನ ಲೇಬರ್ ಪಕ್ಷವು ಸರ್ಕಾರವನ್ನು ಆಗ್ರಹಿಸಿದೆ. ಎರಡನೇ ಡೋಸ್ ಮತ್ತು ಮತ್ತು ಬೂಸ್ಟರ್ ಡೋಸ್ ನಡುವಿನ 6 ತಿಂಗಳ ಅಂತರವನ್ನು ಐದು ತಿಂಗಳಿಗೆ ಕಡಿತಗೊಳಿಸಲು ಮನವಿ ಮಾಡಿದೆ
- ಓಮಿಕ್ರಾನ್ ಪತ್ತೆಯಾಗಿರುವ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ, ಮೊಜಾಂಬಿಕ್ ದೇಶಗಳ ಪ್ರಯಾಣಿಕರನ್ನು ಕತಾರ್ ಏರ್‌ವೇಸ್ ನಿರ್ಬಂಧಿಸಿದೆ
- ನವೆಂಬರ್ 30ರಿಂದ ಜಿನೀವಾದಲ್ಲಿ ನಡೆಯಬೇಕಿದ್ದ ಸಚಿವರ ಮಟ್ಟದ ಸಭೆಯನ್ನು ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಅನಿರ್ದಿಷ್ಟಾವಧಿಗೆ ಮುಂದೂಡಿದೆ
- ದೇಶದ ಶೇ 100ರಷ್ಟು ಜನರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದ್ದು, ಶೇ 90ರಷ್ಟು ಜನರಿಗೆ ಎರಡೂ ಡೋಸ್ ನೀಡಲಾಗಿದೆ ಎಂದು ಯುಎಇ ತಿಳಿಸಿದೆ

ಬ್ರಿಟನ್, ಜರ್ಮನಿಯಲ್ಲಿ ‘ಓಮಿಕ್ರಾನ್’

ಲಂಡನ್: ಬ್ರಿಟನ್‌ನಲ್ಲಿ ಕೊರೊನಾ ವೈರಸ್‌ನ ಹೊಸ ತಳಿಯ ಎರಡು ಪ್ರಕರಣಗಳು ಶನಿವಾರ ಪತ್ತೆಯಾಗಿವೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಈ ಇಬ್ಬರೂ ಸೋಂಕಿತರು ದಕ್ಷಿಣ ಆಫ್ರಿಕಾಗೆ ಹೋಗಿ ಬಂದಿದ್ದಾರೆ. ಇಬ್ಬರನ್ನೂ ಪ್ರತ್ಯೇಕವಾಗಿ ಇರಿಸಲಾಗಿದ್ದು, ಅವರ ಸಂಪರ್ಕಿತರನ್ನು ಪತ್ತೆಹಚ್ಚಲಾಗುತ್ತಿದೆ ಎಂದು ಆರೋಗ್ಯ ಕಾರ್ಯದರ್ಶಿ ಸಾಜಿದ್ ಜಾವಿದ್ ತಿಳಿಸಿದ್ದಾರೆ.

ಜರ್ಮನಿಯಲ್ಲಿ ಓಮಿಕ್ರಾಮ್ ತಳಿಯ ಮೊದಲ ಶಂಕಿತ ಪ್ರಕರಣ ಪತ್ತೆಯಾಗಿದೆ. ದಕ್ಷಿಣ ಆಫ್ರಿಕಾದಿಂದ ಬಂದಿರುವ ವ್ಯಕ್ತಿಯಲ್ಲಿ ವೈರಾಣು ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

61 ಜನರಿಗೆ ಕೋವಿಡ್: ಆಫ್ರಿಕಾದ ದೇಶಗಳಿಂದ ಬಂದಿರುವ 61 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ ಎಂದು ನೆದರ್ಲೆಂಡ್ಸ್ ಆರೋಗ್ಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಇವರಲ್ಲಿ ಎಷ್ಟು ಜನರಲ್ಲಿ ಓಮಿಕ್ರಾನ್ ತಳಿ ಇದೆ ಎಂಬುದರ ತಪಾಸಣೆ ನಡೆಯುತ್ತಿದೆ.

ಇವರನ್ನು ಆಮ್‌ಸ್ಟರ್‌ಡ್ಯಾಮ್‌ನ ಹೋಟೆಲ್‌ವೊಂದರಲ್ಲಿ ಕ್ವಾರಂಟೈನ್ ಮಾಡಲಾಗಿದೆ. 600 ಜನರು ಜೊಹಾನ್ಸ್‌ಬರ್ಗ್‌ನಿಂದ ಎರಡು ವಿಮಾನಗಳಲ್ಲಿ ಇಲ್ಲಿಗೆ ಬಂದಿದ್ದರು.

ಆಗ್ನೇಯ ಏಷ್ಯಾ ದೇಶಗಳಿಗೆ ಎಚ್ಚರಿಕೆ

ನವದೆಹಲಿ: ಕೊರೊನಾ ಹೊಸ ತಳಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ತೀವ್ರ ನಿಗಾ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಲಸಿಕಾ ಕಾರ್ಯಕ್ರಮಗಳನ್ನು ಹೆಚ್ಚಿಸುವಂತೆ ಆಗ್ನೇಯ ಏಷ್ಯಾದ ದೇಶಗಳಿಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಶನಿವಾರ ಸೂಚಿಸಿದೆ.

ಜನರು ಸೇರುವ ಕಾರ್ಯಕ್ರಮಗಳನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು. ಹಬ್ಬಗಳು, ಸಮಾರಂಭಗಳಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಿದೆ.

‘ದೇಶದ ಹಲವು ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ತಗ್ಗಿವೆ. ಆದರೆ ಹೊಸ ತಳಿ ಕಳವಳ ಮೂಡಿಸಿದೆ. ವೈರಾಣು ಹರಡದಂತೆ ತಡೆಯುವ ಹಾಗೂ ರಕ್ಷಿಸಿಕೊಳ್ಳುವ ಅಗತ್ಯವಿದೆ’ ಎಂದು ಸಂಸ್ಥೆಯ ಆಗ್ನೇಯ ಏಷ್ಯಾ ವಲಯದ ಪ್ರಾದೇಶಿಕ ನಿರ್ದೇಶಕಿ ಡಾ. ಪೂನಂ ಖೇತ್ರಪಾಲ್ ಸಿಂಗ್ ಹೇಳಿದ್ದಾರೆ.

ಪರಿಶಿಷ್ಟ ಜಾತಿಯ ನಾಲ್ವರ ಹತ್ಯೆ: ಖಂಡನೆ

ಲಖನೌ (ಪಿಟಿಐ): ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಕುಟುಂಬಕ್ಕೆ ಸೇರಿದ ನಾಲ್ಕು ಮಂದಿಯ ಹತ್ಯೆಯನ್ನು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಖಂಡಿಸಿದ್ದಾರೆ.

ಈ ಕುರಿತು ಶನಿವಾರ ಹಿಂದಿಯಲ್ಲಿ ಸರಣಿ ಟ್ವೀಟ್ ಮಾಡಿರುವ ಅವರು, ‘ಬಿಜೆಪಿ ನೇತೃತ್ವದ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದೇ ಈ ಘಟನೆಗೆ ಕಾರಣ’ ಎಂದು ಆರೋಪಿಸಿದ್ದಾರೆ.

‘ಪರಿಶಿಷ್ಟ ಕುಟುಂಬದ ನಾಲ್ವರನ್ನು ಹತ್ಯೆ ಮಾಡಿರುವುದು ದುಃಖಕರ ಮತ್ತು ನಾಚಿಕೆಗೇಡಿನ ಸಂಗತಿ. ಕಾನೂನು–ಸುವ್ಯವಸ್ಥೆ ವಿಷಯದಲ್ಲಿ ಬಿಜೆಪಿ ಕೂಡ ಹಿಂದಿನ ಸಮಾಜವಾದಿ ಪಕ್ಷದ ಸರ್ಕಾರದ ಹಾದಿಯಲ್ಲಿಯೇ ಸಾಗುತ್ತಿರುವಂತೆ ಕಂಡುಬರುತ್ತಿದೆ’ ಎಂದು ಟೀಕಿಸಿದ್ದಾರೆ.

‘ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು’ ಎಂದೂ ಅವರು ಒತ್ತಾಯಿಸಿದ್ದಾರೆ.

ಅಂತರರಾಷ್ಟ್ರೀಯ ಸಂಚಾರ ನಿರ್ಬಂಧ ಸಡಿಲಿಕೆ ಮರು ಪರಿಶೀಲಿಸಿ: ಪ್ರಧಾನಿ

ಒಂದನೇ ಪುಟದಿಂದ

ಅಂತರರಾಷ್ಟ್ರೀಯ ಪ್ರಯಾಣಿಕರಿಂದ ಸಂಗ್ರಹಿಸಿದ ಮಾದರಿಯ ಜೆನೋಮ್ ಸೀಕ್ವೆನ್ಸ್ ಅಧ್ಯಯನ ನಡೆಸುವಂತೆ ಪ್ರಧಾನಿ ಸೂಚಿಸಿದರು. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲ ರಾಜ್ಯಗಳ ಜೊತೆ ನಿಕಟ ಸಂಪರ್ಕ ಇರಿಸಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಅಧಿಕ ಪ್ರಕರಣ ದಾಖಲಾಗುತ್ತಿರುವ ಕ್ಲಸ್ಟರ್‌ಗಳಲ್ಲಿ ಹೆಚ್ಚಿನ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೋವಿಡ್ ಎರಡನೇ ಡೋಸ್ ನೀಡಿಕೆ ವೇಗವನ್ನು ಹೆಚ್ಚಿಸಬೇಕು ಎಂದು ಅವರು ಸೂಚಿಸಿದರು.

> ಕೋವಿಡ್ ಸಂಕಷ್ಟದಿಂದ ದೇಶ ಈಗ ಚೇತರಿಸಿಕೊಂಡಿದೆ. ಹೊಸ ತಳಿಯಿಂದ ಪಾರಾಗಲು, ವಿಮಾನ ಸಂಚಾರವನ್ನು ತಕ್ಷಣ ನಿರ್ಬಂಧಿಸಬೇಕು
> **ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

> ಈಗ ಪತ್ತೆಯಾಗಿರುವ ವೈರಾಣುವಿನ ಹೊಸ ತಳಿ ಗಂಭೀರ ಅಪಾಯ ಒಡ್ಡಲಿದೆ. ದೇಶದ ಎಲ್ಲರಿಗೂ ಆದಷ್ಟು ಬೇಗ ಲಸಿಕೆ ನೀಡಬೇಕು
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

- ಚೆನ್ನೈ, ಕೊಯಮತ್ತೂರು, ಮದುರೈ ಹಾಗೂ ತಿರುಚಿನಾಪಳ್ಳಿ ವಿಮಾನ ನಿಲ್ದಾಣಗಳಿಗೆ ಬಂದಿಳಿಯುವ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ಇರಿಸಲು ನಾಲ್ಕು ಅಧಿಕಾರಿಗಳನ್ನು ತಮಿಳುನಾಡು ಸರ್ಕಾರ ನೇಮಿಸಿದೆ.
- ಕೇಂದ್ರ ಆರೋಗ್ಯ ಸಚಿವಾಲಯ ವರ್ಗೀಕರಿಸಿದ ದೇಶಗಳ ಪ್ರಯಾಣಿಕರು ಗುಜರಾತ್‌ಗೆ ಬಂದಿಳಿದಾಗ, ಅವರಿಗೆ ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯ
- ದಕ್ಷಿಣ ಆಫ್ರಿಕಾದಿಂದ ಬರುವ ಪ್ರಯಾಣಿಕರಿಗೆ ಮುಂಬೈನಲ್ಲಿ ಕ್ವಾರಂಟೈನ್: ಮೇಯರ್ ಕಿಶೋರಿ ಪೆಡ್ನೇಕರ್
- ಶಬರಿಮಲೆ ಯಾತ್ರೆಯಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯವಲ್ಲ ಎಂದು ಕೇರಳ ಸರ್ಕಾರ ತಿಳಿಸಿದೆ. ಉಳಿದವರಿಗೆ ಎರಡೂ ಡೋಸ್ ಹಾಕಿಸಿಕೊಂಡ ಪ್ರಮಾಣಪತ್ರ ಅಥವಾ ಆರ್‌ಟಿಪಿಸಿಆರ್ ಪ್ರಮಾಣಪತ್ರ ಕಡ್ಡಾಯ ಮಾಡಲಾಗಿದೆ
- ಒಡಿಶಾದಲ್ಲಿ ಶನಿವಾರ 41 ಮಕ್ಕಳೂ ಸೇರಿದಂತೆ 264 ಜನರಲ್ಲಿ ಹೊಸದಾಗಿ ಕೊರೊನಾ ಸೋಂಕು ಪತ್ತೆಯಾಗಿದ್ದು, ಮೂವರು ಮೃತಪಟ್ಟಿದ್ದಾರೆ. ಶುಕ್ರವಾರವೂ 219 ಜನರಲ್ಲಿ ಸೋಂಕು ಪತ್ತೆಯಾಗಿತ್ತು

ನಾಗಪುರದಲ್ಲಿ ವಿಮಾನ ಇಳಿಸಿದ ಪೈಲಟ್

ಗೋ ಫರ್ಸ್ಟ್’ ಸಂಸ್ಥೆಯ ಜಿ8 873 ವಿಮಾನದ ಎಂಜಿನ್‌ನಲ್ಲಿ ತಾಂತ್ರಿಕ ದೋಷ

ಬೆಂಗಳೂರು–ಪಟ್ನಾ ವಿಮಾನ ತುರ್ತು ಭೂಸ್ಪರ್ಶ

ನಾಗಪುರ (ಪಿಟಿಐ): ಬೆಂಗಳೂರಿನಿಂದ ಪಟ್ನಾಗೆ ತೆರಳುತ್ತಿದ್ದ 139 ಪ್ರಯಾಣಿಕರು, ಸಿಬ್ಬಂದಿ ಇದ್ದ ‘ಗೋ ಫರ್ಸ್ಟ್’ ಸಂಸ್ಥೆಯ ಜಿ8 873 ವಿಮಾನದ ಎಂಜಿನ್‌ನಲ್ಲಿ ಶನಿವಾರ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಇಲ್ಲಿ ತುರ್ತು ಭೂಸ್ಪರ್ಶ ಮಾಡಿತು.

‘ನಾಗಪುರ ಎಟಿಸಿ ಸಂಪರ್ಕಿಸಿದ್ದ ವಿಮಾನದ ಪೈಲಟ್, ತಾಂತ್ರಿಕ ಸಮಸ್ಯೆಯನ್ನು ವಿವರಿಸಿ ತುರ್ತು ಭೂಸ್ಪರ್ಶಕ್ಕೆ ಅವಕಾಶ ಕೋರಿದ್ದರು’ ಎಂದು ನಾಗಪುರ ವಿಮಾನನಿಲ್ದಾಣದ ನಿರ್ದೇಶಕ ಅಬಿದ್ ರೂಹಿ ತಿಳಿಸಿದರು.

‘ರನ್‌ವೇ ಸಜ್ಜು, ಇಂಧನ ವ್ಯವಸ್ಥೆ, ಅಗ್ನಿಶಾಮಕ ಸೇವೆ, ವೈದ್ಯರು, ಆಂಬುಲೆನ್ಸ್ ಒಳಗೊಂಡಂತೆ ತುರ್ತು ಭೂಸ್ಪರ್ಶಕ್ಕೆ ಅಗತ್ಯ ಮುಂಜಾಗ್ರತೆ ವಹಿಸಲಾಯಿತು. ಯಾವುದೇ ಅಹಿತಕರ ಬೆಳವಣಿಗೆ ಸಂಭವಿಸಿಲ್ಲ. ಸುರಕ್ಷಿತವಾಗಿ ವಿಮಾನ ಇಳಿಯಿತು’ ಎಂದರು.

ಗೋ ಫರ್ಸ್ಟ್ ಸಂಸ್ಥೆ (ಹಿಂದೆ ಗೋ ಏರ್) ಈ ಬಗ್ಗೆ ಹೇಳಿಕೆ ನೀಡಿದ್ದು, ‘ಎಂಜಿನ್‌ನಲ್ಲಿ ತಾಂತ್ರಿಕ ದೋಷದ ಕಾರಣ, ಪೈಲಟ್ ನಾಗಪುರದಲ್ಲಿ ಸುರಕ್ಷಿತವಾಗಿ ವಿಮಾನವನ್ನು ಇಳಿಸಿದ್ದಾರೆ. ಪ್ರಯಾಣಿಕರ ಸುರಕ್ಷತೆಗೆ ಕ್ರಮವಹಿಸಲಾಗಿದೆ’ ಎಂದು ತಿಳಿಸಿದೆ.

‘ಪ್ರಯಾಣಿಕರಿಗೆ ಪರ್ಯಾಯ ವಿಮಾನದ ವ್ಯವಸ್ಥೆ ಮಾಡಿದ್ದು, ನಾಗಪುರದಿಂದ ಸಂಜೆ 4.45 ಗಂಟೆಗೆ ನಿರ್ಗಮಿಸಿದೆ. ದೋಷ ಕಾಣಿಸಿಕೊಂಡಿದ್ದ ವಿಮಾನವನ್ನು ಸಂಸ್ಥೆಯ ಎಂಜಿನಿಯರಿಂಗ್ ವಿಭಾಗದ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ’ ಎಂದು ತಿಳಿಸಿದೆ.

ಪರಿಣಾಮದ ಬಗ್ಗೆ ಮೌಲ್ಯಮಾಪನ ಅಗತ್ಯ: ಸಿಜೆಐ

ಪ್ರಜಾವಾಣಿ ವಾರ್ತೆ

ನವದೆಹಲಿ: ತಾನು ಅಂಗೀಕರಿಸಿದ ಕಾನೂನುಗಳು ಯಾವ ಪ್ರಭಾವ ಬೀರಬಲ್ಲವು ಎಂಬುದರ ಮೌಲ್ಯಮಾಪನ ಮಾಡದ ಅಥವಾ ಅಧ್ಯಯನ ನಡೆಸದ ಶಾಸಕಾಂಗದ ನಡೆಯು, ಕೆಲವೊಮ್ಮೆ ದೊಡ್ಡ ವಿಷಯಗಳಿಗೆ ಕಾರಣವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅಭಿಪ್ರಾಯಪಟ್ಟಿದ್ದಾರೆ.

ಯಾವುದೇ ವಿಶೇಷ ಮೂಲಸೌಕರ್ಯಗಳನ್ನು ಒದಗಿಸದೇ, ಕೋರ್ಟ್‌ಗಳನ್ನು ವಾಣಿಜ್ಯ ಕೋರ್ಟ್‌ಗಳು ಎಂದು ಬರೀ ಹೆಸರು ಬದಲಿಸುವುದರಿಂದ, ಬಾಕಿ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ಅವರು ಹೇಳಿದರು.

ಚೆಕ್ ಬೌನ್ಸ್ ಪ್ರಕರಣಗಳನ್ನು ಉಲ್ಲೇಖಿಸಿದ ಅವರು, ಈಗಾಗಲೇ ಒತ್ತಡದಲ್ಲಿರುವ ನ್ಯಾಯಾಧೀಶರ ಮೇಲೆ ಇಂತಹ ಸಾವಿರಾರು ಪ್ರಕರಣಗಳಿಂದ ಇನ್ನಷ್ಟು ಒತ್ತಡ ಉಂಟಾಗುತ್ತದೆ ಎಂದು ಸಂವಿಧಾನ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಅವರು ಹೇಳಿದರು.

ಕೋವಿಡ್: ಕೇರಳ, ‘ಮಹಾ’ ಗಡಿ ಕಟ್ಟೆಚ್ಚರ

ಒಂದನೇ ಪುಟದಿಂದ

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಗಳಲ್ಲಿ ತನಿಖಾ ಠಾಣೆಗಳನ್ನು ತೆರೆಯಲಾಗುವುದು. ಅಲ್ಲಿ, ಕಂದಾಯ, ಪೊಲೀಸ್ ಸೇರಿದಂತೆವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಯನ್ನೊಳಗೊಂಡ ತಂಡಗಳು ಸರದಿಯ ಮೇಲೆ 24 ಗಂಟೆ ನಿರಂತರವಾಗಿ ಕೆಲಸ ಮಾಡಲಿದ್ದಾರೆ. ದಿಢೀರ್ ಭೇಟಿ ನೀಡಿ ಪರಿಶೀಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೀವ್ರ ಕಟ್ಟೆಚ್ಚರಕ್ಕೆ ಆದೇಶಿಸಲಾಗಿದೆ. ಈ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಜರುಗಿಸುತ್ತಾರೆ ಎಂದು ಹೇಳಿದರು.



ನೆಗೆಟಿವ್ ವರದಿ ಕಡ್ಡಾಯ: 16 ದಿನಗಳ ಹಿಂದೆ ಕೇರಳದಿಂದ ಬಂದಿರುವವರು ಮತ್ತೊಮ್ಮೆ ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ ಎಂದು ಅಶೋಕ ತಿಳಿಸಿದರು.

ಹಾಸ್ಟೆಲ್‌ಗಳಲ್ಲಿ ಇರುವ ವಿದ್ಯಾರ್ಥಿಗಳು ನೆಗೆಟಿವ್ ವರದಿ ಬಂದ ಏಳು ದಿನಗಳ ಬಳಿಕ ಪುನಃ ಪರೀಕ್ಷೆ ಮಾಡಿಸಿಕೊಳ್ಳಬೇಕು. ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ನರ್ಸಿಂಗ್ ಕಾಲೇಜುಗಳಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಿಸುವ ತೀರ್ಮಾನವನ್ನೂ ಕೈಗೊಳ್ಳಲಾಗಿದೆ ಎಂದರು.

ಶಾಲಾ, ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಸ್ಥಗಿತಗೊಳಿಸುವಂತೆ ಸಲಹಾ ರೂಪದ ಸುತ್ತೋಲೆ ನೀಡಲಾಗುವುದು. ಅಗತ್ಯ ಕಂಡುಬಂದಲ್ಲಿ ಕಾರ್ಯಕ್ರಮ ನಿರ್ಬಂಧಿಸಿ ಆದೇಶವನ್ನೂ ಹೊರಡಿಸಲಾಗುವುದು ಎಂದು ಹೇಳಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಿಸಲಾಗುವುದು. ಸೋಂಕು ಪತ್ತೆಯಾದವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಮುಂದಿನ ಸಭೆಯಲ್ಲಿ ನಿರ್ಧಾರ: ಕ್ರಿಸ್‌ಮಸ್, ಹೊಸ ವರ್ಷಾಚರಣೆಗೆ ಅವಕಾಶ ನೀಡುವ ಕುರಿತು ಯಾವುದೇ ತೀರ್ಮಾನ ಆಗಿಲ್ಲ. ಮತ್ತೊಮ್ಮೆ ಸಭೆ ನಡೆಸಿ ಈ ಕುರಿತು ನಿರ್ಧಾರಕ್ಕೆ ಬರಲಾಗುವುದು. ಕೋವಿಡ್ ಪ್ರಕರಣಗಳ ಸಂಖ್ಯೆ ನಿಯಂತ್ರಣಕ್ಕೆ ಬಾರದಿದ್ದರೆ ಇನ್ನಷ್ಟು ಬಿಗಿ ಕ್ರಮಗಳನ್ನು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದರು.

ಪ್ರಶ್ನೆ ಪತ್ರಿಕೆ ಸೋರಿಕೆ: ಶ್ರೀಕೃಷ್ಣದೇವರಾಯ ವಿ.ವಿ ಕ್ರಮ

ಆರು ಮಂದಿಗೆ ತಲಾ ₹1 ಲಕ್ಷ ದಂಡ

ಬಳ್ಳಾರಿ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಿ.ಕಾಂ ಪದವಿಯ 6ನೇ ಸೆಮಿಸ್ಟರ್‌ನ ‘ಮ್ಯಾನೇಜ್‌ಮೆಂಟ್ ಅಕೌಂಟಿಂಗ್’ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿ ಅಧ್ಯಕ್ಷರು ಹಾಗೂ ಐವರು ಸದಸ್ಯರಿಗೆ ತಲಾ ₹ 1 ಲಕ್ಷ ದಂಡ ವಿಧಿಸಲಾಗಿದೆ.

ಹಗರಣದ ವಿಚಾರಣೆ ನಡೆಸಿದ್ದ ಸಿಂಡಿಕೇಟ್ ಸದಸ್ಯರಾದ ಪದ್ಮಾ ವಿಠಲ್ ನೇತೃತ್ವದ ಉಪ ಸಮಿತಿ ವರದಿಯನ್ನು ಸಿಂಡಿಕೇಟ್ ಸಭೆ ಅಂಗೀಕರಿಸಿದೆ. ಪರೀಕ್ಷಾ ಮಂಡಳಿ ಅಧ್ಯಕ್ಷ ಹಾಗೂ ಸದಸ್ಯರನ್ನು ಕಪ್ಪುಪಟ್ಟಿಗೆ ಸೇರಿಸಿದ್ದು, ತಲಾ ₹ 1 ಲಕ್ಷ ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ತಿಂಗಳ ಗಡುವು ನೀಡಿ ನೋಟಿಸ್ ನೀಡಿದ್ದು, ಗಡುವು ಮುಗಿದಿದೆ ಎಂದು ವಿ.ವಿ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಪರೀಕ್ಷಾ ಮಂಡಳಿ ಸದಸ್ಯರಾಗಿದ್ದ ಸಿರುಗುಪ್ಪ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಸವರಾಜ ಅವರಿಗೆ ದಂಡದಿಂದ ವಿನಾಯಿತಿ ನೀಡಲಾಗಿದೆ. ಪುತ್ರ ಬಿ.ಕಾಂ, ಪರೀಕ್ಷೆ ಬರೆಯುತ್ತಿದ್ದು, ಮಂಡಳಿ ಸದಸ್ಯರಾಗಿ ಮುಂದುವರಿಯುವುದು ಸರಿಯಲ್ಲ’ ಎಂದು ಅವರು ವಿ.ವಿಗೆ ಪತ್ರ ಬರೆದಿದ್ದಾಗಿ ಮೂಲಗಳು ಸ್ಪಷ್ಟಪಡಿಸಿವೆ.

> ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಪರೀಕ್ಷಾ ಮಂಡಳಿ ಅಧ್ಯಕ್ಷರು, ಸದಸ್ಯರಿಗೆ ದಂಡ ವಿಧಿಸಲಾಗಿದೆ. ದಂಡದ ಪ್ರಮಾಣ ಮರು ಪರೀಕ್ಷೆಗೆ ತಗುಲಿದ ವೆಚ್ಚಕ್ಕೆ ಅನುಗುಣವಾಗಿದೆ
> **ಪ್ರ. ಶಶಿಕಾಂತ ಉಡಿಕೇರಿ** ಮೌಲ್ಯಮಾಪನ ಕುಲಸಚಿವ, ವಿಎಸ್‌ಕೆವಿವಿ

ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ವಾಣಿಜ್ಯಶಾಸ್ತ್ರ ವಿಭಾಗದ ಮೂರು ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ಈ ಪರೀಕ್ಷೆಗಳನ್ನು ನಡೆಸಲು ಮಾಡಿದ್ದ ಒಟ್ಟಾರೆ ವೆಚ್ಚವನ್ನು ಪರೀಕ್ಷಾ ಮಂಡಳಿ ಅಧ್ಯಕ್ಷರು, ಸದಸ್ಯರಿಂದ ವಸೂಲು ಮಾಡಲು ಉಪ ಸಮಿತಿ ಶಿಫಾರಸು ಮಾಡಿತ್ತು. ಪರೀಕ್ಷೆ ಒಟ್ಟಾರೆ ವೆಚ್ಚ ಲೆಕ್ಕಹಾಕಿ ತಲಾ ₹ 1 ಲಕ್ಷ ದಂಡ ಹಾಕಲಾಗಿದೆ.

‘ಯಾವ ಹಂತದಲ್ಲಿ ಮತ್ತು ಹೇಗೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ’ ಎಂಬುದನ್ನು ಪತ್ತೆ ಹಚ್ಚಲು ಸೈಬರ್ ಕ್ರೈಂ ಪೊಲೀಸರಿಗೆ ದೂರು ಕೊಡುವುದಕ್ಕೂ ಸಿಂಡಿಕೇಟ್ ಅನುಮೋದನೆ ನೀಡಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮ್ಯಾನೇಜ್‌ಮೆಂಟ್ ಅಕೌಂಟಿಂಗ್ ಜತೆ ಉಳಿದೆರಡು ವಿಷಯಗಳ ಮರು ಪರೀಕ್ಷೆ ನಡೆಸಲಾಗಿತ್ತು.

ಸಿಂಡಿಕೇಟ್ ಸದಸ್ಯರಾದ ಜಯಪ್ರಕಾಶ್, ಮರ್ಚೇಡ್ ಮಲ್ಲಿಕಾರ್ಜುನಗೌಡ, ನರಸಿಂಹ ರಾಯಚೂರು, ಎಂಬಿಎ ವಿಭಾಗದ ಚೇರ್ಮನ್ ಭೀಮನಗೌಡ ಹಾಗೂ ವಿವಿ ಸಹಾಯಕ ರಿಜಿಸ್ಟ್ರಾರ್ ತಿಪ್ಪೇಸ್ವಾಮಿ ಅವರನ್ನೊಳಗೊಂಡ ಉಪ ಸಮಿತಿ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣ ಕುರಿತು ವಿಚಾರಣೆ ನಡೆಸಿ ವರದಿ ಸಲ್ಲಿಸಿತ್ತು.

‘ಕಾಂಗ್ರೆಸ್ ಜೊತೆ ಸಮನ್ವಯ ಇಲ್ಲ’

ಕೋಲ್ಕತ್ತ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಸಹಕರಿಸಲು ತನಗೆ ಆಸಕ್ತಿ ಇಲ್ಲ ಎಂದು ತೃಣಮೂಲ ಕಾಂಗ್ರೆಸ್(ಟಿಎಂಸಿ) ಶನಿವಾರ ಹೇಳಿದೆ.

ಆದರೆ, ಸಾರ್ವಜನಿಕ ಹಿತಾಸಕ್ತಿ ವಿಷಯಗಳಿಗಾಗಿ, ಇತರ ವಿರೋಧ ಪಕ್ಷಗಳ ಜೊತೆಗೆ ಸಹಕರಿಸುವುದಾಗಿ ತಿಳಿಸಿದೆ.

ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನ.29ರಂದು ನಡೆಯಲಿರುವ ಪ್ರತಿಪಕ್ಷಗಳ ಸಭೆಯಲ್ಲಿ ಟಿಎಂಸಿ ಬಹುತೇಕ ಭಾಗವಹಿಸುವುದಿಲ್ಲ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

‘ಕಾಂಗ್ರೆಸ್ ನಾಯಕರು, ಮೊದಲಿಗೆ ತಮ್ಮ ಪಕ್ಷದೊಳಗೆ ಸಮನ್ವಯ ಸಾಧಿಸಲಿ. ಮೊದಲು, ಅವರು ತಮ್ಮ ಮನೆಯನ್ನು ಕ್ರಮಬದ್ಧವಾಗಿ ಇರಿಸಿಕೊಳ್ಳಲಿ. ಬಳಿಕ ಬೇರೆ ಪಕ್ಷಗಳ ಜೊತೆಗಿನ ಸಮನ್ವಯದ ಕುರಿತು ಯೋಚನೆ ಮಾಡಬೇಕು. ಕೇಸರಿ ಪಾಳಯದ ವಿರುದ್ಧ ಹೋರಾಡಲು ಕಾಂಗ್ರೆಸ್ ನಾಯಕರಿಗೆ ದೃಢ ನಿಶ್ಚಯದ ಕೊರತೆ ಇದೆ’ ಎಂದರು

ಟಿಎಂಸಿ ಮುಖ್ಯಸ್ಥೆಯೂ ಆಗಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಇಲ್ಲಿನ ನಿವಾಸದಲ್ಲಿ ನ.29ರಂದು ಪಕ್ಷದ ರಾಷ್ಟ್ರೀಯ ಸಮನ್ವಯತಾ ಸಮಿತಿ ಸಭೆ ನಡೆಯಲಿದ್ದು, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪಕ್ಷದ ಕಾರ್ಯತಂತ್ರ ರೂಪಿಸುವುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲಿದೆ ಎಂದು ಅವರು ಹೇಳಿದ್ದಾರೆ.

ಸದನದ ನಿರ್ವಹಣೆಗಾಗಿ ಟಿಎಂಸಿ ಸೇರಿದಂತೆ ಎಲ್ಲಾ ವಿಪಕ್ಷಗಳ ಜೊತೆ ಸಮನ್ವಯತೆ ಸಾಧಿಸುವುದಾಗಿ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಇತ್ತೀಚೆಗೆ ಹೇಳಿದ್ದರು.

ನಾಳೆ ಪ್ರತಿಪಕ್ಷಗಳ ನಾಯಕರ ಸಭೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ವಿರುದ್ಧದ ಹೋರಾಟದ ಕಾರ್ಯತಂತ್ರವನ್ನು ರೂಪಿಸಲು ವಿರೋಧ ಪಕ್ಷಗಳ ನಾಯಕರು ಸೋಮವಾರ (ನ.29) ಬೆಳಿಗ್ಗೆ ಸಭೆ ಸೇರಲಿದ್ದಾರೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಂಬಂಧ ಸಂಸತ್ತಿನ ಉಭಯ ಸದನಗಳ ಪ್ರತಿಪಕ್ಷಗಳ ಸದನದ ನಾಯಕರಿಗೆ ಪತ್ರ ಬರೆದಿದ್ದಾರೆ. ಚಳಿಗಾಲದ ಅಧಿವೇಶನವು ಅದೇ ದಿನ ಆರಂಭವಾಗಲಿದ್ದು, ಡಿಸೆಂಬರ್ 23ರವರೆಗೂ ನಡೆಯಲಿದೆ.

ಉತ್ತರಪ್ರದೇಶದಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆ

‘ಗೆಲ್ಲುವುದಕ್ಕೆ ಬಿಜೆಪಿಯಿಂದ ಧರ್ಮ, ಜಾತಿ ಬಳಕೆ’

ಪ್ರಜಾವಾಣಿ ವಾರ್ತೆ

ಲಖನೌ: ‘ಉತ್ತರಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ಧರ್ಮ, ಜಾತಿ, ಸುಳ್ಳು ಜಾಹೀರಾತುಗಳು ಮತ್ತು ನಕಲಿ ಫೋಟೋಗಳನ್ನು ಬಳಸುತ್ತಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ಆರೋಪಿಸಿದ್ದಾರೆ.

ಬುಂದೇಲ್‌ಖಂಡ್ ಪ್ರದೇಶದ ಮಹೋಬಾ ಪಟ್ಟಣದಲ್ಲಿ ಕಾಂಗ್ರೆಸ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಬಿಜೆಪಿ ನಾಯಕರು ಸುಳ್ಳು ಭರವಸೆಗಳನ್ನು ನೀಡುತ್ತಾರೆ. ಅಂತೆಯೇ ಸುಳ್ಳು ಜಾಹೀರಾತುಗಳನ್ನು ಹಾಕುತ್ತಾರೆ. ತಮ್ಮ ಸರ್ಕಾರದ ಸಾಧನೆಯ ಚಿತ್ರಗಳನ್ನು ತೋರಲು ನಕಲಿ ಫೋಟೊಗಳನ್ನೂ ಬಳಸುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ನೋಯಿಡಾ ದಲ್ಲಿನ ವಿಮಾನ ನಿಲ್ದಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದಾಗ ಅಲ್ಲಿನ ಚಿತ್ರದ ಬದಲು ಚೀನಾದ ವಿಮಾನ ನಿಲ್ದಾಣದ ಚಿತ್ರವೊಂದನ್ನು ಪ್ರದರ್ಶಿಸಲಾಗಿತ್ತು’ ಎಂದು ಟೀಕಿಸಿದರು.


ಪ್ರಿಯಾಂಕಾ ಗಾಂಧಿ ವಾದ್ರಾ

‘ಚುನಾವಣೆಯ ಸಂದರ್ಭದಲ್ಲಿ ಜನರ ಮತಗಳನ್ನು ಸೆಳೆಯುವ ಉದ್ದೇಶದಿಂದ ಬಿಜೆಪಿಯ ನಾಯಕರು ಧರ್ಮ ಮತ್ತು ಜಾತಿಯ ವಿಷಯಗಳನ್ನು ಬಳಸುತ್ತಾರೆ. ರಾಜಕೀಯದಲ್ಲಿ ಧರ್ಮ ಮತ್ತು ಜಾತಿಗೆ ಪ್ರಾತಿನಿಧ್ಯ ಇರಬೇಕು. ಆದರೆ, ಚುನಾವಣೆಯ ಸಮಯದಲ್ಲಿ ಸರ್ಕಾರಗಳು ತನ್ನ ಸಾಧನೆಯ ಲೆಕ್ಕವನ್ನು ಕೊಡಬೇಕು’ ಎಂದು ಹೇಳಿದರು.

ಪ್ರಯಾಗ್‌ರಾಜ್‌ನಲ್ಲಿ ಈಚೆಗೆ ಪರಿಶಿಷ್ಟ ಜಾತಿಯ ಕುಟುಂಬದ ನಾಲ್ವರ ಭೀಕರ ಹತ್ಯೆ ಮತ್ತು ಬಾಲಕಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಉಲ್ಲೇಖಿಸಿದ ಪ್ರಿಯಾಂಕಾ, ‘ಉತ್ತರಪ್ರದೇಶ ಸರ್ಕಾರವು ಸಮಾಜದ ದುರ್ಬಲ ವರ್ಗಗಳ ಸುರಕ್ಷತೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ’ ಎಂದು ಆರೋಪಿಸಿದರು.

‘ಬುಂದೇಲ್‌ಖಂಡದ ಲಲಿತಪುರ್‌ದಲ್ಲಿ ರಸಗೊಬ್ಬರ ವಿತರಣಾ ಕೇಂದ್ರದ ಮುಂದೆ ಗೊಬ್ಬರ ಖರೀದಿಸಲು ಸರತಿಯಲ್ಲಿ ನಿಂತಿದ್ದ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಿಜೆಪಿಯ ಆಡಳಿತದಲ್ಲಿ ರೈತರು ಅತಿಹೆಚ್ಚು ನಷ್ಟ ಅನುಭವಿಸಿದ್ದಾರೆ. ₹ 8 ಸಾವಿರ ಕೋಟಿಗೆ ಖರೀದಿಸಿದ ವಿಮಾನದಲ್ಲಿ ಪ್ರಧಾನಿಯವರು ಓಡಾಡಬಹುದು. ಆದರೆ, ಸಾಲದ ಸುಳಿಯಲ್ಲಿ ಸಿಲುಕಿರುವ ರೈತರಿಗೆ ನೆರವು ನೀಡಲು ಅವರ ಸರ್ಕಾರದ ಬಳಿ ಹಣವಿಲ್ಲ. ಬಿಜೆಪಿ ಆಡಳಿತದಲ್ಲಿ ರೈತರ ಆದಾಯ ಏರಿಕೆಯಾಗಿಲ್ಲ’ ಎಂದು ಪ್ರಿಯಾಂಕಾ ದೂರಿದರು.

ಮಹಿಳಾ ಮತದಾರರನ್ನು ಉದ್ದೇಶಿಸಿ ಮಾತನಾಡಿದ ಪ್ರಿಯಾಂಕಾ, ‘ಮಹಿಳೆಯರು ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಲು ಹೆಚ್ಚಿನ ಸಂಖ್ಯೆಯಲ್ಲಿ ಹೊರಬರಬೇಕು’ ಎಂದರು.

‘ದೇವಾಲಯಗಳನ್ನು ನಿಯಂತ್ರಣದಿಂದ ಮುಕ್ತಗೊಳಿಸಿ’

ನವದೆಹಲಿ: ಹಿಂದೂ ದೇವಸ್ಥಾನಗಳು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸರ್ಕಾರದ ನಿಯಂತ್ರಣದಿಂದ ಸ್ವತಂತ್ರಗೊಳಿಸುವ ಕಾನೂನು ಜಾರಿಗೆ ತರುವಂತೆ ವಿಶ್ವ ಹಿಂದೂ ಪರಿಷತ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ದೇಶದಲ್ಲಿ ಕಾನೂನುಬಾಹಿರ ಮತಾಂತರವನ್ನು ತಡೆಯುವ ಬಲವಾದ ಕಾನೂನನ್ನು ಜಾರಿಗೊಳಿಸುವಂತೆಯೂ ಅದು ಕೇಂದ್ರಕ್ಕೆ ಮನವಿ ಮಾಡಿದೆ.

‘ರಾಜ್ಯ ಸರ್ಕಾರಗಳು ಕೆಲವು ಶ್ರೀಮಂತ ದೇವಾಲಯಗಳಲ್ಲಿ ಭಕ್ತರ ಕಾಣಿಕೆಗಳನ್ನು ಕಾರಣವಿಲ್ಲದೆ ಮತ್ತು ಅನಿಯಂತ್ರಿತವಾಗಿ ಖರ್ಚು ಮಾಡುತ್ತವೆ’ ಎಂದು ವಿಎಚ್‌ಪಿಯ ಅಂತರ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ.

ಟೆಸ್ಟ್: ನ್ಯೂಜಿಲೆಂಡ್‌ಗೆ 49 ರನ್‌ಗಳ ಹಿನ್ನಡೆ: ಅಶ್ವಿನ್‌ಗೆ ಮೂರು ವಿಕೆಟ್

ಕಾನ್ಪುರದಲ್ಲಿ ಪಟೇಲ್ ಪಾರುಪತ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶತಕ ತಪ್ಪಿಸಿಕೊಂಡ ಟಾಮ್ ಲಥಾಮ್
- ಜಡೇಜ, ಉಮೇಶ್‌ಗೆ ತಲಾ ಒಂದು ವಿಕೆಟ್

ಕಾನ್ಪುರ: ಎಡಗೈ ಸ್ಪಿನ್ ಮೋಡಿಗಾರ ಅಕ್ಷರ್ ಪಟೇಲ್ ಮತ್ತೊಮ್ಮೆ ತಮ್ಮ ಕೈಚಳಕ ಮೆರೆದರು. ಬ್ಯಾಟರ್‌ಗಳ ಮಂಡಿಯೆತ್ತರಕ್ಕೂ ಪುಟಿಯದ ಚೆಂಡಿನ ಲಯವನ್ನು ಸರಿಯಾಗಿ ನಿರ್ದೇಶಿಸಿದ ಅಕ್ಷರ್ (34-6-62-5) ಪಂಚಗುಚ್ಛದ ಸಾಧನೆ ಮಾಡಿದರು. ಇದರಿಂದಾಗಿ ನ್ಯೂಜಿಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 49 ರನ್‌ಗಳ ಹಿನ್ನಡೆ ಅನುಭವಿಸಿತು.

ಆರಂಭಿಕ ಜೋಡಿ ಟಾಮ್ ಲಥಾಮ್ ಮತ್ತು ವಿಲ್ ಯಂಗ್ ಜೊತೆಯಾಟದಲ್ಲಿ 151 ರನ್‌ಗಳು ಸೇರಿದರೂ ತಂಡವು 142.3 ಓವರ್‌ಗಳಲ್ಲಿ 296 ರನ್ ಗಳಿಸಿತು. ಶ್ರೇಯಸ್ ಅಯ್ಯರ್ ಶತಕದ ಬಲದಿಂದ ಭಾರತ ತಂಡವು 345 ರನ್ ಗಳಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 5 ಓವರ್‌ಗಳಲ್ಲಿ 1 ವಿಕೆಟ್‌ಗೆ 14 ರನ್ ಗಳಿಸಿದೆ. ಮಯಂಕ್ ಅಗರವಾಲ್ (ಬ್ಯಾಟಿಂಗ್ 4) ಮತ್ತು ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 9) ಕ್ರೀಸ್‌ನಲ್ಲಿದ್ದಾರೆ.

ಅಕ್ಷರ್ ಜೊತೆಗೆ ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ (82ಕ್ಕೆ3) ಕಿವೀಸ್ ಪತನಕ್ಕೆ ಕೈಜೋಡಿಸಿದರು. ಚೆನ್ನೈನ ಅಶ್ವಿನ್ ಇನ್ನೊಂದು ವಿಕೆಟ್ ಪಡೆದರೆ ಹರ ಭಜನ್ ಸಿಂಗ್ (417ವಿಕೆಟ್) ದಾಖಲೆಯನ್ನು ಸರಿಗಟ್ಟುವುದರ ಜೊತೆಗೆ ಟೆಸ್ಟ್‌ನಲ್ಲಿ ಅತಿಹೆಚ್ಚು ವಿಕೆಟ್ ಪಡೆದ ಭಾರತದ ಮೂರನೇ ಬೌಲರ್ ಆಗಲಿದ್ದಾರೆ.

ನಾಲ್ಕನೇ ಪಂದ್ಯ; ಐದು ಗೊಂಚಲು: ಗುಜರಾತ್ ಆಟಗಾರ ಅಕ್ಷರ್ ಪಟೇಲ್‌ಗೆ ಇದು ನಾಲ್ಕನೇ ಟೆಸ್ಟ್ ಮಾತ್ರ. ಆದರೆ ಅವರು ಐದನೇ ಬಾರಿ ವಿಕೆಟ್‌ಗಳ ಐದರ ಗೊಂಚಲು ಗಳಿಸಿದ ಸಾಧನೆ ಮಾಡಿದರು.

ಹೋದ ಫೆಬ್ರುವರಿಯಲ್ಲಿ ಚೆನ್ನೈನಲ್ಲಿ ನಡೆದಿದ್ದ ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಅವರು ಪದಾರ್ಪಣೆ ಮಾಡಿದ್ದರು. ಆ ಸರಣಿಯ ಮೂರು ಪಂದ್ಯಗಳಲ್ಲಿ ಅವರು ಒಟ್ಟು 27 ವಿಕೆಟ್ ಗಳಿಸಿದ್ದರು. ಅದರಲ್ಲಿ ನಾಲ್ಕು ಬಾರಿ 5 ವಿಕೆಟ್ ಗಳಿಸಿದ ಸಾಧನೆ ಮಾಡಿದ್ದರು.

ಗ್ರೀನ್ ಪಾರ್ಕ್‌ನಲ್ಲಿ ಎರಡನೇ ದಿನದಾಟದಲ್ಲಿ ಅಕ್ಷರ್ ಸೇರಿದಂತೆ ಭಾರತದ ಯಾವುದೇ ಬೌಲರ್‌ಗೂ ವಿಕೆಟ್ ಒಲಿದಿರಲಿಲ್ಲ. ಶುಕ್ರವಾರ ಕಿವೀಸ್ ತಂಡವು 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 129 ರನ್ ಗಳಿಸಿತ್ತು. ಅರ್ಧಶತಕ ಗಳಿಸಿದ್ದ ಲಥಾಮ್ ಮತ್ತು ಯಂಗ್ ಕ್ರೀಸ್‌ನಲ್ಲಿದ್ದರು. ಈ ಜೋಡಿಯು ಮೂರನೇ ದಿನದಾಟದಲ್ಲಿಯೂ ತಾಳ್ಮೆಯ ಆಟ ಮುಂದುವರಿಸಿತು.

ದಿನದ 10ನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಮುರಿಯುವಲ್ಲಿ ಅಶ್ವಿನ್ ಸಫಲರಾದರು. ಬದಲೀ ವಿಕೆಟ್‌ಕೀಪರ್ ಶ್ರೀಕರ್ ಭರತ್ ಪಡೆದ ಕ್ಯಾಚ್‌ಗೆ ಯಂಗ್ ಪೆವಿಲಿಯನ್‌ಗೆ ಮರಳಬೇಕಾಯಿತು. ಆದರೆ ಇನ್ನೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟಿಂಗ್ ಮಾಡುತ್ತಿದ್ದ ಲಥಾಮ್ ಜೊತೆಗೆ ಸೇರಿದ ನಾಯಕ ಕೇನ್ ವಿಲಿಯಮ್ಸನ್, ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಆದರೆ, ಮಧ್ಯಮವೇಗಿ ಉಮೇಶ್ ಯಾದವ್ ಹಾಕಿದ ಎಸೆತವನ್ನು ರಕ್ಷಣಾತ್ಮಕವಾಗಿ ಆಡಲು ಯತ್ನಿಸಿದ ಕೇನ್ ವಿಲಿಯಮ್ಸನ್ ವಿಕೆಟ್‌ಕೀಪರ್‌ಗೆ ಕ್ಯಾಚಿತ್ತರು. ಇದರಿಂದ ಭಾರತದ ಅವಕಾಶದ ಬಾಗಿಲು ತೆರೆಯಿತು. ಅಕ್ಷರ್ ಆಟ ಆರಂಭವಾಯಿತು. ರಾಸ್ ಟೇಲರ್ ವಿಕೆಟ್ ಗಳಿಸುವ ಮೂಲಕ ತಮ್ಮ ಖಾತೆ ತೆರೆದ ಅಕ್ಷರ್, ಹೆನ್ರಿ ನಿಕೋಲ್ಸ್, ಶತಕದತ್ತ ಹೆಜ್ಜೆಯಿಟ್ಟಿದ್ದ ಆರಂಭಿಕ ಬ್ಯಾಟ್ಸ್‌ಮನ್ ಟಾಮ್ ಲಥಾಮ್ (95; 282ಎಸೆತ), ಅಪಾರ ತಾಳ್ಮೆಯಿಂದ ಆಡುತ್ತಿದ್ದ ಟಾಮ್ ಬ್ಲಂಡೆಲ್ (13; 94ಎ), ಕೈಲ್ ಜೆಮಿಸನ್ ಮತ್ತು ಟಿಮ್ ಸೌಥಿ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಕೇನ್ ಬಳಗವು ಹಿನ್ನಡೆ ಅನುಭವಿಸಿತು.



ನಾನು ದೇಶಿ ಕ್ರಿಕೆಟ್ ಮತ್ತು ಭಾರತ ಎ ತಂಡದಲ್ಲಿ ಚೆನ್ನಾಗಿಯೇ ಆಡಿದ್ದೇನೆ. ನನ್ನನ್ನು ಎಂದಿಗೂ ಸೀಮಿತ ಓವರ್‌ಗಳ ಕ್ರಿಕೆಟ್‌ನ ಬೌಲರ್ ಎಂದು ಪರಿಗಣಿಸಿಕೊಂಡಿಲ್ಲ.
ಅಕ್ಷರ್ ಪಟೇಲ್ ಭಾರತದ ಸ್ಪಿನ್ನರ್

ಭಾರತದಲ್ಲಿ ಸ್ಪಿನ್ನರ್‌ಗಳನ್ನು ಎದುರಿಸಲು ಕೋಚ್ ಸ್ಟೆಡ್ಸ್ ನೀಡಿದ ಸಲಹೆಗಳು ನೆರವಾದವು. ಆತ್ಮವಿಶ್ವಾಸದಿಂದ ಆಡಲು ಸಾಧ್ಯವಾಯಿತು.
ವಿಲ್ ಯಂಗ್, ನ್ಯೂಜಿಲೆಂಡ್ ಆರಂಭಿಕ ಬ್ಯಾಟ್ಸ್‌ಮನ್

ಭರತ್ ಮಿಂಚು

ಕಾನ್ಪುರ (ಪಿಟಿಐ): ಕತ್ತು ನೋವಿನಿಂದಾಗಿ ಮೂರನೇ ದಿನದಾಟದಲ್ಲಿ ಕಣಕ್ಕಿಳಿಯದ ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಅವರ ಬದಲಿಗೆ ಆಡಿದ ಶ್ರೀಕರ್ ಭರತ್ ಗಮನ ಸೆಳೆದರು.

ಅನಿರೀಕ್ಷಿತವಾಗಿ ಪುಟಿದೇಳುವ ಚೆಂಡು, ಸ್ಪಿನ್ ಬೌಲರ್‌ಗಳ ಕೌಶಲದಿಂದಾಗಿ ತಿರುಗುತ್ತಿದ್ದ ಚೆಂಡಿನ ಲಯವನ್ನು ಹಿಂಬಾಲಿಸಿ ಹಿಡಿತಕ್ಕೆ ಪಡೆಯುವುದು ಸವಾಲಿನ ಕೆಲಸ. ಆದರೆ ಇದರಲ್ಲಿ ಭರತ್ ಯಶಸ್ವಿಯಾದರು. ಶತಕದಂಚಿನಲ್ಲಿದ್ದ ಕಿವೀಸ್ ಬ್ಯಾಟ್ಸ್‌ಮನ್ ಟಾಮ್ ಲಥಾಮ್ ಅವರನ್ನು ಚುರುಕಿನ ಸ್ಟಂಪಿಂಗ್ ಮೂಲಕ ಔಟ್ ಮಾಡಿದ ಭರತ್ ಮಿಂಚಿದರು. ಅಲ್ಲದೇ ವಿಲ್ ಯಂಗ್ ಮತ್ತು ರಾಸ್ ಟೇಲರ್ ಅವರ ಕ್ಯಾಚ್‌ಗಳನ್ನೂ ಪಡೆದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 345 (111.1 ಓವರ್)
ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 296 (142.3 ಓವರ್)
(ಶುಕ್ರವಾರ 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 129)
ಲಥಾಮ್ ಸ್ಟಂಪ್ಡ್ ಭರತ್ (ಬದಲಿ) ಬಿ ಅಕ್ಷರ್ 95 (282ಎ, 4X10), ಯಂಗ್ ಸಿ ಭರತ್ (ಬದಲಿ) ಬಿ ಅಶ್ವಿನ್ 89 (214ಎ, 4X15), ವಿಲಿಯಮ್ಸನ್ ಎಲ್‌ಬಿಡಬ್ಲ್ಯು ಯಾದವ್ 18 (64ಎ, 4X2), ಟೇಲರ್ ಸಿ ಭರತ್ (ಬದಲಿ) ಬಿ ಅಕ್ಷರ್ 11 (28ಎ, 4X1), ನಿಕೋಲ್ಸ್ ಎಲ್‌ಬಿಡಬ್ಲ್ಯು ಅಕ್ಷರ್ 2 (9ಎ), ಬ್ಲಂಡೆಲ್ ಬಿ ಅಕ್ಷರ್ 13 (94ಎ), ರಚಿನ್ ಬಿ ಜಡೇಜ 13 (23ಎ, 4X2), ಜೆಮಿಸನ್ ಸಿ ಅಕ್ಷರ್ ಬಿ ಅಶ್ವಿನ್ 23 (75ಎ, 4X1), ಸೌಥಿ ಬಿ ಅಕ್ಷರ್ 5 (13ಎ), ಸೋಮರ್‌ವಿಲ್ ಬಿ ಅಶ್ವಿನ್ 6 (52ಎ), ಎಜಾಜ್ ಔಟಾಗದೆ 5 (6ಎ, 4X1) **ಇತರೆ:** (ಬೈ 6, ಲೆಗ್‌ಬೈ 4, ನೋಬಾಲ್ 5, ವೈಡ್ 1) 16
ವಿಕೆಟ್ ಪತನ: 1-151 (ವಿಲ್ ಯಂಗ್, 66.1), 2-197 (ವಿಲಿಯಮ್ಸನ್, 85.3), 3-214 (ರಾಸ್ ಟೇಲರ್, 94.3), 4-218 (ಹೆನ್ರಿ ನಿಕೋಲ್ಸ್, 96.5), 5-227 (ಲಥಾಮ್, 102.1), 6-241 (ರಚಿನ್ ರವೀಂದ್ರ, 110.4), 7-258 (ಬ್ಲಂಡೆಲ್, 123.4), 8-270 (ಸೌಥಿ, 127.4), 9-284 (ಕೈಲ್ ಜೆಮಿಸನ್, 138.6), 10-296 (ಸೋಮರ್‌ವಿಲ್, 142.3)
ಬೌಲಿಂಗ್: ಇಶಾಂತ್ ಶರ್ಮಾ 15-5-35-0, ಉಮೇಶ್ ಯಾದವ್ 18-3-50-1 ರವಿಚಂದ್ರನ್ ಅಶ್ವಿನ್ 42.3-10-82-3, ರವೀಂದ್ರ ಜಡೇಜ 33-10-57-1, ಅಕ್ಷರ್ ಪಟೇಲ್ 34-6-62-5
ಭಾರತ 2ನೇ ಇನಿಂಗ್ಸ್ 1ಕ್ಕೆ 14 (5 ಓವರ್)
ಮಯಂಕ್ ಬ್ಯಾಟಿಂಗ್ 4 (13ಎ), ಗಿಲ್ ಬಿ ಜೆಮಿಸನ್ 1 (3ಎ), ಪೂಜಾರ ಔಟಾಗದೆ 9 (14ಎ, 4X2) **ವಿಕೆಟ್ ಪತನ:** 1-2 (ಶುಭಮನ್ ಗಿಲ್, 1.1)
ಬೌಲಿಂಗ್: ಟಿಮ್ ಸೌಥಿ 2-1-2-0, ಕೈಲ್ ಜೆಮಿಸನ್ 2-0-8-1, ಎಜಾಜ್ ಪಟೇಲ್ 1-0-4-0

ಅಕ್ಷರ್ ಪಟೇಲ್

34 ಓವರ್ | 6 ಮೇಡನ್ | 62 ರನ್ | 5 ವಿಕೆಟ್

ಐಎಸ್‌ಎಲ್: ಎಟಿಕೆಎಂಬಿಗೆ ಜಯ

ವಾಸ್ಕೊ (ಪಿಟಿಐ): ಮಾಜಿ ಚಾಂಪಿಯನ್ ಎಟಿಕೆ ಮೋಹನ್ ಬಾಗನ್(ಎಟಿಕೆಎಂ-ಬಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು 3-0ಯಿಂದ ಗೆದ್ದಿತು.

ತಿಲಕ್ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ವಿಜೇತ ತಂಡದ ಪರ ರಾಯ್ ಕೃಷ್ಣ (12ನೇ ನಿಮಿಷ), ಮನ್‌ವೀರ್ ಸಿಂಗ್ (14ನೇ ನಿಮಿಷ) ಮತ್ತು ಲಿಸ್ಟನ್ ಕೊಲ್ಯಾಸೊ (23ನೇ ನಿಮಿಷ) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ 3-1ರಿಂದ ಮುಂಬೈ ಸಿಟಿ ಎಫ್‌ಸಿಗೆ ಆಘಾತ ನೀಡಿತು.



ಎಟಿಕೆಎಂಬಿ ತಂಡದ ರಾಯ್‌ಕೃಷ್ಣ (ಎಡ) ಚೆಂಡಿನೊಂದಿಗೆ ಮುನ್ನುಗ್ಗಿದರು– ಪಿಟಿಐ ಚಿತ್ರ

ಬಿಎಫ್‌ಸಿಗೆ ಲಯಕ್ಕೆ ಮರಳುವ ತವಕ: ಬ್ಯಾಂಬೊಲಿಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಭಾನುವಾರ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ. ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಪಂದ್ಯ ನಿಗದಿಯಾಗಿದೆ. ಟೂರ್ನಿಯ ಮೊದಲ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ಎದುರು 4-2ರಿಂದ ಗೆದ್ದಿದ್ದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ, ಎರಡನೇ ಪಂದ್ಯದಲ್ಲಿ ಒಡಿಶಾ ಎಫ್‌ಸಿ ಎದುರು 1-3ರಿಂದ ಎಡವಿತ್ತು. ಈ ಪಂದ್ಯದಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದೆ.

ಇದುವರೆಗೆ ಎಲ್ಲ ಹಂತಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದರೂ ಗೋಲು ಗಳಿಕೆಯಲ್ಲಿ ಬಿಎಫ್‌ಸಿಗೆ ನಿರೀಕ್ಷಿತ ಫಲ ಸಿಕ್ಕಿಲ್ಲ. ಕೇರಳ ತಂಡ ಆಡಿದ ಎರಡು ಪಂದ್ಯಗಳ ಪೈಕಿ ಒಂದರಲ್ಲಿ ಡ್ರಾ ಸಾಧಿಸಿದ್ದರೆ, ಮತ್ತೊಂದರಲ್ಲಿ ಸೋಲು ಕಂಡಿದೆ. ಈ ಪಂದ್ಯದಲ್ಲಿ ಗೆಲುವಿಗಾಗಿ ಛಲ ತೊಟ್ಟಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರಿನಲ್ಲಿ ಮಹಿಳೆಯರ ಐಟಿಎಫ್ ಟೆನಿಸ್ ಟೂರ್

ಪ್ರಗತಿ, ಮೇಘನಾಗೆ ವೈಲ್ಡ್‌ಕಾರ್ಡ್

ಬೆಂಗಳೂರು: ಮಹಿಳೆಯರ ಐಟಿಎಫ್ ವಿಶ್ವ ಟೆನಿಸ್ ಟೂರ್ ಭಾನುವಾರ ಅರ್ಹತಾ ಸುತ್ತಿನ ಪಂದ್ಯಗಳೊಂದಿಗೆ ಇಲ್ಲಿ ಆರಂಭವಾಗಲಿದೆ. ಟೂರ್ನಿಯ ಆಯೋಜನೆಗೆ ಕರ್ನಾಟಕ ಲಾನ್ ಟೆನಿಸ್ ಸಂಸ್ಥೆಯು(ಕೆಎಸ್‌ಎಲ್‌ಟಿಎ) ಸಜ್ಜುಗೊಂಡಿದೆ.

₹ 11.25 ಲಕ್ಷ ಬಹುಮಾನ ಮೊತ್ತದ ಟೂರ್ನಿಯ ಮುಖ್ಯ ಸುತ್ತಿನ ಪಂದ್ಯಗಳು ಮಂಗಳವಾರದಿಂದ ನಡೆಯಲಿವೆ.

ಅಖಿಲ ಭಾರತ ಟೆನಿಸ್ ಸಂಸ್ಥೆಯು (ಎಐಟಿಎ) ಕೃತಿ ತೋಮರ್, ಅದಿತಿ ಅರೆ ಮತ್ತು ಪ್ರಿಯಾಂಶಿ ಭಂಡಾರಿ ಅವರಿಗೆ ಟೂರ್ನಿಯ ಕ್ವಾಲಿಫೈಯರ್ ಪಂದ್ಯಗಳಿಗೆ ವೈಲ್ಡ್‌ಕಾರ್ಡ್ ಪ್ರವೇಶ ನೀಡಿದರೆ, ಕೆಎಸ್‌ಎಲ್‌ಟಿಎನಿಂದ ಪ್ರಗತಿ ಪ್ರಸಾದ್ ನಾರಾಯಣ್, ಹೃದಯೇಶಿ ಪೈ ಮತ್ತು ಪಿ. ಮೇಘನಾ (ಎಲ್ಲರೂ ಕರ್ನಾಟಕ) ವೈಲ್ಡ್‌ಕಾರ್ಡ್ ಪಡೆದಿದ್ದಾರೆ.



ಟೂರ್ನಿಯಲ್ಲಿ ಸ್ಪರ್ಧಿಸಲಿರುವ ಡೆನ್ಮಾರ್ಕ್‌ನ ಎಲೆನಾ ಜಾಮ್‌ಶಿದಿ ಅವರು ಶನಿವಾರ ಅಭ್ಯಾಸ ನಡೆಸಿದರು

ಕ್ವಾಲಿಫೈಯರ್ಸ್‌ನಲ್ಲಿ 32 ಆಟಗಾರ್ತಿಯರು ಇದ್ದು, ಇವರಲ್ಲಿ ಎಂಟು ಮಂದಿ ಮುಖ್ಯ ಸುತ್ತಿಗೆ ಆಯ್ಕೆಯಾಗಲಿದ್ದಾರೆ. ಟೂರ್ನಿಯಲ್ಲಿ ಪ್ರಶಸ್ತಿ ವಿಜೇತರು 10 ಡಬ್ಲ್ಯುಟಿಎ ಪಾಯಿಂಟ್ಸ್, ರನ್ನರ್‌ಅಪ್ ಆರು ಪಾಯಿಂಟ್ಸ್, ಸೆಮಿಫೈನಲ್ ತಲುಪಿದವರು ನಾಲ್ಕು ಪಾಯಿಂಟ್ಸ್ ಮತ್ತು ಕ್ವಾರ್ಟರ್‌ಫೈನಲ್ ಪ್ರವೇಶಿಸಿದವರು ಎರಡು ಪಾಯಿಂಟ್ಸ್ ಗಳಿಸಲಿದ್ದಾರೆ.

ಸಂತೋಷ್ ಟ್ರೋಫಿ: ಕರ್ನಾಟಕ ಜಯಭೇರಿ

ಬೆಂಗಳೂರು: ತೆಲಂಗಾಣ ಎದುರು ಜಯಭೇರಿ ಬಾರಿಸಿದ ಕರ್ನಾಟಕ ತಂಡವು ಸಂತೊಷ್ ಟ್ರೋಫಿ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಅಂತಿಮ ಸುತ್ತು ಪ್ರವೇಶಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಅರ್ಹತಾ ಪಂದ್ಯದಲ್ಲಿ ರಾಜ್ಯ ತಂಡಕ್ಕೆ 2-0ಯಿಂದ ಜಯ ಒಲಿಯಿತು. ಕರ್ನಾಟಕ ತಂಡದ ಎನ್. ಸೋಲೈಮಲಾಯಿ ಅವರು 10ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಮೊದಲ ಗೋಲು ದಾಖಲಿಸಿದರು. ಬಳಿಕ ಉಭಯ ತಂಡಗಳು ಗೋಲು ಗಳಿಕೆಗಾಗಿ ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು.

74ನೇ ನಿಮಿಷದಲ್ಲಿ ಬಾವು ನಿಷಾದ್ ಕಾಲ್ಚಳಕ ತೋರುವುದರೊಂದಿಗೆ ಕರ್ನಾಟಕದ ಗೆಲುವನ್ನು ಬಹುತೇಕ ಖಚಿತಪಡಿಸಿದರು. ಆಡಿದ ಮೂರು ಪಂದ್ಯಗಳನ್ನು ಗೆದ್ದಿರುವ ತಂಡವು ಒಂಬತ್ತು ಪಾಯಿಂಟ್ಸ್‌ನೊಂದಿಗೆ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿತು.

ಮತ್ತೊಂದು ಪಂದ್ಯದಲ್ಲಿ ತಮಿಳು ನಾಡು 1-0ಯಿಂದ ಆಂಧ್ರ ಎದುರು ಗೆದ್ದಿತು.

ತಂಡದ ಪರ ಸೆಂಥಮಿಳ್ 39ನೇ ನಿಮಿಷದಲ್ಲಿ ಗೋಲು ಹೊಡೆದರು.

ವಾಂಖೆಡೆ ಟೆಸ್ಟ್: ಶೇ 25ರಷ್ಟು ಪ್ರೇಕ್ಷಕರು

ಮುಂಬೈ (ಪಿಟಿಐ): ವಾಂಖೆಡೆ ಕ್ರೀಡಾಂಗಣದಲ್ಲಿ ಡಿಸೆಂಬರ್ 3 ರಿಂದ ನಡೆಯಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯಕ್ಕೆ ಗ್ಯಾಲರಿ ಸಾಮರ್ಥ್ಯದ ಶೇ 25ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ 30 ಸಾವಿರ ಜನರು ಕುಳಿತುಕೊಳ್ಳುವ ಸಾಮರ್ಥ್ಯದ ಗ್ಯಾಲರಿ ಇದೆ. 'ಮಹಾರಾಷ್ಟ್ರ ಸರ್ಕಾರವು ನೀಡಿರುವ ಅನು ಮತಿಯ ಪ್ರಕಾರ ಶೇ 25ರಷ್ಟು ಪ್ರೇಕ್ಷಕರಿಗೆ ಮಾತ್ರ ಅವಕಾಶ ನೀಡಲಾಗುವುದು. ಈ ಪ್ರಮಾಣವನ್ನು ಶೇ 50ಕ್ಕೇರಿಸಲು ಕೋರಿದ್ದೇವೆ. ಅದಕ್ಕೆ ಅನುಮತಿ ಲಭಿಸುವ ನಿರೀಕ್ಷೆ ಇದೆ' ಎಂದು ಮುಂಬೈ ಕ್ರಿಕೆಟ್ ಸಂಸ್ಥೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೋವಿಡ್ ಹಾವಳಿ: ಕ್ರಿಕೆಟ್ ಮುಂದೂಡಿಕೆ

ಜೋಹಾನ್ಸ್‌ಬರ್ಗ್/ದುಬೈ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಕೊರೊನಾ ವೈರಾಣುವಿನ ಹೊಸ ತಳಿ ಹಾವಳಿಯ ಹಿನ್ನೆಲೆಯಲ್ಲಿ ನೆದರ್ಲೆಂಡ್ಸ್ ವಿರುದ್ಧದ ಎರಡು ಏಕದಿನ ಪಂದ್ಯಗಳನ್ನು ಮುಂದೂಡಲಾಗಿದೆ.

ಶುಕ್ರವಾರ ಸೆಂಚುರಿಯನ್‌ನಲ್ಲಿ ಆಯೋಜಿಸಲಾಗಿದ್ದ ಮೊದಲ ಪಂದ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು.

'ಆದರೆ ಪ್ರವಾಸಿ ತಂಡಗಳ ಸುರಕ್ಷತೆ ಬಹುಮುಖ್ಯವಾದದ್ದು. ಆದ್ದರಿಂದ ಅನಿವಾರ್ಯವಾಗಿ ಪಂದ್ಯಗಳನ್ನು ಮುಂದೂಡಲಾಗಿದೆ' ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾದ ಸಿಇಒ ಪೊಲೆಟ್ಸಿ ಮೊಸೆಕಿ ಹೇಳಿದ್ದಾರೆ.

ಇನ್ನಷ್ಟು ಕ್ರೀಡಾ ಸುದ್ದಿಗಳು 14

ಸೋಮವಾರದಿಂದ ಚಿನ್ನದ ಬಾಂಡ್‌ನ 8ನೇ ಕಂತು



ಮುಂಬೈ (ಪಿಟಿಐ): ಚಿನ್ನದ ಬಾಂಡ್ ಯೋಜನೆಯ 2021–22ನೇ ಸಾಲಿನ 8ನೇ ಕಂತು ಸೋಮವಾರ ಆರಂಭ ಆಗಲಿದ್ದು ಶುಕ್ರವಾರ ಮುಗಿಯಲಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ಬೆಲೆಯನ್ನು ಪ್ರತಿ ಗ್ರಾಂಗೆ ₹ 4,791ರಷ್ಟು ನಿಗದಿಪಡಿಸಿದೆ.

ಆನ್‌ಲೈನ್ ಮೂಲಕ ಬಾಂಡ್ ಖರೀದಿಗೆ ಅರ್ಜಿ ಸಲ್ಲಿಸುವವರಿಗೆ ₹ 50 ವಿನಾಯಿತಿ ಸಿಗಲಿದೆ. ಹೀಗಾಗಿ ಇವರಿಗೆ ಬಾಂಡ್ ಬೆಲೆಯು ಪ್ರತಿ ಗ್ರಾಂಗೆ ₹ 4,741 ಇರಲಿದೆ.

ಚಿನ್ನದ ಬಾಂಡ್‌ನ ಏಳನೇ ಕಂತಿನಲ್ಲಿ ಪ್ರತಿ ಗ್ರಾಂಗೆ ನೀಡಿಕೆ ಬೆಲೆಯನ್ನು ₹ 4,761ಕ್ಕೆ ನಿಗದಿಪಡಿಸಲಾಗಿತ್ತು. ಬ್ಯಾಂಕುಗಳು (ಕಿರು ಹಣಕಾಸು ಬ್ಯಾಂಕ್ ಮತ್ತು ಪೇಮೆಂಟ್ ಬ್ಯಾಕ್ಸ್ ಹೊರತುಪಡಿಸಿ), ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ. ಕೇಂದ್ರ ಸರ್ಕಾರದ ಸಮ್ಮುಖದಲ್ಲಿ ಆರ್‌ಬಿಐ ಈ ಬಾಂಡ್‌ಗಳನ್ನು ವಿತರಣೆ ಮಾಡುತ್ತದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ. ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ. ಭೌತಿಕ ರೂಪದಲ್ಲಿ ನಿಷ್ಪ್ರಯೋಜಕವಾಗಿರುವ ಚಿನ್ನವನ್ನು ಬಳಕೆಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ 2015ರಲ್ಲಿ ಚಿನ್ನದ ಬಾಂಡ್ ಯೋಜನೆ ಜಾರಿಗೊಳಿಸಿತು.

ಕರಗಿತು ಷೇರುಪೇಟೆಯ ₹ 10.89 ಲಕ್ಷ ಕೋಟಿ ಸಂಪತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಷೇರುಪೇಟೆಯಲ್ಲಿ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯಕಂಡಿದ್ದು, ಹೂಡಿಕೆದಾರರ ಸಂಪತ್ತು ಮೌಲ್ಯವು ₹ 10.89 ಲಕ್ಷ ಕೋಟಿಗಳಷ್ಟು ಕರಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 258.31 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ.

ದೇಶದ ಷೇರುಪೇಟೆಗಳಿಂದ ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ವಾರದ ವಹಿವಾಟಿನಲ್ಲಿ ₹ 15,339 ಕೋಟಿಗೂ ಹೆಚ್ಚಿನ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಈ ವಾರ ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು. ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಹೆಚ್ಚಳದ ಆತಂಕವೂ ನಕಾರಾತ್ಮಕ ಪರಿಣಾಮ ಉಂಟುಮಾಡಿತು. ಈ ಕಾರಣಗಳಿಂದಾಗಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಈ ವಾರದ ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ಹರಿಸಿದರು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.



ಅಲ್ಪಾವಧಿಗೆ ಷೇರುಪೇಟೆಯ ವಹಿವಾಟು ಕೊರೊನಾದ ಹೊಸ ತಳಿಯ ಪ್ರಭಾವಕ್ಕೆ ಒಳಗಾಗಲಿದೆ ಎಂದೂ ತಜ್ಞರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಸಿದ್ದಾಪುರ	
ಬಿಳಿಗೋಟು	33619-42099
ಚಾಲಿ	48999-51009
ಕೋಕ	37099-37509
ಹೊಸಚಾಲಿ	29399-31699
ಕೆಂಪುಗೋಟು	34399-37899
ರಾಶಿ	40809-46599
ತಟ್ಟಿಬೆಟ್ಟೆ	42899-42899
ರಾಮನಗರ ರೇಷ್ಮೆ	
ಮಿಶ್ರತಳಿ	325-555
ದ್ವಿತಳಿ	255-736

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	14800	---	243.85 ಸೆಂಟ್ಸ್
ಎಸಿ	6450	6000	---	
ಆರ್‌ಪಿ	6200	---	6400	ಲಂಡನ್
ಆರ್‌ಸಿ	3720	3250	3725	2237 ಡಾಲರ್ಸ್

ಸೆಪ್ಟೆಂಬರ್ ತ್ರೈಮಾಸಿಕದ ಆರ್ಥಿಕ ಸಾಧನೆ

ಪೇಟಿಎಂ ಕಾರ್ಯಾಚರಣೆ ವರಮಾನ ಶೇ 69ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 'ಯುಪಿಐ'ಯೇತರ ಪಾವತಿಯ ಪ್ರಮಾಣದಲ್ಲಿ ಶೇ 52ರಷ್ಟು ಬೆಳವಣಿಗೆ
- ವರ್ತಕರ ಸಂಖ್ಯೆ 2.3 ಕೋಟಿಗೆ ಏರಿಕೆ

ಬೆಂಗಳೂರು: ಡಿಜಿಟಲ್ ಪಾವತಿ ಸೇವೆಗಳನ್ನು ನೀಡುವ ಪೇಟಿಎಂ ಕಂಪನಿಯು ಕಾರ್ಯಾಚರಣಾ ವರಮಾನವು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಶೇ 69ರಷ್ಟು ಹೆಚ್ಚಾಗಿದ್ದು ₹ 1,090 ಕೋಟಿಗಳಿಗೆ ಏರಿಕೆ ಆಗಿದೆ.

'ಯುಪಿಐ'ಯೇತರ ಪಾವತಿಯ ಪ್ರಮಾಣದಲ್ಲಿ ಶೇ 52ರಷ್ಟು ಬೆಳವಣಿಗೆ ಹಾಗೂ ಹಣಕಾಸು ಸೇವೆಗಳು ಮತ್ತು ಇತರೆ ವರಮಾನವು ಮೂರು ಪಟ್ಟು ಹೆಚ್ಚಳ ಆಗಿರುವುದರಿಂದ ಕಾರ್ಯಾಚರಣಾ ವರಮಾಣದಲ್ಲಿ ಈ ಪ್ರಮಾಣದ ಏರಿಕೆ ಕಂಡುಬಂದಿದೆ ಎಂದು ಕಂಪನಿಯು ತಿಳಿಸಿದೆ.

ಕಂಪನಿಯ ಸರಾಸರಿ ವಾಣಿಜ್ಯ ಮೌಲ್ಯವು (ಜಿಎಂವಿ) ₹ 83,200 ಕೋಟಿಗಳಿಂದ ₹ 1.95 ಲಕ್ಷ ಕೋಟಿಗಳಿಗೆ ಶೇ 107ರಷ್ಟು ಬೆಳವಣಿಗೆ ಕಂಡಿದೆ ಎಂದು ಅದು ತಿಳಿಸಿದೆ. ಪಾವತಿ ಮತ್ತು ಹಣಕಾಸು ಸೇವೆಗಳಿಂದ ಬಂದಿರುವ ವರಮಾನವು ಶೇ 69ರಷ್ಟು ಹೆಚ್ಚಾಗಿದ್ದು ₹ 842 ಕೋಟಿಗಳಷ್ಟಾಗಿದೆ. ವಾಣಿಜ್ಯ ಮತ್ತು ಕ್ಲೌಡ್ ಸೇವೆಗಳ ವರಮಾನವು ಶೇ 47ರಷ್ಟು ಹೆಚ್ಚಾಗಿದ್ದು ₹ 244 ಕೋಟಿಗಳಿಗೆ ತಲುಪಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರ್ತಕರ ಸಂಖ್ಯೆಯು 1.85 ಕೋಟಿಗಳಿಂದ 2.3 ಕೋಟಿಗಳಿಗೆ ಏರಿಕೆ ಆಗಿದೆ ಎಂದು ತಿಳಿಸಿದೆ.

ನಷ್ಟ ಹೆಚ್ಚಳ (ಪಿಟಿಐ ವರದಿ): ಎರಡನೇ ತ್ರೈಮಾಸಿಕದ ಅಂತ್ಯದ ವೇಳೆಗೆ ಕಂಪನಿಯ ₹ 473 ಕೋಟಿ ನಷ್ಟ ಅನುಭವಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 436.7 ಕೋಟಿಗಳಷ್ಟು ನಷ್ಟ ಅನುಭವಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ನಷ್ಟದ ಪ್ರಮಾಣವು ಶೇ 8.4ರಷ್ಟು ಹೆಚ್ಚಾಗಿದೆ.

ವೆಚ್ಚದಲ್ಲಿ ಏರಿಕೆ ಆಗಿರುವುದರಿಂದ ನಷ್ಟದ ಪ್ರಮಾಣ ಹೆಚ್ಚಾಗಿದೆ ಎಂದು ಅದು ಷೇರುಪೇಟೆಗೆ ಮಾಹಿತಿ ನೀಡಿದೆ. ಪೇಟಿಎಂನ ಪಾವತಿ ಪ್ರಕ್ರಿಯೆ ಶುಲ್ಕಗಳ ಮೇಲಿನ ವೆಚ್ಚವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 670 ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ವೆಚ್ಚವು ₹ 492.4 ಕೋಟಿಗಳಷ್ಟಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವೆಚ್ಚದಲ್ಲಿ ಶೇ 36ರಷ್ಟು ಹೆಚ್ಚಳವಾಗಿದೆ.

ತಂತ್ರಜ್ಞಾನ ಮತ್ತು ವರ್ತಕರ ವ್ಯಾಪ್ತಿ ವಿಸ್ತರಿಸಲು ಹೂಡಿಕೆಯನ್ನು ನಿರಂತರವಾಗಿ ಹೆಚ್ಚಿಸಲಾಗುತ್ತಿದೆ. ಇದರಿಂದಾಗಿ ನಮ್ಮ ವೆಚ್ಚದಲ್ಲಿ ಸುಧಾರಣೆ ಕಂಡುಬಂದಿದೆ. ಭಾರತದ ಪಾವತಿ ಮತ್ತು ಹಣಕಾಸು ಸೇವೆಗಳಲ್ಲಿ ಹೊಸತನ ತರಲು ಮತ್ತು ನಿರಂತರ ಹೂಡಿಕೆ ಮಾಡಲು ನಾವು ಬದ್ಧರಾಗಿದ್ದೇವೆ ಎಂದು ಪೇಟಿಎಂನ ವಕ್ತಾರರೊಬ್ಬರು ತಿಳಿಸಿದ್ದಾರೆ.

ರಕ್ಷಣಾ ಸಾಮರ್ಥ್ಯ ಹೆಚ್ಚಳ: ಜಪಾನ್

ಟೊಕಿಯೊ(ಎಪಿ): 'ದೇಶದ ಭದ್ರತೆಗೆ ಚೀನಾ ಹಾಗೂ ಉತ್ತರ ಕೊರಿಯಾದಿಂದ ಬೆದರಿಕೆ ಹೆಚ್ಚುತ್ತಿದೆ. ವೈರಿ ರಾಷ್ಟ್ರಗಳ ದಾಳಿಯಿಂದ ದೇಶವನ್ನು ರಕ್ಷಿಸಲು ಸೇನೆಯ ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಶನಿವಾರ ಶಪಥ ಮಾಡಿದರು.

ಮುಂಬೈ ಧಾರಣೆ

ಶೇಂಗಾ

27-11-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9400-9450
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1190 (1200)
ಪಾಮ್ ವಾರದ ಡೆಲಿವರಿ	1185 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1210)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,950 (48,200)
ಬೆಳ್ಳಿ ಕೆ.ಜಿ	62,500 (63,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಲಲಿತ ವಹಿವಾಟಿಗೆ ಇನ್ನಷ್ಟು ಕ್ರಮ: ಗೋಯಲ್

ನವದೆಹಲಿ (ಪಿಟಿಐ): ದೇಶದಲ್ಲಿ ಸುಲಲಿತ ವಾಣಿಜ್ಯ ವಹಿವಾಟು ನಡೆಸಲು ಇರುವ ಅಡೆತಡೆಗಳನ್ನು ನಿವಾರಿಸಲು ಕೇಂದ್ರ ಸರ್ಕಾರವು ರಾಜ್ಯಗಳ ಜೊತೆಗೂಡಿ ಕೆಲಸ ಮಾಡುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಸುಲಲಿತ ವಹಿವಾಟಿಗೆ ಉತ್ತೇಜನ ನೀಡುವ ಸಲುವಾಗಿ ಪರವಾನಗಿ ಅಗತ್ಯವನ್ನು ಕಡಿಮೆ ಮಾಡುವುದು ಹಾಗೂ ನವೀಕರಣ ಪ್ರಕ್ರಿಯೆ ಸರಳಗೊಳಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಆಯೋಜಿಸಿದ್ದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ವಾಣಿಜ್ಯ ವಿವಾದಗಳಂತಹ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಿಕೊಳ್ಳಲು ಉದ್ಯಮ ಮತ್ತು ಸರ್ಕಾರ ಒಟ್ಟಾಗಿ ಕೆಲಸ ಮಾಡುವಂತೆ ಸಲಹೆ ನೀಡಿದ್ದಾರೆ.

ರಫ್ತು ಹೆಚ್ಚಿಸಲು ಮತ್ತು ಉದ್ಯೋಗ ಸೃಷ್ಟಿಗೆ ಅನುಕೂಲ ಆಗುವಂತೆ ಉತ್ತಮ ವಿನ್ಯಾಸದ ಜೊತೆಗೆ ವೈವಿಧ್ಯಮಯ ಉತ್ಪನ್ನಗಳನ್ನು ರಫ್ತು ಮಾಡುವುದರತ್ತ ಗಮನ ಹರಿಸುವಂತೆ ಗೋಯಲ್ ಅವರು ಹರಳು ಮತ್ತು ಚಿನ್ನಾಭರಣ ಉದ್ಯಮಕ್ಕೆ ಸೂಚನೆ ನೀಡಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1235 (1240)
ಸೂರ್ಯಕಾಂತಿ (ರಿಫೈನ್ಡ್)	₹1300 (1310)
ಪಾಮೋಲಿನ್	₹1187 (1195)

ಪಣಜಿ: ಚಿತ್ರೋತ್ಸವಕ್ಕೆ ಇಂದು ತೆರೆ

ಪಣಜಿ: ಒಂದು ವಾರದಿಂದ (ನ. 20ರಿಂದ) ಇಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಭಾನುವಾರ ತೆರೆಬೀಳಲಿದೆ.

ಗೋವಾ ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ. ಚಿತ್ರೋತ್ಸವಕ್ಕೆ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗೆ ಆಯ್ಕೆಯಾದ ಚಿತ್ರಗಳ ನಿರ್ದೇಶಕರು ಮತ್ತು ನಟ, ನಟಿಯರಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ. ಕೇಂದ್ರದ ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಭಾಗವಹಿಸಲಿರುವರು. ಇರಾನ್ ದೇಶದ ಅಸ್ಗರ್ ಫರ್ಹಾದಿ ನಿರ್ದೇಶನದ ದಿ ಹೀರೊ ಚಿತ್ರದ ಪ್ರದರ್ಶನದೊಂದಿಗೆ ಚಿತ್ರೋತ್ಸವಕ್ಕೆ ತೆರೆ ಬೀಳಲಿದೆ.

ಅತ್ಯಾಚಾರ ಆರೋಪದಡಿ ಸೇನಾ ಸಿಬ್ಬಂದಿ ಬಂಧನ

ಮಥುರಾ (ಪಿಟಿಐ): 21 ವರ್ಷದ ಮಹಿಳೆಗೆ ಡ್ರಗ್ಸ್ ನೀಡಿ, ಆಕೆಯ ಮೇಲೆ ಅತ್ಯಾಚಾರವೆಸಗಿದ ಆರೋಪದಡಿ ಸೇನಾ ಸಿಬ್ಬಂದಿಯೊಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಸಂತ್ರಸ್ತೆ ಮತ್ತು ಆರೋಪಿ ತೇಜ್‌ವೀರ್‌ಗೆ ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿತ್ತು. ಆರೋಪಿಯನ್ನು ಬುಧವಾರ ಬಂಧಿಸಲಾಗಿದೆ' ಎಂದು ಅವರು ಹೇಳಿದರು.

'ಅವರಿಬ್ಬರು ನನಗೆ ಡ್ರಗ್ಸ್ ನೀಡಿದರು. ಬಳಿಕ ತೇಜ್‌ವೀರ್ ತನ್ನ ಮೇಲೆ ಅತ್ಯಾಚಾರವೆಸಗಿದರೆ, ದಿಗಂಬರ್ ಲೈಂಗಿಕ ಕಿರುಕುಳ ನೀಡಿದ. ನಂತರ ಅವರು ನನ್ನನ್ನು ಕೊಸಿ ಕಲಾನ್ ಪ್ರದೇಶದಲ್ಲಿ ಬಿಟ್ಟು ಹೋದರು' ಎಂದು ಸಂತ್ರಸ್ತೆ ತಿಳಿಸಿದ್ದಾರೆ.

'ದಿಗಂಬರ್‌ನನ್ನು ಕೊಟಾಬನ್‌ನಲ್ಲಿ ಶುಕ್ರವಾರ ಬಂಧಿಸಲಾಗಿದೆ. ಆತನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಇಬ್ಬರು ಆರೋಪಿಗಳು ಹರಿಯಾಣದ ಪಲ್ವಾಲ್‌ನ ಮನ್ಪುರ ಗ್ರಾಮದ ನಿವಾಸಿಗಳು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮಹಿಳೆ ಮೇಲೆ ಅತ್ಯಾಚಾರ, ಹತ್ಯೆ

ಮುಂಬೈ (ಪಿಟಿಐ): 20 ವರ್ಷದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹತ್ಯೆಗೈದಿರುವ ಘಟನೆ ಮುಂಬೈನ ಕುರ್ಲಾದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದರು.

'ಖಾಲಿಯಿದ್ದ 13 ಅಂತಸ್ತಿನ ವಸತಿ ಕಟ್ಟಡದ ತಾರಸಿಯಲ್ಲಿ ಮಹಿಳೆಯ ಕೊಳೆತ ಶವ ಗುರುವಾರ ಸಂಜೆ ಪತ್ತೆಯಾಗಿದೆ. ಕೆಲ ಯುವಕರು ವಿಡಿಯೊ ಶೂಟ್ ಮಾಡಲೆಂದು ತಾರಸಿಗೆ ಹೋಗಿದ್ದರು. ಈ ವೇಳೆ ಅವರಿಗೆ ಶವ ಪತ್ತೆಯಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ವಿನೋಬಾ ಭಾವೆ ನಗರ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿದ್ದು, ಹತ್ಯೆಗೂ ಮುನ್ನ ಆಕೆಯ ಮೇಲೆ ಅತ್ಯಾಚಾರವೆಸಗಿರುವುದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿದುಬಂದಿದೆ ಅವರು ಹೇಳಿದರು.

'ಈ ಬಗ್ಗೆ ತನಿಖೆ ನಡೆಸಲು ವಿಶೇಷ ತಂಡವನ್ನು ರಚಿಸಲಾಗಿದೆ. ಸಂತ್ರಸ್ತೆಯ ಗುರುತನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಉಪ ಪೊಲೀಸ್ ಆಯುಕ್ತರು ತಿಳಿಸಿದರು.

ಉತ್ತರಪ್ರದೇಶ: 3ನೇ ತರಗತಿ ಬಾಲಕಿಯ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಲಖನೌ: ಮೂರನೇ ತರಗತಿಯ ವಿದ್ಯಾರ್ಥಿನಿಯ ಮೇಲೆ ಶಾಲೆಯ ಶೌಚಾಲಯದಲ್ಲಿ ಸ್ವಚ್ಛತಾ ಕೆಲಸಗಾರ ಅತ್ಯಾಚಾರವೆಸಗಿರುವ ಘಟನೆ ಉತ್ತರ ಪ್ರದೇಶದ ವಾರಾಣಸಿ ನಗರದಲ್ಲಿ ನಡೆದಿದೆ.

ಆರೋಪಿಯನ್ನು ಅಜಯ್ ಕುಮಾರ್‌ಎಂದು ಗುರುತಿಸಲಾಗಿದ್ದು, ಮಾನಸ ನಗರದಲ್ಲಿರುವ ಆತನ ನಿವಾಸದಲ್ಲಿ ಶುಕ್ರವಾರ ರಾತ್ರಿ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶುಕ್ರವಾರ ಬಾಲಕಿಯು ಶೌಚಾಲಯಕ್ಕೆ ಹೋಗಿದ್ದಾಗ ಒಳನುಗ್ಗಿದ ಸ್ವಚ್ಛತಾ ಕೆಲಸಗಾರ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಈ ಬಗ್ಗೆ ಯಾರಿಗಾದರೂ ಹೇಳಿದರೆ ಹೊಡೆಯುವುದಾಗಿ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದರಿಂದ ಹೆದರಿದ ಬಾಲಕಿಯು ಘಟನೆಯ ಬಗ್ಗೆ ಶಿಕ್ಷಕರಿಗೆ ತಿಳಿಸಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಂತ್ರಸ್ತೆಯ ತಾಯಿ ಆಕೆಯ ಒಳ ಉಡುಪುಗಳಲ್ಲಿ ರಕ್ತದ ಕಲೆಗಳನ್ನು ಕಂಡು ಪ್ರಶ್ನಿಸಿದಾಗ ಬಾಲಕಿಯು ನಡೆದ ಘಟನೆಯನ್ನು ಸಂಪೂರ್ಣವಾಗಿ ವಿವರಿಸಿದ್ದಾಳೆ.

ಶಾಲಾ ಅಡಳಿತ ಮಂಡಳಿ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದು, ಪೊಲೀಸರಿಗೆ ತಿಳಿಸದಂತೆ ಮನವೊಲಿಸಿದರು. ಆದರೂ, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಸಂತ್ರಸ್ತೆಯ ಪೋಷಕರು ತಿಳಿಸಿದ್ದಾರೆ.

ಶಾಲಾ ಆಡಳಿತ ಮಂಡಳಿಯ ವಿರುದ್ಧ ಆಕ್ರೋಶಗೊಂಡ ಪೋಷಕರು ಅವರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಮತ್ತು ಆರೋಪಿಯನ್ನು ಶಿಕ್ಷಿಸುವಂತೆ ಪೊಲೀಸ್ ಠಾಣೆಯಲ್ಲಿ ಗಲಾಟೆ ನಡೆಸಿದರು. ಅವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಸಿಸಿಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಂಡಿದ್ದು, ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬರದ ನಾಡಿನಲಿ ಮಳೆಯ ಮಾಯೆ!

ಕೋಲಾರ ಸೀಮೆಯ ಜನ ಉಣ್ಣುವ ಪ್ರತೀ ತುತ್ತು ಪಾತಾಳಗಂಗೆಯ ಕೃಪೆ. ಇಲ್ಲಿ ಕಂಡಕಂಡಲ್ಲಿ ಕೆರೆಗಳಿದ್ದರೂ ಖಾಲಿ, ಖಾಲಿಯಾಗಿದ್ದವು. ಇಂತಹ ಬರದ ನಾಡಿನಲ್ಲಿ ಮಳೆಯ ಮಾಯೆ ಸೃಷ್ಟಿಸಿದ ಸಂಭ್ರಮ ಎಂತಹದ್ದು ಗೊತ್ತೆ?

ಎನ್‌. ಉದಯಕುಮಾರ್



ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಅಬ್ಲೂರು ಕೆರೆ ಕೋಡಿಬಿದ್ದ ನಯನ ಮನೋಹರ ನೋಟ ಚಿತ್ರ: ಡಿ.ಜಿ. ಮಲ್ಲಿಕಾರ್ಜುನ

ರಾಜ್ಯ ರಾಜಧಾನಿಗೆ ತಾಗಿಕೊಂಡಂತೇ ಇರುವ ಕೋಲಾರ ಸೀಮೆಯಲ್ಲಿ ಕಂಡಕಂಡಲ್ಲಿ ಕೆರೆಗಳನ್ನು ಕಾಣಬಹುದು. ಆದರೆ, ಬಹುಪಾಲು ಕೆರೆಗಳಲ್ಲಿ, ವರ್ಷದ ಹೆಚ್ಚಿನ ಅವಧಿಯಲ್ಲಿ ಮನುಷ್ಯರಿಗೆ ಇರಲಿ; ಪಕ್ಷಿಪ್ರಾಣಿಗಳಿಗೂ ಗುಟುಕು ನೀರು ಸಿಗುವುದು ಕಷ್ಟವಾಗಿತ್ತು. ಇಲ್ಲಿನ ಜನ ಉಣ್ಣುವ ಪ್ರತೀ ತುತ್ತು ಪಾತಾಳಗಂಗೆಯ ಕೃಪೆ. ಆಕೆ ಕರುಣೆ ತೋರಿದರೆ ಬೆಳೆ. ಮುನಿದರೆ ನೆಲ ಬರಡು. ಇನ್ನೇನು ನೀರನ್ನು ತಂದೇ ಬಿಟ್ಟಿತು ಎಂಬ ಆಸೆ ಹುಟ್ಟಿಸಿದ್ದ ಎತ್ತಿನಹೊಳೆ ಯೋಜನೆ ಸನಿಹಕ್ಕೂ ಸುಳಿಯಲಿಲ್ಲ. ಸಂಸ್ಕರಿಸಿದ ಚರಂಡಿ ನೀರಾದರೂ ಪರವಾಗಿಲ್ಲ, ಕೆ.ಸಿ. ವ್ಯಾಲಿ ಯೋಜನೆ ಹರಿಸಿದ ನೀರು ಕೆಲವಾದರೂ ಕೆರೆಗಳ ಪಾತ್ರ ತುಂಬಿ, ಅಂತರ್ಜಲದ ಮಟ್ಟ ಅಷ್ಟೋ ಇಷ್ಟೋ ಮೇಲೇರಲು ಕಾರಣವಾಗಿತ್ತು. ನದಿ ಆಸರೆ ಇಲ್ಲದ ನೆಲದಲ್ಲಿ ಮಳೆಹನಿಯೇ ಜೀವದಾಯಿ. ಆದರೆ, ಅದೇಕೋ ಹನಿ ಹನಿ ಸೇರುತ್ತಿರಲಿಲ್ಲ. ಹಳ್ಳಕೊಳ್ಳ ತುಂಬುತ್ತಿರಲಿಲ್ಲ. ನೀರಿನ ಕೊರತೆಯೇ ದೊಡ್ಡ ಕೊರಗಾಗಿ ಕಾಡುತ್ತಿತ್ತು. ಮನೋಬೇನೆಯಾಗಿ ಕೃಷಿಕರ ಒಡಲು ಸುಡುತ್ತಿತ್ತು.

ಇಂತಹ ಬರದ ನಾಡಲ್ಲಿ ಮಳೆಯ ಮಾಯೆ ಈಗ ಪುಳಕ ಮೂಡಿಸಿದೆ; ಕನಸಲ್ಲೂ ಕಂಡಿರದ ಜಲಸಮೃದ್ಧಿಯನ್ನು ಕಣ್ಣೆದುರು ಇರಿಸಿದೆ. ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲೆಗಳ ಬಹುಪಾಲು ಕೆರೆ, ಕುಂಟೆ, ಕಲ್ಯಾಣಿಗಳು ಭರ್ತಿಯಾಗಿವೆ. ಜಲಮೂಲಗಳು ಸಚೇತನಗೊಂಡಿವೆ. ಕೆರೆಗಳು ಪುನಃ ತುಂಬಬಹುದು ಎಂಬ ವಿಶ್ವಾಸವೇ ಇಲ್ಲಿನ ಜನರಲ್ಲಿ ಉಡುಗಿಹೋಗಿತ್ತು. ಅಂತಹವರಲ್ಲಿ ಪುನರ್ಭರ್ತಿಯ ಅನುಭೂತಿಯು ಖುಷಿ–ವಿಶ್ವಾಸ ಎರಡನ್ನೂ ಉಕ್ಕಿಸಿದೆ.

ಯಾವ ಪ್ರಭುತ್ವವೂ ಯಾವ ನಾಯಕನೂ ಮೂಡಿಸಲಾರದ ಭರವಸೆಯನ್ನು ಮಳೆಹನಿ ಮೂಡಿಸಿದೆ. ಈ ವರ್ಷಧಾರೆಯು ಮುಂದಿನ ಮೂರ್ನಾಲ್ಕು ವರ್ಷಗಳ ಭವಿಷ್ಯದ ಬಗೆಗೆ ಭರವಸೆ ತುಂಬಿದೆ. ಅದೆಂಥ ಖಚಿತ ಭರವಸೆಯೆಂದರೆ, ಅತಿವೃಷ್ಟಿಯಿಂದ ಈಗ ಆಗಿರುವ ಅಪಾರ ಬೆಳೆನಷ್ಟವೂ ಅದರ ಎದುರು ಯಃಕಶ್ಚಿತ್ ಅನ್ನಿಸುವ ಮಟ್ಟಿಗೆ. ಪುಟಿದೇಳಲು ರಟ್ಟೆಗೆ ಕಸುವು ತುಂಬುವಂಥ ಭರವಸೆ ಅದು. ಬೆಳೆನಷ್ಟದ ನೋವಿನಲ್ಲೂ ಕೃಷಿಕರ ಮುಖದಲ್ಲಿ ಮಂದಹಾಸ ಕಾಣಲು ಸಾಧ್ಯವಾಗಿದ್ದರೆ ಅದಕ್ಕೆ ಮುಂದಿನ ಹಂಗಾಮುಗಳಲ್ಲಿ ಬೆಳೆ ತೆಗೆಯಲು ಬೇಕಾದ ಜೀವದ್ರವ್ಯದ ಲಭ್ಯತೆಯ ಖಾತರಿಯೇ ಕಾರಣ. ಅಂತಹ ಖಾತರಿಯನ್ನು ಈ ಮಳೆ ತುಂಬಿದೆ.

ಕೋಲಾರ ಜಿಲ್ಲೆಯಲ್ಲಿ ಸುಮಾರು 2,500 ಕೆರೆಗಳಿವೆ. 900ಕ್ಕೂ ಹೆಚ್ಚು ಕಲ್ಯಾಣಿಗಳಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1,350ಕ್ಕೂ ಹೆಚ್ಚು ಕೆರೆಗಳಿವೆ. ಇವುಗಳಲ್ಲಿ ಬಹುಪಾಲು ತುಂಬಿವೆ. ಕೆಲವು ಕೆರೆಗಳು ಅರ್ಧ– ಮುಕ್ಕಾಲು ಪಾಲು ಭರ್ತಿಯಾಗಿವೆ. ಇಂತಹ ಜಲಸಮೃದ್ಧಿಯು ಮೂರು ದಶಕಗಳ ಬಳಿಕ ಕಾಣಸಿಕ್ಕಿದೆ ಎಂದು ಹಿರಿಯರು ನೆನಪುಗಳನ್ನು ಮೀಟುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಅತಿದೊಡ್ಡ ಕೆರೆ ಎನಿಸಿರುವ ಅಮಾನಿ ಗೋಪಾಲಕೃಷ್ಣ ಕೆರೆ ಮೈದುಂಬಿಕೊಂಡಿದೆ. ಶ್ರೀನಿವಾಸಸಾಗರವು ಜಲಸಿರಿಯಿಂದ ಕಂಗೊಳಿಸುತ್ತಿದೆ. ಪ್ರವಾಸಿತಾಣವಾಗಿ ಮಾರ್ಪಟ್ಟಿದೆ. ಇದರ ಸೊಬಗು ಕಣ್ತುಂಬಿಕೊಳ್ಳಲು ದೂರದ ಊರುಗಳಿಂದ ಜನ ಬರುತ್ತಿದ್ದಾರೆ. ಚಿತ್ರಾವತಿ ಜಲಾಶಯ, ಜಕ್ಕಲಮಡುಗು ಜಲಾಶಯ ಭೋರ್ಗರೆಯುತ್ತಿವೆ. ಉತ್ತರ ಪಿನಾಕಿನಿ ನದಿ ಸಹ ತುಂಬಿ ಹರಿಯುತ್ತಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ಹತ್ತು–ಇಪ್ಪತ್ತು ವರ್ಷಗಳಿಂದ ತುಂಬದೇ ಇದ್ದ ಹಲವಾರು ಕೆರೆಗಳು ಭರ್ತಿಯಾಗಿವೆ. ಊಲವಾಡಿ, ನಂದಿಗಾನಹಳ್ಳಿ, ಕೈವಾರ, ಮುಂಗಾನಹಳ್ಳಿ ದೊಡ್ಡಕೆರೆ ಮೊದಲಾದ ಪ್ರಮುಖ ಕೆರೆಗಳ ಕೋಡಿ ಹರಿದಿದೆ. ಗುಡಿಬಂಡೆಯ ಅಮಾನಿ ಕೆರೆಯ ಒಡಲೂ ಭರ್ತಿಯಾಗಿದೆ.

ಕೋಲಾರ ಜಿಲ್ಲೆಯಲ್ಲಿ ದೊಡ್ಡ ಕೆರೆಗಳೆನಿಸಿರುವ ಮುದುವಾಡಿ, ಕೋಲಾರಮ್ಮ, ಬೇತಮಂಗಲ, ಸೋಮಾಂಬುಧಿ ಅಗ್ರಹಾರ, ಮಾರ್ಕಂಡೇಯ, ರಾಮಸಾಗರ, ನಂಗಲಿ ಮೊದಲಾದ ಕೆರೆಗಳು ತುಂಬಿ ತುಳುಕತೊಡಗಿವೆ. ಜನವರಿಯಿಂದ ನವೆಂಬರ್ ಅಂತ್ಯದವರೆಗೆ ಜಿಲ್ಲೆಯ ವಾಡಿಕೆ ಮಳೆ ಪ್ರಮಾಣ 700 ಮಿ.ಮೀ. ಆದರೆ ಈ ವರ್ಷದ ಇದೇ ಅವಧಿಯಲ್ಲಿ 1,300 ಮಿ.ಮೀ. ಮಳೆ ಸುರಿದಿದೆ. ಮುಳ್ಳುಕಂಟಿಗಳಿಂದ ಮುಚ್ಚಿಹೋಗಿದ್ದ, ಒತ್ತುವರಿಗೆ ಒಳಗಾಗಿದ್ದ ಜಲಪಥಗಳು ಪುನಃ ತೆರೆದುಕೊಳ್ಳುವಂತೆ ಆಗಿರುವುದು ಈ ಪರಿ ಮಳೆ ಆಧಿಕ್ಯದಿಂದಲೇ! ಮಳೆಗೆ ಸಹಜವಾಗಿಯೇ ಅಂತಹದೊಂದು ಅಗಾಧ ಶಕ್ತಿ ಇದೆ.

ಕೋಲಾರ ಸೀಮೆಯಲ್ಲಿ ಕೆರೆಗಳ ಬಹುದೊಡ್ಡ ಸರಪಳಿಯೇ ಇದೆ. ಮೇಲಿನ ಕೆರೆ ತುಂಬಿ ಕೋಡಿ ಹರಿದರೆ ಅದರ ನೀರು ಕೆಳಗಿನ ಕೆರೆ ಸೇರಿಕೊಳ್ಳುವಂತಹ ಜಲಪಥ ಇದೆ. ಮಳೆನೀರು ಈ ಮೂಲಕ ವ್ಯವಸ್ಥಿತವಾಗಿ ಸಂಗ್ರಹ ಆಗುತ್ತಿತ್ತು. ಮಳೆ ಮುನಿಸಿಕೊಂಡಿತು. ಕೆರೆಗಳು ಹೂಳು ತುಂಬಿಕೊಂಡು ಪಾಳುಬಿದ್ದವು. ಜಲಾನಯನ ಪ್ರದೇಶವು ಇನ್ನಾರದೋ ಪಾಲಾಯಿತು. ಕೆರೆ ಸಂಬಂಧದ ಕೊಂಡಿಗಳು ಒಂದೊಂದೇ ಕಳಚಿಕೊಳ್ಳುತ್ತ ಹೋದವು. ನೀರಿನ ಅಭಾವ ತೀವ್ರವಾಗಿ ತಲೆದೋರಿತು. ಜೀವರಾಶಿಯ ದಾಹ ನೀಗುವ ಪರ್ಯಾಯವಾಗಿ ಕೊಳವೆಬಾವಿಗಳು ಉದಯಿಸಿದವು. ಈ ವಿದ್ಯಮಾನಕ್ಕೆ 'ಬಂಗಾರದ ಮನುಷ್ಯ' ಸಿನಿಮಾ ಪ್ರೇರಣೆಯಾಗಿ ಒದಗಿಬಂದಿದೆ ಎಂಬ ಅಂಬೋಣವೂ ಇದೆ.

ಭಾರತದಲ್ಲಿ ಬೇಸಾಯವು ಮಳೆಯೊಂದಿಗಿನ ಜೂಜು ಎಂಬ ಮಾತಿದೆ. ಆದರೆ, ಕೋಲಾರ ಭಾಗದಲ್ಲಿ ಬೇಸಾಯವು ಕೊಳವೆಬಾವಿಗಳೊಂದಿಗಿನ ಜೂಜು ಎಂಬಂತಾಯಿತು. ಬೋರ್‌ವೆಲ್‌ಗೆ ಹಣ ಸುರಿದು ಸುರಿದು ಬಡವಾದರು ಇಲ್ಲಿನ ಜನ. ಆಳಕ್ಕೆ ಇನ್ನೂ ಆಳಕ್ಕೆ ಅಂತ ಕೊರೆಯುತ್ತಲೇ ಇದ್ದಾರೆ. 1,000 ಅಡಿ, 1,200, 1,500 ಅಡಿ ಆಳಕ್ಕೆ ಹೋಗುತ್ತಲೇ ಇವೆ ಕೊಳವೆಬಾವಿಗಳು. ಆದರೆ, ನೀರಿನ ಪ್ರಮಾಣ ಮತ್ತು ಲಭ್ಯತೆಯ ಅವಧಿ ಬಗೆಗೆ ಯಾರಿಗೂ ಖಾತರಿ ಇಲ್ಲ. ಕೊಳವೆಬಾವಿಯಲ್ಲಿ ಇವೊತ್ತು ಇರುವ ನೀರು ನಾಳೆಗೆ ಏನೋ ಎಂಬ ಅನಿಶ್ಚಯ ಸ್ಥಿತಿಯಲ್ಲಿ ಓಲಾಡುವಂತಾಗಿದೆ ಕೃಷಿಬದುಕು. ಅಂತರ್ಜಲವನ್ನು ಇದೇ ಬಗೆಯಲ್ಲಿ ಹೀರುತ್ತಾ ಹೋದರೆ ಕೋಲಾರಮ್ಮನ ನಾಡು ಮತ್ತೊಂದು ಮರುಭೂಮಿ ಆಗಲಿದೆ ಎಂಬ ಎಚ್ಚರಿಕೆಯ ಮಾತು ಕೇಳುವಂತಾಗಿದ್ದು ಇದೇ ಕಾರಣದಿಂದ. ಪರಿಸರ ರಕ್ಷಣೆ ನೆಲೆಯಲ್ಲಿ ಇದು ವಿವೇಕವಾಣಿಯೇ. ಆದರೆ ಅಲ್ಲಿನ ಜನರಿಗೆ ಬದುಕಿನ ಪ್ರಶ್ನೆ, ಅಸ್ತಿತ್ವದ ಪ್ರಶ್ನೆ.

ಕೊಳವೆಬಾವಿಗಳಿಂದ ದೊರೆತ ಅಲ್ಪಸ್ವಲ್ಪ ನೀರನ್ನು ಮಿತವಾಗಿ ಬಳಸುವ ಕೌಶಲ ಕರಗತ ಮಾಡಿಕೊಂಡಿದ್ದಾರೆ ಇಲ್ಲಿನ ಜನ. ಬಳಸಿದ ಅಂತರ್ಜಲ ಪ್ರಮಾಣದಷ್ಟೇ ಹಾಲು ಉತ್ಪಾದಿಸಿದರು. ಆ ಹಾಲನ್ನು ಮನೆಮಕ್ಕಳಿಗೆ ಕೊಡದೆ ಡೇರಿಗೆ ಕೊಟ್ಟು ಹೊಟ್ಟೆಹೊರೆದರು. ತರಕಾರಿ ಬೆಳೆದು ನಗರ–ಪಟ್ಟಣಗಳಿಗೆ ಕಳುಹಿಸಿದರು. ನೀರಿನ ಕ್ಷಾಮವು ಕಣ್ಣೀರು ತರಿಸಿದರೂ ಎದೆಗುಂದಲಿಲ್ಲ. ಆತ್ಮವಿಶ್ವಾಸ ಕಳೆದುಕೊಳ್ಳಲಿಲ್ಲ. ಬೊಗಸೆ ನೀರಿನಲ್ಲೇ ಬಿತ್ತಿ, ಬೆಳೆದು, ಹುಟ್ಟಿದ ಆ ನೆಲಕ್ಕೇ ಅಂಟಿಕೊಂಡ ಇಲ್ಲಿನ ಜನರ ಛಲ ಮೆಚ್ಚುವಂತಹುದು. ಈಗ ಹರಿದಿರುವ ಜಲಧಾರೆಯಿಂದ ಜಲ ಮರುಪೂರಣ ಆಗಲಿದೆ. ಅಂತರ್ಜಲ ಮಟ್ಟ ಹೆಚ್ಚಲಿದೆ. ಕೊಳವೆಬಾವಿಗಳು ಮರುಪೂರಣ ಆಗಲಿವೆ. ಕೆರೆಗಳಲ್ಲಿ ಮೂರು ತಿಂಗಳಿಗೋ ಆರು ತಿಂಗಳಿಗೋ ನೀರು ಖಾಲಿಯಾದರೂ ಆ ಬಳಿಕ ಮೂರ್ನಾಲ್ಕು ವರ್ಷಗಳ ಅವಧಿಗಾದರೂ ಅಂತರ್ಜಲ ಕೈಹಿಡಿಯುತ್ತದೆ ಎಂಬ ವಿಶ್ವಾಸ ಮೂಡಿದೆ. ರೈತರ ಹುಮ್ಮಸ್ಸು ಇಮ್ಮಡಿಯಾಗಲು ಇದಕ್ಕಿಂತ ಬೇರೇನು ಬೇಕು?

ಚಿಕ್ಕಬಳ್ಳಾಪುರ ಜಿಲ್ಲೆಯ 200ಕ್ಕೂ ಹೆಚ್ಚು ಕೆರೆಗಳಲ್ಲಿ ಮೀನು ಸಾಕಣೆ ಚಟುವಟಿಕೆ ನಡೆಯುತ್ತಿದೆ. ಈ ಹಿಂದೆ ವಾರ್ಷಿಕ 3 ಸಾವಿರದಿಂದ 4 ಸಾವಿರ ಟನ್ ಮೀನು ಉತ್ಪಾದನೆ ಆಗುತ್ತಿತ್ತು. ಮಳೆ ಚೆನ್ನಾಗಿ ಆಗಿರುವುದರಿಂದ ಈ ಸಲ ಈ ಪ್ರಮಾಣ 9 ಸಾವಿರ ಟನ್‌ಗೆ ಏರಬಹುದು ಎಂದು ಅಂದಾಜಿಸಲಾಗಿದೆ. ಮೀನು ಕೃಷಿಯು ಬಯಲುಸೀಮೆಗೂ ವಿಸ್ತರಿಸಿ, ಮತ್ತೊಂದು ಉಪಕಸುಬಾಗಿ ಪರಿಣಮಿಸಿರುವುದು ಆಶಾದಾಯಕ ಬೆಳವಣಿಗೆ.

ಮಳೆ, ಮಾರುಕಟ್ಟೆ ಧಾರಣೆ ಮತ್ತು ಕೊಳವೆಬಾವಿಗಳಲ್ಲಿ ನೀರಿನ ಲಭ್ಯತೆ ಈ ಮೂರೂ ಮೂಡಿಸಿದ್ದ ಅನಿಶ್ಚಿತತೆಗಳಿಗೆ ಎದೆಗೊಟ್ಟು ಹೇಗೋ ಬೇಸಾಯದ ಬಂಡಿ ಎಳೆಯುತ್ತಿದ್ದರು ರೈತರು. ಗ್ರಾಮಗಳಲ್ಲಿ ಕೆಲವೇ ಕೊಳವೆಬಾವಿಗಳು ಸಶಕ್ತವಾಗಿದ್ದರಿಂದ ಅದಕ್ಕೆ ಅನುಗುಣವಾಗಿ ಮಿತಪ್ರಮಾಣದಲ್ಲಿ ಬೇಸಾಯದ ಚಟುವಟಿಕೆಗಳು ನಡೆಯುತ್ತಿದ್ದವು. ಈಗ ಜಲಸಂಪನ್ಮೂಲ ಹೇರಳವಾಗಿದೆ. ಆದರೆ ದುಡಿಯುವ ಕೈಗಳ ತೀವ್ರ ಅಭಾವ ಎದುರಾಗಲಿದೆ ಎಂಬ ಆತಂಕದ ಮಾತು ಕೃಷಿ ವಲಯದಲ್ಲಿ ಈಗಾಗಲೇ ಕೇಳಿಬರುತ್ತಿದೆ. ಸಣ್ಣ ಹಿಡುವಳಿ ಹೊಂದಿರುವ ಕುಟುಂಬಗಳ ಕೆಲವು ಯುವಕರು ಬೇಸಾಯಕ್ಕೆ ನೀರಿಲ್ಲ ಎಂಬ ಕಾರಣಕ್ಕೇ ಉದ್ಯೋಗ ಅರಸಿ ನಗರ–ಪಟ್ಟಣಗಳಿಗೆ ವಲಸೆ ಹೋಗಿದ್ದರು. ಅವರಲ್ಲಿ ಕೆಲವರಾದರೂ ಈಗ ಊರುಗಳತ್ತ ಮತ್ತೆ ಮುಖ ಮಾಡಬಹುದು. ಹಾಗಿದ್ದೂ ಕೃಷಿಕಾರ್ಮಿಕರ ಕೊರತೆ ಬಾಧಿಸುವುದರಲ್ಲಿ ಸಂದೇಹವೇ ಇಲ್ಲ.

ನಮ್ಮ ಜನಪದರ ಜೀವನ ದರ್ಶನಗಳಲ್ಲಿ ನೀರು ಪೂರ್ಣತ್ವದ ಪ್ರತೀಕ. ಈ ಜಲಸಮೃದ್ಧಿಯು ಜಲಪ್ರಜ್ಞೆಗೆ ನಾಂದಿಯಾಗಬೇಕು. ಕೆರೆಗಳ ವ್ಯವಸ್ಥಿತ ನಿರ್ವಹಣೆ, ಒತ್ತುವರಿ ತೆರವು, ಜಲಮೂಲಗಳ ಸಂರಕ್ಷಣೆ ಮತ್ತು ಆ ಮೂಲಕ ಮಳೆನೀರು ಸಂಗ್ರಹವು ವ್ಯವಸ್ಥಿತವಾಗಿ ನಡೆಯಲು ಸಾಧ್ಯವಾಗುವಂತಹ ಉಪಕ್ರಮಗಳನ್ನು ಕೈಗೊಳ್ಳಲು ಈ ವಿದ್ಯಮಾನವು ನಮ್ಮ ಅಧಿಕಾರಸ್ಥರಿಗೆ ಪ್ರೇರಣೆಯಾಗಬೇಕು. ಅಂತಹ ಕ್ರಮಗಳು ಕಾಲಮಿತಿಯಲ್ಲಿ ಪರಿಣಾಮಕಾರಿಯಾಗಿ ಜಾರಿಯಾದರೆ ಎಂತಹ ಬರದ ಬೀಡಲ್ಲೂ ನೀರಿನ ಅಭಾವ ನೀಗಬಹುದು.

ಕಾಡಿದ ಲೋಕಸುಂದರಿಯರು

ಸಿ.ರುದ್ರಪ್ಪ



'ಭಾರತ ಮತ್ತು ಭಾರತದ ಮಹಿಳೆಯರ ವರ್ಚಸ್ಸಿಗೆ ಮಸಿ ಬಳಿಯಲಾಗುತ್ತಿದೆ, ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಮೇಲಿನ ದಾಳಿಯಿದು, ಅಶ್ಲೀಲತೆ ಮತ್ತು ನಗ್ನತೆಯನ್ನು ಪ್ರದರ್ಶಿಸಲಾಗುತ್ತಿದೆ, ವೇಶ್ಯಾವಾಟಿಕೆ ಮತ್ತು ಮಾದಕದ್ರವ್ಯದ ದಂಧೆಯ ಅಂತರರಾಷ್ಟ್ರೀಯ ಗ್ಯಾಂಗುಗಳು ಭಾರತವನ್ನು ಪ್ರವೇಶಿಸುತ್ತವೆ, ಈ ದುಷ್ಟರು ಏಡ್ಸ್ ಹರಡಬಹುದು, ಅರೆಬೆತ್ತಲೆ ಅಥವಾ ತುಂಡುಡುಗೆಯ ವಿದೇಶಿ ಮಹಿಳೆಯರಿಂದಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಹುದು...'

1996ರಲ್ಲಿ ಬೆಂಗಳೂರಿನಲ್ಲಿ ವಿಶ್ವ ಸುಂದರಿ ಸ್ಪರ್ಧೆಯ ಆಯೋಜನೆ ವಿರುದ್ಧ ಹೈಕೋರ್ಟಿನಲ್ಲಿ ಮಹಿಳಾ ಜಾಗರಣ ಮಂಚ್ ಹೂಡಿದ್ದ ದಾವೆಯ ಪ್ರಮುಖ ಅಂಶಗಳಿವು.

25 ವರ್ಷಗಳ ಹಿಂದೆ ನವೆಂಬರ್ 23ರಂದು ವಿಶ್ವ ಸುಂದರಿ ಸ್ಪರ್ಧೆ ನಡೆಸಲು ಬೆಂಗಳೂರು ಆಯ್ಕೆಯಾದಾಗ ಅದು ಜಗತ್ತಿನ ಗಮನ ಸೆಳೆಯಿತು. ಆಗ ಎಚ್‌.ಡಿ. ದೇವೇಗೌಡರು ಪ್ರಧಾನಿಯಾಗಿದ್ದರು. ಅವರು ರಾಮಕೃಷ್ಣ ಹೆಗಡೆಯವರನ್ನು ಜನತಾ ದಳದಿಂದ ಉಚ್ಚಾಟನೆ ಮಾಡಿಸಿದ್ದರು. ಈ ಇಬ್ಬರು 'ಮದಗಜ'ಗಳ ಕಾದಾಟದಲ್ಲಿ ಸಿಲುಕಿ ಬೇರೆ ಯಾರಾದರೂ ಆಗಿದ್ದರೆ ನಜ್ಜುಗುಜ್ಜಾಗುತ್ತಿದ್ದರೇನೋ. ಆದರೆ, ಆಗ ಮುಖ್ಯಮಂತ್ರಿಯಾಗಿದ್ದ ಜೆ.ಎಚ್‌. ಪಟೇಲ್ ನಿರ್ಲಿಪ್ತರಾಗಿದ್ದರು. ಅವರು ಬೆಂಗಳೂರಿನಲ್ಲಿ ವಿಶ್ವ ಸುಂದರಿ ಸ್ಪರ್ಧೆಯ ಕಾರ್ಯಕ್ರಮ ಪ್ರಕಟವಾಗುತ್ತಿದ್ದಂತೆ ಪೊರೆ ಕಳಚಿದ ಹಾವಿನಂತೆ ನಿಚ್ಚಳವಾಗಿಬಿಟ್ಟರು. ರಾಜಕೀಯ ಜಂಜಾಟವನ್ನು ಮರೆತು ವಿಚಿತ್ರವಾದ ಲಹರಿಯಲ್ಲಿ ತೇಲಾಡತೊಡಗಿದರು.

ಎರಿಕ್ ಮೋರ್ಲೆ, ವಿಶ್ವ ಸುಂದರಿ ಸಂಘಟನೆಯ ಮುಖ್ಯಸ್ಥರಾಗಿದ್ದರು. ಸ್ಪರ್ಧೆಯನ್ನು ಆಯೋಜಿಸುವ ಹೊಣೆಯನ್ನು ಅಮಿತಾಬ್ ಬಚ್ಚನ್ ಕಾರ್ಪೊರೇಷನ್ ಲಿಮಿಟೆಡ್ (ಎಬಿಸಿಎಲ್) ವಹಿಸಿಕೊಂಡಿತ್ತು. ಗೋದ್ರೆಜ್ ಕಂಪನಿಯ ಮುಖ್ಯಸ್ಥ ಪರಮೇಶ್ವರ್ ಗೋದ್ರೆಜ್ ಪ್ರಾಯೋಜಕತ್ವದ ಹೊಣೆ ಹೊತ್ತುಕೊಂಡಿದ್ದರು. ಆದರೆ ಅವರೆಲ್ಲರಿಗಿಂತ ಹೆಚ್ಚಾಗಿ ಪಟೇಲರೇ ಸ್ಪರ್ಧೆಯ ವಕ್ತಾರರಂತೆ ಮಾತನಾಡತೊಡಗಿದರು.

ತೀವ್ರ ಪ್ರತಿಭಟನೆಯ ನಡುವೆಯೇ ಭ್ರಾಮಕ ಲೋಕವೊಂದನ್ನು ಸೃಷ್ಟಿಸಿ, ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆದ ವಿಶ್ವ ಸುಂದರಿ ಸ್ಪರ್ಧೆ ಸಂದುಹೋಗಿ ಇದೀಗ 25 ವರ್ಷ. ಮೊಗೆದಷ್ಟೂ ಮುಗಿಯದ ನೆನಪುಗಳ ಅಕ್ಷಯ ಪಾತ್ರೆ ಆ ಸ್ಪರ್ಧೆ. ಆಗ ಸೃಷ್ಟಿಯಾಗಿದ್ದ ರಂಗು ರಂಗಿನ ಲೋಕದ ಕುರಿತು ಒಂದು ರೋಚಕ ನೆನಪು...

ರೈತ ಸಂಘದ ಅಧ್ಯಕ್ಷ ಪ್ರೊ.ಎಂ.ಡಿ. ನಂಜುಂಡಸ್ವಾಮಿ, 'ಈ ಸ್ಪರ್ಧೆಯ ಹಿಂದೆ ಭಾರತವನ್ನು ಬಹುರಾಷ್ಟ್ರೀಯ ಕಂಪನಿಗಳ ಸೌಂದರ್ಯ ಸಾಧನಗಳ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ಹುನ್ನಾರವಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಸ್ಪರ್ಧೆಯ ವೇಳೆ ಸ್ಟೇಜಿಗೆ ಬೆಂಕಿ ಹಚ್ಚುವುದಾಗಿಯೂ ಬೆದರಿಕೆ ಹಾಕಿದ್ದರು. 'ಇದು ಭಾರತೀಯ ಸಂಸ್ಕೃತಿಯ ಮೇಲಿನ ದಾಳಿ' ಎಂದು ಹಿಂದೂಪರ ಸಂಘಟನೆಗಳು ಪ್ರತಿಭಟಿಸಿದ್ದವು.

ಮಹಿಳಾ ಜಾಗರಣ ಮಂಚ್ ಮುಖ್ಯಸ್ಥೆ ಕೆ.ಎನ್.ಶಶಿಕಲಾ ನೂರಾರು ಮಹಿಳೆಯರೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಆತ್ಮಾಹುತಿಯ ಬೆದರಿಕೆ ಹಾಕಿದ್ದರು. ಅಖಿಲ ಕರ್ನಾಟಕ ಯುವ ಪರಿಷತ್ತಿನ ಕಾರ್ಯಕರ್ತರು ಪಿಜ್ಜಾ ಹಟ್ ಮಳಿಗೆಗಳ ಮೇಲೆ ದಾಳಿ ಮಾಡಿದ್ದರು. ಎಬಿಸಿಎಲ್ ಮುಖ್ಯಸ್ಥ ಅಮಿತಾಬ್ ಬಚ್ಚನ್ ಬೆತ್ತಲು ಇರುವಂತೆ ಚಿತ್ರಿಸಿದ್ದ ಪೋಸ್ಟರ್‌ನೊಂದಿಗೆ ವಾಟಾಳ್ ನಾಗರಾಜ್ ಪ್ರತಿಭಟಿಸಿದ್ದರು.

ಕಾರ್ಯಕ್ರಮದ ವಿವರ ನೀಡಲು ಅಮಿತಾಬ್ ಬಚ್ಚನ್ ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದರು. ಪ್ರತಿಭಟನಾಕಾರರು, 'ಮರ್ಯಾದೆಗೇಡಿನ ವ್ಯಾಪಾರಿ ಕಾರ್ಯಕ್ರಮ'ದ ಪತ್ರಿಕಾಗೋಷ್ಠಿಗೆ ವಿಧಾನಸೌಧದಲ್ಲಿ ಅವಕಾಶ ನೀಡಿರುವುದನ್ನು ಖಂಡಿಸಿದ್ದರು. ಅಮಿತಾಬ್ ಬಚ್ಚನ್ ಈ ಟೀಕೆಗಳ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಆ ವೇಳೆಗಾಗಲೇ ದಿವಾಳಿಯ ಅಂಚಿಗೆ ಬಂದಿದ್ದ ತಮ್ಮ ಕಂಪನಿಯನ್ನು ಹೇಗಾದರೂ ಮಾಡಿ ಲಾಭದ ಹಾದಿಗೆ ತರಬೇಕಿತ್ತು. ಸಾಮಾನ್ಯವಾದ ದೊಗಳೆ ಪ್ಯಾಂಟು, ಶರ್ಟಿನಲ್ಲಿ ತಲೆ ಮೇಲೆ ಒಂದು ಕ್ಯಾಪ್‌ನೊಂದಿಗೆ ಒಬ್ಬ ಮೇಸ್ತ್ರಿಯಂತೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಬೃಹತ್ ವೇದಿಕೆ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಪೊಲೀಸರ ಬಂದೋಬಸ್ತ್ ನಡುವೆಯೂ ಅಭಿಮಾನಿಗಳು ಅವರಿಗೆ ಮುಗಿಬೀಳತೊಡಗಿದ್ದರು. ಆಗ ಮೊಬೈಲ್ ಫೋನ್ ಸೆಲ್ಫಿಗಳು ಇರಲಿಲ್ಲ. ಕೆಲವು ಫೋಟೋಗ್ರಾಫರ್‌ಗಳು ಅಮಿತಾಬ್ ಅವರೊಂದಿಗೆ ಅಭಿಮಾನಿಗಳ ಫೋಟೋ ತೆಗೆದು ಕೊಡಲು ಆರಂಭಿಸಿದ್ದರು.

ಈ ನಡುವೆ ಪ್ರತಿಭಟನಾಕಾರರಿಗೆ 'ಸ್ಪರ್ಧೆಯ ಸಂದರ್ಭದಲ್ಲಿ ಅತಿಗಣ್ಯ ವ್ಯಕ್ತಿಗಳಿಗೆ ವಿದೇಶಿ ಮದ್ಯದ ಹೊಳೆಯೇ ಹರಿಯಲಿದೆ' ಎಂಬ ಸುಳಿವು ಸಿಕ್ಕಿತ್ತು. ಅದಕ್ಕೆ ಅವಕಾಶ ನೀಡಬಾರದು ಎಂದು ಪಟ್ಟು ಹಿಡಿದರು.

12ನೇ ಪುಟಕ್ಕೆ...

ಮೇವುಂಡಿ ಮೇವು!

ರವೀಂದ್ರ ಭಟ್ಟ



ಜೀವನದಲ್ಲಿ ಹದವಾಗಿ ಬೆಂದರೆ ಬೇಂದ್ರೆಯಾಗುತ್ತಾರೆ ಎಂಬ ಮಾತಿದೆ. ಅದೇ ರೀತಿ ಮೇವುಂಡಿಯಾಗಲು ಯಾವ ಯಾವ ಮೇವು ಉಣ್ಣ ಬೇಕು? ಹೀಗಂತ ಜಯತೀರ್ಥ ಮೇವುಂಡಿ ಅವರನ್ನು ಕೇಳಿದರೆ ಅವರು ಮೇವಿನ ಪಟ್ಟಿಯನ್ನೇ ಕೊಡುತ್ತಾರೆ. ಅಮ್ಮನ ಆಶೀರ್ವಾದ ಎಂಬ ಮೇವು, ಗುರುಗಳ ಹಾರೈಕೆಯ ಮೇವು, ಎಲ್ಲಕ್ಕಿಂತ ಹೆಚ್ಚಾಗಿ ಭಗವಂತನ ಕೃಪೆಯ ಮೇವು ಸೇರಿ ಈ ಮೇವುಂಡಿಯಾಗಿದೆ ಎಂದು ಹೇಳುತ್ತಾರೆ.

ಸಪ್ತಕ ಸಂಸ್ಥೆಯ ಕಾರ್ಯಕ್ರಮದಲ್ಲಿ ಪ್ರವೀಣ್ ಗೋಡ್ಖಿಂಡಿ ಅವರ ಜೊತೆ ಜುಗಲ್ಬಂದಿ ನಡೆಸಲು ಬೆಂಗಳೂರಿಗೆ ಬಂದಿದ್ದ ಜಯತೀರ್ಥ ಮೇವುಂಡಿ ಹೀಗೆಯೇ ಒಂದಿಷ್ಟು ಹೊತ್ತು ಹರಟೆಗೆ ಸಿಕ್ಕಿದ್ದರು. ಸಂಗೀತದ ಜೊತೆಗೆ ಜೀವನದ ಹುಲುಸಾದ ಮೇವನ್ನೂ ಮೆಲುಕು ಹಾಕಿದರು.

'ಅಮ್ಮ ಯಾವಾಗಲೂ ಹೇಳೋರು. ನೀನು ಎಷ್ಟೇ ಸಾಧನೆ ಮಾಡು, ದುಡ್ಡು ಮಾಡು, ಹೆಸರು ಮಾಡು. ಆದರೆ ಯಾವುದೇ ಕಾಲಕ್ಕೂ, ಯಾವುದೇ ಕಾರಣಕ್ಕೂ ಭಗವಂತನ ಕೈ ಬಿಡಬೇಡ. ನೀನು ಎಷ್ಟೇ ಉತ್ತುಂಗಕ್ಕೆ ಬೆಳೆದರೂ ಅದು ದೇವರು ಕೊಟ್ಟಿದ್ದು ಎಂಬ ಭಾವನೆ ಇರಬೇಕು. ಸಂಗೀತ ಆದರೂ ಅಷ್ಟೆ, ಬೇರೆ ಏನೇ ಆದರೂ ಅಷ್ಟೆ, ಅದನ್ನು ಭಗವಂತನಿಗೇ ಸಮರ್ಪಣೆ ಮಾಡಬೇಕು'

ಇದು ಅಮ್ಮ ಹಾಕಿದ ಮೇವು. ಅದನ್ನು ಮೆಲ್ಲುತ್ತಾ ಇದ್ದೇನೆ. ನನ್ನ ಸಂಗೀತವೆಲ್ಲಾ ಭಗವಂತನಿಗೇ ಸಮರ್ಪಣೆ. ಅಮ್ಮನಿಂದ ಬಳುವಳಿಯಾಗಿ ಇನ್ನೊಂದಿಷ್ಟು ಬಂದಿದೆ. ಅದು ರಾಮ ರಕ್ಷಾ ಸ್ತೋತ್ರ, ವಿಷ್ಣು ಸಹಸ್ರನಾಮ. ಮತ್ತೊಂದಿಷ್ಟು ಮಂತ್ರಗಳು. ಇವೆಲ್ಲಾ ಧ್ವನಿಗೆ ಸಂಬಂಧಿಸಿದವೇ ಆಗಿವೆ. ಸಂಕಷ್ಟದ ಸಮಯದಲ್ಲಿ ಈ ಮೇವುಗಳನ್ನೇ ಬಳಸಿದ್ದೇನೆ. ಅವು ನನ್ನನ್ನು ಗೆಲ್ಲಿಸಿವೆ.

ಇದರಲ್ಲಿ ಕೊಂಚವೂ ಅಪನಂಬಿಕೆ ಅವರಿಗೆ ಇಲ್ಲ. ದೇವರು ಕೊಟ್ಟಿದ್ದು. ದೇವರಿಗೇ ಸಮರ್ಪಿಸುತ್ತೇನೆ ಎಂದೇ ಅವರು ಹಾಡುತ್ತಾರೆ. ತಾವು ಈ ಭಾವನೆಯಲ್ಲಿ ಹಾಡುವುದರಿಂದ ಅದರ ತರಂಗ ಕೇಳುಗರಿಗೂ ತಲುಪುತ್ತದೆ ಎಂದು ಅವರು ಹೇಳುತ್ತಾರೆ.

11ನೇ ಪುಟಕ್ಕೆ...

ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಪೊರಕೆಗಳ ಮೋಹಕ ಲೋಕ

ಮನೆ ಕಸ ಗುಡಿಸಿ ಮೂಲೆಯಲ್ಲಿ ಕೂರುವ ಪೊರಕೆಗಳದ್ದು ಎಂಥಾ ಅದ್ಭುತ ಲೋಕ, ಅದರ ಸುತ್ತಾ ಎಷ್ಟೆಲ್ಲಾ ನಂಬಿಕೆಗಳು, ನಿಷೇಧಗಳು, ಚರಿತ್ರೆ, ಪುರಾಣಗಳು. ಇಂಥ ಪೊರಕೆಗಳ ಲೋಕಕ್ಕೊಂದು ದೇವತೆಯೂ ಇದ್ದಾಳೆ, ಜೋಧಪುರದಲ್ಲೊಂದು ಮ್ಯೂಸಿಯಂ ಕೂಡಾ ಇದೆ.





ಹೆಣೆದಿರುವ ಹಾರದಂತಿದೆ ಅಸ್ಸಾಂ ಪೊರಕೆಯ ಹಿಡಿ

ಚಿತ್ರಗಳು: ಮಲ್ಲಿಕಾರ್ಜುನ ಹೊಸಪಾಳ್ಯ, ಸೌಮಿಕ್

ಮಲ್ಲಿಕಾರ್ಜುನ ಹೊಸಪಾಳ್ಯ

ಅಸ್ಸಾಮಿನ ಫಲ್ಬರಿ ಹಳ್ಳಿಯ ಬುಡಕಟ್ಟು ಜನಾಂಗದ ಮನೆಯೊಂದರಲ್ಲಿ ಒಂದು ವಿಶಿಷ್ಟ ವಸ್ತು ನೋಡಿದೆವು. ಅತ್ಯಂತ ಕಲಾತ್ಮಕ, ಮೋಹಕ ಹಾಗೂ ಬೆರಗು ಹುಟ್ಟಿಸುವಂತಹ ವಸ್ತು ಅದು. ಅದೇನೆಂದು ಕುತೂಹಲದಿಂದ ಕೇಳಿದರೆ, ಅವರು ತೀರಾ ನಿರ್ಲಕ್ಷ್ಯದಿಂದ 'ಪೊರಕೆ' ಎಂದರು. ಎಂಟು ಜನರಿದ್ದ ನಮ್ಮೆಲ್ಲರ ಬಾಯಿಂದ ಒಂದೇ ಸಲ 'ಪೊರಕೇನಾ' ಎಂಬ ಉದ್ಗಾರ ಹೊರಬಿತ್ತು.

ನಮ್ಮ ಅನುಮಾನವನ್ನು ಪರಿಹರಿಸಲು ಹೆಣ್ಣುಮಗಳೊಬ್ಬಳು ಅಂಗಳ ಗುಡಿಸಿ ತೋರಿಸಿದಳು. ಹೌದು ಅದು ಪೊರಕೆಯೇ.

ಆದರೆ, ಅದರ ಹಿಡಿಕೆ, ಅದನ್ನು ಕಲಾತ್ಮಕವಾಗಿ ಹೆಣೆದಿರುವ ರೀತಿ ಬೆರಗುಗೊಳಿಸುವಂತಿತ್ತು. ಮೊಳೆಗೆ ಸಿಗಿಸಲು ಹಿಡಿಕೆಗೆ ಒಂದು ದಾರ, ನವಿಲು ಗರಿಯಂತೆ ಬಿಚ್ಚಿಕೊಂಡ ಮುಂಭಾಗ ನೋಡಲು ಸೊಗಸಾಗಿತ್ತು. ನಿಜಕ್ಕೂ ಅದೊಂದು ಆ್ಯಂಟಿಕ್ ಪೀಸ್. ನಮ್ಮ ಗುಂಪಿನವರೆಲ್ಲಾ ಅದರೊಟ್ಟಿಗೆ ಫೋಟೊ ತೆಗೆಸಿಕೊಂಡೆವು. ಪೊರಕೆಯೇ ರೂಪದರ್ಶಿ. ಅಲ್ಲಿನ ಕಾಡುಗಳಲ್ಲಿ ಸಿಗುವ ಹುಲ್ಲಿನಿಂದ ಹೆಣೆಯುತ್ತಾರಂತೆ ಅದನ್ನು.

ಆ ಕಲಾತ್ಮಕ ಪೊರಕೆಯನ್ನು ನೋಡಿ ಊರಿಗೆ ಬಂದ ಬಳಿಕ ಪೊರಕೆಗಳ ಲೋಕದತ್ತ ಗಮನಹರಿಯಿತು. ಹುಡುಕುತ್ತಾ ಹೋದಂತೆ ಸಾಧಾರಣ ದಿನಬಳಕೆ ವಸ್ತುವೆಂದುಕೊಂಡಿದ್ದ ಅನಿಸಿಕೆಯೆಲ್ಲಾ ತಲೆಕೆಳಗು. ಅಷ್ಟೊಂದು ವೈವಿಧ್ಯ ಪೊರಕೆಗಳಲ್ಲಿ.

ಎಲ್ಲರ ನಿತ್ಯದ ಬದುಕು ಚಾಲೂ ಆಗುವುದೇ ಪೊರಕೆಗಳಿಂದ. ಅವು ಸ್ವಚ್ಛತೆಯ ಸಾಧನಗಳು. ಅವುಗಳಿಲ್ಲದ ಮನೆಯೇ ಇಲ್ಲ. ಪೊರಕೆಗಳಲ್ಲಿ ಅಚ್ಚರಿಯಾಗುವಷ್ಟು ವೈವಿಧ್ಯ. ಹಳ್ಳಿಗಳಲ್ಲಂತೂ ಮನೆ ಒಳಗೆ, ಹೊರಗೆ, ಕೊಟ್ಟಿಗೆಗೆ, ಹಟ್ಟಿಗೆ, ಬೀದಿಗೆ, ಕಣಕ್ಕೆ, ಕುರಿ ರೊಪ್ಪಕ್ಕೆ ಈ ರೀತಿ ಪ್ರತಿಯೊಂದು ಸ್ಥಳಕ್ಕೂ ಬೇರೆ ಬೇರೆ ಪೊರಕೆಗಳನ್ನಿಟ್ಟಿರುತ್ತಾರೆ. ನಗರಗಳಲ್ಲಿ ಇಷ್ಟು ವೈವಿಧ್ಯ ಇಲ್ಲದಿದ್ದರೂ ಮೂರ್‍ನಾಲ್ಕು ಬಗೆಯನ್ನಂತೂ ಕಾಣಬಹುದು.

ಪೊರಕೆಯಲ್ಲಷ್ಟೇ ಅಲ್ಲ, ಅವುಗಳ ಹೆಸರಲ್ಲೂ ವೈವಿಧ್ಯವಿದೆ. ಬರಲು, ಹಿಪ್ಪು, ಕಡ್ಡಿಪೊರಕೆ, ಕಸಬರಿಗೆ, ಸಿಂಧಿಬರಿಗೆ, ಹಿಡಿಸೂಡಿ, ಹಿಡಿ, ಹಿಡ್ಲು, ಕುಂಚಮಟ್ಟೆ ಹೀಗೆ ಪ್ರದೇಶವಾರು ಹೆಸರುಗಳಿವೆ.

ಗ್ರಾಮೀಣರು ಹಿಂದೆಲ್ಲಾ ಸ್ಥಳೀಯವಾಗಿ ಸಿಗುವ ಕಡ್ಡಿ, ಸೊಪ್ಪು, ಗರಿಗಳಿಂದಲೇ ಪೊರಕೆ ಮಾಡಿಕೊಳ್ಳುತ್ತಿದ್ದರು. ಬೇಸಿಗೆಯ ಬಿಡುವಿನ ವೇಳೆಯಲ್ಲಿ ವರ್ಷಕ್ಕಾಗುವಷ್ಟು ಪೊರಕೆ ಕಡ್ಡಿಗಳನ್ನು ಕುಯ್ದು ಕಟ್ಟುವುದು ಸರ್ವೇಸಾಮಾನ್ಯ. ಹೆಣ್ಣುಮಕ್ಕಳು ತಲೆಮೇಲೆ ಪೊರಕೆಗಳನ್ನು ಹೊತ್ತು ನಗರಗಳಲ್ಲಿ ಮಾರುತ್ತಿದ್ದ ದೃಶ್ಯ 10-15 ವರ್ಷಗಳ ಹಿಂದೆ ನೋಡಬಹುದಿತ್ತು. ಈಗ ಅಪರೂಪ.

ಎಂತೆಂಥಾ ಪೊರಕೆಗಳಿದ್ದವು ನೋಡಿ...

ಹಂಚಿಕಡ್ಡಿ ಪೊರಕೆ ಅತ್ಯಂತ ಜನಪ್ರಿಯ. ಬಯಲುಸೀಮೆಯ ಕಾಡು, ಹೊಲ, ಬದುಗಳಲ್ಲಿ ಬೆಳೆಯುವ ಹಂಚಿ ತೆಂಡೆಗಳ ಕಡ್ಡಿಗಳನ್ನು ಬೇಸಿಗೆಯಲ್ಲಿ ಕುಯ್ದು ಮಾಳಿಗೆ ಮೇಲೆ ಒಣಗಿಸಿ ತುದಿಯಲ್ಲಿನ ಊಗುಮುಳ್ಳನ್ನು ಉದುರಿಸಿ ಕಟ್ಟಿ ಎತ್ತಿಡುತ್ತಿದ್ದರು. ಮನೆ ಒಳಾಂಗಣ ಗುಡಿಸಲು ಹೇಳಿ ಮಾಡಿಸಿದ್ದು. ತೇವದ ನೆಲಕ್ಕೆ ಸೂಕ್ತವಲ್ಲ. ಇದರ ಕೆಲಸ ಕಸ ತೆಗೆಯಲಿಕ್ಕೆ ಸೀಮಿತವಲ್ಲ. ಹಬ್ಬಗಳಲ್ಲಿ ಮಾವಿನ ತೋರಣ ಕಟ್ಟಲು ಇದರ ಕಡ್ಡಿಗಳೇ ಆಗಬೇಕು. ಮಕ್ಕಳಿಗೆ ದೃಷ್ಟಿಯಾದಾಗ, ಹೊಟ್ಟೆನೋವು ಬಂದಾಗ ಹಂಚಿ ಪೊರಕೆ ಕಡ್ಡಿಗಳಿಂದ ನೀವಳಿಸಿ ಸುಡುತ್ತಿದ್ದರು.

ಇಡುಗನ ಬರಲನ್ನು ಈಚಲು ಗಿಡದ ಗರಿಗಳಿಂದ ಕಟ್ಟುತ್ತಾರೆ. ನುಣುಪಾದ ನೆಲ ಗುಡಿಸಲು, ಗೋಡೆಗೆ ಸುಣ್ಣ ಹೊಡೆಯಲು ಹೆಚ್ಚಾಗಿ ಸೂಕ್ತ. ಅಂಗರು ಅಥವಾ ಬಂದರೆ ಪೊರಕೆ ದನಗಾಹಿಗಳ ಅಚ್ಚುಮೆಚ್ಚು. ಕುರಿ, ಮೇಕೆಗಳ ರೊಪ್ಪ ಗುಡಿಸಲು ಇದೇ ಆಗಬೇಕು. ತುಂಬಾ ದಿವಸ ಬಾಳಿಕೆ ಬರುತ್ತದೆ. ಪೊದೆಯ ರೀತಿ ಕಾಡು, ಬಯಲುಗಳಲ್ಲಿ ಬೆಳೆಯುವ ಬಂದರೆ ಗಿಡದ ಮೊಳದುದ್ದದ ಕಡ್ಡಿಗಳನ್ನು ತಂದು ಬುಡದ ಎಲೆಗಳನ್ನು ಕಿತ್ತು, ಬಿಗಿಯಾಗಿ ದಾರ ಕಟ್ಟಿ ಭಾರ ಹೇರುತ್ತಾರೆ. ಭಾರಕ್ಕೆ ಇಸ್ತ್ರಿ ಮಾಡಿದಂತೆ ನಿರ್ದಿಷ್ಟ ಆಕಾರ ಪಡೆಯುತ್ತವೆ ಪೊರಕೆಗಳು. ಹಂಚಿ ಪೊರಕೆಯಂತೆ ನೇರ ಇರುವುದಿಲ್ಲ. ಮುಂಭಾಗ ಅಗಲವಾಗಿರುತ್ತದೆ.

ಕೊಟ್ಟಿಗೆ, ಬೀದಿ ಹಾಗೂ ಕಣ ಗುಡಿಸಲು ಬಳಕೆಯಾಗುವುದು ಸೀರೆಕಡ್ಡಿ ಪೊರಕೆ. ರಸ್ತೆ ಬದಿ, ಹೊಲದ ಬದುಗಳಲ್ಲಿ ಬೆಳೆಯುವ ಗಿಡದಿಂದ ಸಿದ್ಧವಾದ ಪೊರಕೆ ಇದು. ಬಿದಿರು ಪೊರಕೆಯೂ ಹೆಚ್ಚಾಗಿ ಕೊಟ್ಟಿಗೆ ಗುಡಿಸಲು ಬಳಕೆಯಾಗುತ್ತದೆ. ಆದಿವಾಸಿಗಳಿಂದ ಹೆಚ್ಚು ಬಳಕೆಯಾಗುತ್ತದೆ. ಉತ್ತರ ಕರ್ನಾಟಕದಲ್ಲಿ ತೊಗರಿ ಕಡ್ಡಿ ಪೊರಕೆಗಳನ್ನು ಈ ಉದ್ದೇಶಕ್ಕೆ ಹೆಚ್ಚು ಬಳಸುತ್ತಾರೆ.

ಹಿಂದೆ ರಾಗಿ ಕಣ ಮಾಡುವಾಗ ಉತ್ತರಾಣಿ ಗಿಡದ ಕಡ್ಡಿಗಳಿಂದ ಮಾಡಿದ ಪೊರಕೆ ವ್ಯಾಪಕ ಬಳಕೆಯಲ್ಲಿತ್ತು. ಕಾಂಡದಲ್ಲಿ ಕೊಂಕಿಯಂತಹ ಮುಳ್ಳು ಹೊಂದಿರುವ ಉತ್ತರಾಣಿ ಪೊರಕೆಗಳು ರಾಗಿಯ ರಾಶಿ ತೂರುವಾಗ ಬರುವ ಹೊಟ್ಟನ್ನು ಗುಡಿಸಲು ಬಳಸಲ್ಪಡುತ್ತಿದ್ದವು. ರಾಗಿ ಕಣದಲ್ಲಿ ಇದನ್ನು ಪೂಜ್ಯಭಾವನೆಯಿಂದ ಕಾಣಲಾಗುತ್ತಿತ್ತು.

ತೆಂಗಿನ ಕಡ್ಡಿ ಪೊರಕೆಗಳ ಬಳಕೆ 90ರ ದಶಕದ ನಂತರ ಹೆಚ್ಚುತ್ತಾ ಹೋಯಿತು. ತೇವದ ನೆಲಕ್ಕೆ ಹೇಳಿ ಮಾಡಿಸಿದ್ದು. ತಿಪಟೂರು, ಅರಸೀಕೆರೆ, ಹಾಸನ, ತುಮಕೂರು, ಚಿತ್ರದುರ್ಗ ಭಾಗಗಳಲ್ಲಿ ಈಗ ಇದೊಂದು ದೊಡ್ಡ ಉದ್ಯಮ. ಸಾವಿರಾರು ಕುಟುಂಬಗಳಿಗೆ, ಹೆಣ್ಣುಮಕ್ಕಳಿಗೆ ಆದಾಯ ತರುವ ಮಾರ್ಗ. ಇಲ್ಲಿಂದ ಉತ್ತರ ಭಾರತಕ್ಕೆ ಟನ್ನುಗಟ್ಟಲೆ ತೆಂಗಿನ ಪೊರಕೆಗಳು ರವಾನೆಯಾಗುತ್ತವೆ.

ತೆಂಗಿನ ಕಡ್ಡಿ ಪೊರಕೆ ನಮ್ಮಲ್ಲಿ ಬಳಕೆಯಲ್ಲಿರುವ ಪೊರಕೆಗಳಲ್ಲೇ ಅತ್ಯಂತ ಬಿರುಸಾದುದು. ಹೆಚ್ಚು ಬಾಳಿಕೆಯೂ ಬರುತ್ತದೆ. ಉಳಿದವು ಮೃದು, ಬೇಗ ಸವೆಯುತ್ತವೆ. ಅಲ್ಲದೆ ಬೀದಿಯ ಕಸ ಗುಡಿಸಲು ತೆಂಗಿನ ಕಡ್ಡಿಗಿಂತ ಮಿಗಿಲಾದ ಪೊರಕೆ ಮತ್ತೊಂದಿಲ್ಲ. ಇವು ಉದ್ದವಿದ್ದು ಸ್ವಲ್ಪ ಬಾಗಿ ಗುಡಿಸಲು ಅನುಕೂಲಕರ. ಮುನಿಸಿಪಾಲಿಟಿ ಕಸ ಗುಡಿಸುವ ಸಿಬ್ಬಂದಿ ಉದ್ದನೆಯ ಬಿದಿರುಗಳಕ್ಕೆ ಈ ಪೊರಕೆಯನ್ನು ಹಿಮ್ಮುಖವಾಗಿ (ಬುಡದ ಭಾಗದಲ್ಲಿ ಗುಡಿಸುವಂತೆ) ಕಟ್ಟಿಕೊಂಡು ಬಳಸುತ್ತಾರೆ. ಏಕೆಂದರೆ ಕಡ್ಡಿಗಳ ತುದಿ ಭಾಗಕ್ಕೆ ಹೋಲಿಸಿದರೆ ಬುಡದ ಭಾಗವು ದಪ್ಪ ಮತ್ತು ಗಡುಸಾಗಿರುತ್ತದೆ.

ಹಿಂದೆ ಹೊಡೆಯುವ ಅಸ್ತ್ರಗಳಾಗಿಯೂ ಪೊರಕೆಗಳು ಬಳಕೆಯಾಗುತ್ತಿದ್ದವು. ಎಷ್ಟೋ ಸಿನಿಮಾಗಳಲ್ಲಿ ಅಮ್ಮ ಮಗಳಿಗೆ ಪೊರಕೆಯಿಂದ ಬಾರಿಸುವ ದೃಶ್ಯವನ್ನು ನೋಡಿದ್ದೇವೆ. ನಮ್ಮ ರಾಜ್ಯದಲ್ಲಿ ಪೊರಕೆ ವೈವಿಧ್ಯ ಇದೆಯಾದರೂ ಅಂತಹ ಕಲಾತ್ಮಕತೆ ಇಲ್ಲ. ಆದರೆ ಉತ್ತರ ಭಾರತ ಮತ್ತು ಈಶಾನ್ಯ ಭಾರತದಲ್ಲಿ ಇರುವ ಪೊರಕೆಗಳ ಸೊಬಗೇ ಬೇರೆ. ಹಿಡಿಕೆಗಳಿಗೆ ಬಗೆಬಗೆಯ ಅಲಂಕಾರ ಮಾಡುವುದು ಅವರ ವೈಶಿಷ್ಟ್ಯ.

ಅಲ್ಲಿನವರ ಪೊರಕೆ ಪ್ರೀತಿ ಎಷ್ಟಿದೆಯೆಂದರೆ ಜೋಧಪುರದಲ್ಲಿ ಪೊರಕೆ ಮ್ಯೂಸಿಯಮ್ಮನ್ನೇ ಮಾಡಿದ್ದಾರೆ. ಇಲ್ಲಿ 260ಕ್ಕೂ ಅಧಿಕ ಪೊರಕೆಗಳ ಸಂಗ್ರಹವಿದೆ. ಇಲ್ಲಿ ಪೊರಕೆ ಬಗ್ಗೆ ಕುತೂಹಲಕಾರಿ ಮಾಹಿತಿಗಳಿವೆ. ಉದಾಹರಣೆಗೆ ಬಂಜಾರ ಸಮುದಾಯವು ಪನ್ನಿ ಎಂಬ ಹುಲ್ಲಿನಿಂದ ಪೊರಕೆ ತಯಾರಿಸಿದರೆ, ಕೋಲಿ, ಭಗರಿಯಾ ಸಮುದಾಯಗಳಿಗೆ ಈಚಲು ಪೊರಕೆ ಶ್ರೇಷ್ಠ. ಅಲ್ಲದೆ ದಲಿತರು ಸಾಮಾನ್ಯವಾಗಿ ಬಿದಿರು ಪೊರಕೆಗಳನ್ನು ಬಳಸುತ್ತಾರೆ. ಹೀಗೆ...

ಪೊರಕೆ ವಿಚಾರದಲ್ಲಿ ಪಶ್ಚಿಮ ಬಂಗಾಳ ಉಳಿದೆಲ್ಲಾ ರಾಜ್ಯಗಳನ್ನೂ ಮೀರಿಸುತ್ತದೆ. ಏಕೆಂದರೆ ಇಲ್ಲಿ ಪೊರಕೆ ದೇವರೂ ಉಂಟು. ಹೆಸರು ಶೀತಲ ಮಾತಾ. ಸ್ವಚ್ಛತೆಯ ಅಧಿದೇವತೆಯೆಂದೇ ಪ್ರಸಿದ್ಧ. ಈಕೆಯ ಎಡಗೈಯಲ್ಲಿ ಪೊರಕೆ ಇರುತ್ತದೆ. ಸಿಡುಬು ನಿವಾರಿಸುತ್ತಾಳೆ ಎಂಬ ನಂಬಿಕೆ ಇದೆ. ಗೃಹಿಣಿಯರು ಪೊರಕೆಯನ್ನೇ ಹರಕೆ ರೂಪದಲ್ಲಿ ಅರ್ಪಿಸುತ್ತಾರೆ. ದೇವಾಲಯದ ಪ್ರಾಂಗಣದಲ್ಲಿ ಅಡ್ಡಾಡಿದರೆ ಚಿಕ್ಕ, ತುಂಡ, ಉದ್ದ, ದಪ್ಪ, ತರಹೇವಾರಿ ಹುಲ್ಲು, ಕಡ್ಡಿ, ಸೊಪ್ಪುಗಳಿಂದ ತಯಾರಿಸಿದ ಪೊರಕೆ ವೈವಿಧ್ಯವನ್ನೇ ಕಾಣಬಹುದು.

ರಾಜಸ್ಥಾನದ ನಾಗೌರ್ ಜಿಲ್ಲೆಯಲ್ಲಿಯೂ ಒಂದು ಪೊರಕೆ ದೇವತೆಯಿದೆ. ಬುಂಗ್ರಿ ಮಾತಾ ಎನ್ನುತ್ತಾರೆ.



ಬಂದರೆ ಪೊರಕೆ

ದೇಶದ ಬಹುತೇಕ ಜನಸಮುದಾಯ ಪೊರಕೆಯನ್ನು ಲಕ್ಷ್ಮಿ ಎಂದು ನಂಬುತ್ತಾರೆ.

ಈ ಪೊರಕೆ ಆಧಾರಿತ ಆಚರಣೆ, ನಂಬಿಕೆ, ಪೂಜನೀಯ ಭಾವಗಳು ನಮಗಷ್ಟೇ ಮೀಸಲಲ್ಲ. ಜಗತ್ತಿನಾದ್ಯಂತ ಕಾಣಬಹುದು. ಪ್ರಾಚೀನ ರೋಮ್‌ನಲ್ಲಿ ದೇವೇರಾ ಹೆಸರಿನ ದೇವತೆಯು ಶುದ್ಧೀಕರಣಕ್ಕೆ ಬಳಸುವ ಪೊರಕೆಗಳ ಪೋಷಕಿಯೆಂದೇ ಪ್ರಸಿದ್ಧ. ಚೀನಾದಲ್ಲಿ ಸಾವೋ ಚಿಂಗ್ ನಿಯಾಂಗ್ ನಿಯಾಂಗ್ ಪೊರಕೆಗಳ ದೇವತೆ.

ಇನ್ನು ಜನಪ್ರಿಯ ಹಾಲಿವುಡ್ ಸಿನಿಮಾ ಹ್ಯಾರಿ ಪಾಟರ್ ಸರಣಿಗಳಲ್ಲಿ ಬರುವ ಮಾಯಾ ಪೊರಕೆಯನ್ನು ಸಿನಿಪ್ರಿಯರು ಮರೆಯಲು ಸಾಧ್ಯವೇ? ನಮ್ಮ ದೇಶದಲ್ಲಿ ಆಮ್ ಆದ್ಮಿ ಪಕ್ಷದ ಗುರುತೇ ಪೊರಕೆ. ಉದ್ದದ ಪೊರಕೆ ಹಿಡಿದು ಗುಡಿಸುವಂತೆ ಪೋಸು ಕೊಡುವ ರಾಜಕಾರಿಣಿಗಳ ಫೋಟೊಗಳು ಆಗಾಗ ಪ್ರಕಟವಾಗುತ್ತಲೇ ಇರುತ್ತವೆ.

ಮನೆ ಕಸ ಗುಡಿಸಿ ಮೂಲೆಯಲ್ಲಿ ಕೂರುವ ಪೊರಕೆಗಳದ್ದು ಎಂಥಾ ಅದ್ಭುತ ಲೋಕ, ಅದರ ಸುತ್ತಾ ಎಷ್ಟೆಲ್ಲಾ ನಂಬಿಕೆಗಳು, ನಿಷೇಧಗಳು, ಚರಿತ್ರೆ, ಪುರಾಣಗಳು. ಇಷ್ಟೆಲ್ಲಾ ಇತಿಹಾಸವಿರುವ, ಹಿಂದೆ ಮನೆಮನೆಯಲ್ಲಿ ತಯಾರಾಗುತ್ತಿದ್ದ ಪೊರಕೆಗಳು ಕ್ರಮೇಣ ಕಂಪನಿಗಳ ಸರಕಾದವು. ಈಗಂತೂ ಇಡೀ ಭಾರತಕ್ಕೆ ಕೆಲವೇ ಕಂಪನಿಗಳ ಪೊರಕೆಗಳು ಸರಬರಾಜಾಗುತ್ತವೆ. ಯಾವುದೇ ಅಂಗಡಿ ಮುಂದೆ ನೋಡಿದರೂ ಇವನ್ನೇ ಮಾರಾಟಕ್ಕಿಟ್ಟಿರುತ್ತಾರೆ. ಇನ್ನು ತೇವದ ಜಾಗ, ಬಚ್ಚಲುಮನೆಗಳನ್ನು ಪ್ಲಾಸ್ಟಿಕ್ ಪೊರಕೆಗಳು ಆಕ್ರಮಿಸಿವೆ.



ಬಿದಿರಿನಿಂದ ಪೊರಕೆ ತಯಾರಿಸುತ್ತಿರುವ ಬುಡಕಟ್ಟು ಮಹಿಳೆ

ಮೇವುಂಡಿ ಮೇವು!

10ನೇ ಪುಟದಿಂದ...

ಅದಕ್ಕಾಗಿ ತಾವು ಸಮಯ ಸಿಕ್ಕಾಗಲೆಲ್ಲಾ ಶ್ರೀರಂಗಂ ಅಥವಾ ಮಂಜುಗುಣಿಗೆ ಹೋಗಿ ಹಾಡುತ್ತಾ ಕುಳಿತುಕೊಳ್ಳುವುದಾಗಿ ಹೇಳುತ್ತಾರೆ. ಅಲ್ಲಿ ವ್ಹಾ ವ್ಹಾ ಹೇಳುವವರಿಲ್ಲ. ಚಪ್ಪಾಳೆ ತಟ್ಟುವವರಿಲ್ಲ. ಆದರೆ ಅಲ್ಲಿ ಹಾಡುವ ಸುಖ ಬೇರೆಯದೇ ಲೆವಲ್ ಎಂಬುದು ಅವರ ನಂಬಿಕೆ.

'ಅಮ್ಮ ನನ್ನಲ್ಲಿ ಸಂಗೀತದ ಬೀಜ ಬಿತ್ತಿದರು. ನಂತರ ಗುರುಗಳಾದ ಅರ್ಜುನ್ ಸಾ ನಾಕೋಡ ಮತ್ತು ಶ್ರೀಪತಿ ಪಾಡಿಗಾರ ಕಲಿಸಿದರು. ಕಿರಾಣಾ ಘರಾಣ ಹೇಳಿಕೊಟ್ಟರು. ನಮ್ಮ ಗುರುಗಳಿಗೂ ಬೇರೇನೂ ಬೇಡಿಕೆ ಇರಲಿಲ್ಲ. ತಮ್ಮ ಸಂತತಿ ಮುಂದುವರಿಯಬೇಕು ಅಷ್ಟೆ. ನಮಗೂ ಅವಾಗ ಬೇರೆ ಏನೂ ತಿಳಿಯುತ್ತಿರಲಿಲ್ಲ. ಗುರುಗಳೂ ಹೇಳಿದಂಗೆ ಮಾಡುತ್ತಿದ್ದೆವು. ಇದು ಯಮನ್ ರಾಗ. ಎರಡು ತಾಸು ಪ್ರಾಕ್ಟೀಸ್ ಮಾಡು ಎಂದರೆ ಮಾಡುತ್ತಿದ್ದೆವು. ಇದು ಮಾಲಕಂಸ್ ಮೂರು ತಾಸು ಅಭ್ಯಾಸ ಮಾಡು ಎಂದರೆ ಮಾಡುತ್ತಿದ್ದೆವು. ಆಗ ನಮ್ಮ ತಲೆ ಇದ್ದಿದ್ದು ಒಂದೇ: ರಿಯಾಜ್ ರಿಯಾಜ್ ರಿಯಾಜ್ ಅಷ್ಟೆ.'

'ನಾನು ಗೋವಾ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದೆ. 1995ರಲ್ಲಿ ಒಂದು ದಿನ ಭೀಮಸೇನ ಜೋಶಿ ಅವರು ಕರೆ ಮಾಡಿದರು. ಪುಣೆಯ ಸವಾಯಿ ಗಂಧರ್ವ ಉತ್ಸವದಲ್ಲಿ ಹಾಡಬೇಕು ಎಂದು ಕೇಳಿಕೊಂಡರು. ನನಗೆ ಅದೇನು ಕನಸೊ ನನಸೋ ಗೊತ್ತಾಗಲಿಲ್ಲ. ಒಪ್ಪಿಕೊಂಡೆ. ಅಲ್ಲಿ ಹೋಗಿ ನೋಡಿದರೆ ಬೃಹತ್ ವೇದಿಕೆ. ಮುಂದೆ ಸಾವಿರಾರು ಪ್ರೇಕ್ಷಕರು. ಎಲ್ಲಕ್ಕಿಂತ ಮುಂದಿನ ಸಾಲಿನಲ್ಲಿಯೇ ಭೀಮಸೇನ ಜೋಶಿ ಕುಳಿತಿದ್ದರು. ನಾನು ನಡುಗಿಬಿಟ್ಟೆ. ಏನ್ ಅವರ ಶರೀರ, ಅವರ ಶಾರೀರ. ಏನ್ ಅವರ ವಿದ್ಯಾ. ಅದನ್ನು ನೆನೆದು ನನಗೆ ಸ್ವರವೇ ಹೊರಡಲಿಲ್ಲ. ನನ್ನ ಸ್ಥಿತಿ ಗಮನಿಸಿದ ಭೀಮಸೇನ ಜೋಶಿ ಅವರು ನನ್ನ ಬಳಿಗೆ ಬಂದು ತಂಬೂರ ಕೂಡಿಸಿಕೊಟ್ಟು 'ಹೆದರ ಬೇಡ. ವೇದಿಕೆಯಲ್ಲಿ ಕುಳಿತು ಹಾಡುವಾಗ ನಾನು ತಾನ್‌ಸೇನ್ ಅಪ್ಪ ಎಂದೇ ಹಾಡಬೇಕು' ಎಂದು ಹೇಳಿ ಹೋದರು. ಅವರ ಮಾತು ಕೇಳಿದ್ದೇ ಧೈರ್ಯ ಬಂತು. ಹಾಡಿದೆ. ಹಾಡುತ್ತಲೇ ಇದ್ದೆ. ಹಾಡುತ್ತಲೇ ಇದ್ದೇನೆ' ಎಂದು ಮೆಲುಕು ಹಾಕಿದರು.

'ಮುಂಬೈಯಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಲತಾ ಮಂಗೇಶ್ಕರ್ ಅವರ ಕಾರ್ಯದರ್ಶಿ ಫೋನ್ ಮಾಡಿ ಲತಾಜಿ ನಿಮ್ಮನ್ನು ಭೇಟಿ ಮಾಡಲು ಬಯಸಿದ್ದಾರೆ ಎಂದರು. ಲತಾಜಿ ಎಂದರೆ ನನ್ನ ಪಾಲಿಗೆ ಸಾಕ್ಷಾತ್ ಸರಸ್ವತಿ. ಅವರು ನನ್ನ ಭೇಟಿ ಮಾಡಲು ಬಯಸಿದ್ದಾರೆ ಎಂದರೆ ಅದು ದೇವತೆಯ ಸಾಕ್ಷಾತ್ಕಾರ ಎಂದು ಭಾವಿಸಿ ಹೋಗಿ ಭೇಟಿ ಮಾಡಿದೆ. 'ನನಗೆ ಕಿರಾಣಾ ಘರಾನ ಇಷ್ಟ. ಅಮೀರ್ ಖಾನ್ ಸಾಹೇಬರ ಹಾಡುಗಾರಿಕೆ ಕೇಳಿದ್ದೇನೆ. ಅವರ ಆಲಾಪ, ಪ್ರಶಾಂತ ಹಾಡುಗಾರಿಕೆ ಎಲ್ಲಾ ಇಷ್ಟ. ನಾನು ಅವರ ದೊಡ್ಡ ಫ್ಯಾನ್' ಎಂದು ಹೇಳಿದ ಲತಾಜಿ ತಕ್ಷಣವೇ 'ನೀವು ಶುದ್ಧ ಕಲ್ಯಾಣ್ ಹಾಡ್ತೀರಾ, ಅಮೀರ್ ಖಾನ್ ಬಂದೀಶ್ ಬರುತ್ತಾ ಹೇಳಿ ನೋಡೋಣ ಎಂದರು. ನಾನು ಹಾಡಿದೆ. ಅವರಿಗೆ ಇಷ್ಟವಾಯ್ತು. ಅವರ ಕಂಪನಿ ವತಿಯಿಂದಲೇ ರೆಕಾರ್ಡ್ ಮಾಡಿ ಬಿಡುಗಡೆ ಮಾಡಿದರು' ಎಂದು ಹೇಳುವಾಗ ಇಂತಹ ಮೇವು ಎಷ್ಟು ಜನರಿಗೆ ಸಿಗುತ್ತದೆ ಎಂಬ ಭಾವ ಅವರ ಮೊಗದಲ್ಲಿ.

'ನನಗೆ ಯಂಗ್ ಮೆಸ್ಟ್ರೋ ಪ್ರಶಸ್ತಿ ಬಂದಿತ್ತು. ದೆಹಲಿ ಅಶೋಕಾ ಮೈದಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ. ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರೇ ಪ್ರಶಸ್ತಿ ನೀಡುವವರು. ನಾನು ಅವರ ಮುಂದೆ ಹೋಗಿ ನಿಂತೆ. ಅವರು ತುಂಬಾ ಆತ್ಮೀಯವಾಗಿ ಬರಮಾಡಿಕೊಂಡರು. ನಿನಗೆ ಯಾವ ರಾಗ ಇಷ್ಟ ಎಂದು ಕೇಳಿದರು. ನಾನು ಶುದ್ಧ ಕಲ್ಯಾಣ್, ದರ್ಬಾರಿ ಕಾನಡಾ, ಮಾಲಕಂಸ್ ಎಂದೆ. ಬೆನ್ನು ತಟ್ಟಿದರು. ನನ್ನ ಜೊತೆ ಅವರು ನಡೆದುಕೊಂಡ ರೀತಿಯನ್ನು ನೋಡಿದಾಗ ಅವರು ರಾಷ್ಟ್ರಪತಿ ಅಂತ ಅನ್ನಿಸಲೇ ಇಲ್ಲ. ಅವರೇ ಅಷ್ಟು ಸರಳ ಇರುವಾಗ ನಾನು ಇನ್ನೂ ಸರಳವಾಗಿರಬೇಕು ಎಂದುಕೊಂಡೆ' ಎನ್ನುತ್ತಾ ಕುರ್ಚಿಯಲ್ಲಿ ಇನ್ನಷ್ಟು ಸರಿದು ಕುಳಿತರು.

'ಹೀಗೆ ದೊಡ್ಡವರ ಆಶೀರ್ವಾದ ಸಿಗುತ್ತಲೇ ಹೋಯಿತು. ಪಂಡಿತ್ ರವಿಶಂಕರ್, ಝಾಕಿರ್ ಹುಸೇನ್ ಸೇರಿ ಬಹುತೇಕ ಎಲ್ಲ ದೊಡ್ಡ ಕಲಾವಿದರೂ ಹರಸಿದ್ದಾರೆ. ದೊಡ್ಡ ದೊಡ್ಡ ಕಲಾವಿದರನ್ನು ನೋಡಿ ಸಂಗೀತವನ್ನೂ ಕಲಿತಿದ್ದೇನೆ. ಬದುಕುವುದನ್ನು ಕಲಿತಿದ್ದೇನೆ. 'ಅಷ್ಟು ದೊಡ್ಡ ಕಲಾವಿದರೇ ಇಷ್ಟೊಂದು ಸರಳವಾಗಿದ್ದಾರೆ. ನಾನು ಇನ್ನೂ ಸರಳವಾಗಿರಬೇಕು ಎಂದು ಅದನ್ನೇ ರೂಢಿಸಿಕೊಂಡಿದ್ದೇನೆ. ದೊಡ್ಡವರ ಸಾಧನೆ ನೋಡಿದಾಗಲೆಲ್ಲಾ ನಾನು ಎಷ್ಟು ಚಿಕ್ಕವನು ಎನ್ನುವುದು ಗೊತ್ತಾಗುತ್ತದೆ. ಇನ್ನೂ ಏನೂ ಸಾಧನೆ ಮಾಡಿಲ್ಲ ಎನ್ನುವುದು ತಿಳಿಯುತ್ತದೆ. ಅದಕ್ಕಾಗಿ ದೊಡ್ಡವರನನ್ನು ನೋಡಿ ಕಲಿಯುತ್ತೇನೆ. ನನಗೆ ಮಾದರಿ ಎಂದರೆ ಭೀಮಸೇನ ಜೋಶಿ. ಅವರೇ ನನಗೆ ಸ್ಫೂರ್ತಿ. ಅವರ ಹಾದಿಯಲ್ಲಿಯೇ ಸಾಗುತ್ತಿದ್ದೇನೆ. ನನ್ನ ಒಬ್ಬನೇ ಮಗ ಲಲಿತ್ ಕೂಡಾ ನನ್ನ ಬಳಿಯೇ ಸಂಗೀತ ಕಲಿಯುತ್ತಿದ್ದಾನೆ. ನಾನು ಗಳಿಸಿದ ಮೇವು ಅವನಿಗೆ ಉಣಿಸುತ್ತಿದ್ದೇನೆ' ಎಂದು ಹೇಳುವಾಗ ತಾವು ಉಂಡ ಮೇವು ವ್ಯರ್ಥವಾಗಿಲ್ಲ ಎಂಬ ಭಾವ.



ಮುನ್ನೋಟ 28-11-2021 ರಿಂದ 04-12-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ವೃತ್ತಿಯಲ್ಲಿ ಬದಲಾವಣೆಯನ್ನು ಬಯಸುವವರಿಗೆ ಈಗ ಒಳ್ಳೆಯ ಕಾಲ. ಅನಿರೀಕ್ಷಿತ ಅವಕಾಶಗಳು ಒದಗಿಬರುತ್ತವೆ. ಇದುವರೆಗೆ ಇದ್ದ ಆರ್ಥಿಕ ಹಿನ್ನಡೆ ಈಗ ಪರಿಹಾರವಾಗಿ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತದೆ. ಮನೆಯಲ್ಲಿದ್ದ ಭಿನ್ನಾಭಿಪ್ರಾಯಗಳು ದೂರವಾಗಿ ವಾತಾವರಣ ತಿಳಿಯಾಗುತ್ತದೆ. ಸ್ವಲ್ಪ ಆರೋಗ್ಯ ವ್ಯತ್ಯಾಸದಿಂದ ಮನಸ್ಸಿಗೆ ದುಗುಡವಾಗಬಹುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ನಿಮ್ಮ ನೆಚ್ಚಿನ ಕ್ಷೇತ್ರಗಳಲ್ಲಿ ಹೆಚ್ಚಿನ ಸ್ಪರ್ಧೆಯನ್ನು ಕಾಣಬಹುದು. ಆದಾಗ್ಯೂ ಉನ್ನತಿ ನಿಮ್ಮ ಪಾಲಿಗೆ ಒದಗಿಬರಲಿದೆ. ಬಹಳ ದಿನಗಳಿಂದ ಬರುವುದಿಲ್ಲವೆಂದುಕೊಂಡಿದ್ದ ಹಣ ವಾಪಸ್ಸು ಬಂದು ನಿಮ್ಮ ಕಾರ್ಯಕ್ಕೆ ಸಹಕಾರಿಯಾಗುತ್ತದೆ. ಸಂಗಾತಿಯ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ಹಣಕಾಸಿನ ವಿಚಾರದಲ್ಲಿ ಎಚ್ಚರ ಇರಲಿ. ಮೋಸ ಹೋಗುವ ಸಂದರ್ಭಗಳು ಎದ್ದುಕಾಣುತ್ತವೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ನಿಮ್ಮ ಕಾರ್ಯ ಮತ್ತು ಅನುಭವದ ಕ್ಷಮತೆಯಿಂದಾಗಿ ಉತ್ತಮ ಅವಕಾಶಗಳು ಒದಗಿ ಬರುತ್ತವೆ. ಅವುಗಳ ಸಾಧಕ-ಬಾಧಕಗಳನ್ನು ತೂಗಿ ನೋಡಿ ಅನುಸರಿಸಿರಿ. ಸಮಾಜದಲ್ಲಿ ನಿಮ್ಮ ಶ್ರಮದ ಫಲವನ್ನು ಬೇರೆಯವರು ಬಳಸಿಕೊಳ್ಳಬಹುದು. ಈ ಬಗ್ಗೆ ನಿಗಾ ವಹಿಸಿರಿ. ಮಹಿಳಾ ರಾಜಕಾರಣಿಗಳಿಗೆ ಪ್ರಮುಖ ಹುದ್ದೆಗಳು ಸಿಗುವ ಸಂದರ್ಭವಿದೆ. ಸಂಗಾತಿಯಿಂದ ಆರ್ಥಿಕ ನೆರವು ದೊರೆಯುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ನಿಮ್ಮ ಕೆಲವು ಕನಸುಗಳಿಗೆ ರೆಕ್ಕೆಪುಕ್ಕ ಬಂದು ಸಂತಸವಾಗುತ್ತದೆ. ಹಣಕಾಸಿನ ಸ್ಥಿತಿ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಆಸ್ತಿ ಖರೀದಿ ಮಾಡುವ ಯೋಗವಿದೆ. ಕೆಲವು ಹಿರಿಯ ಅಧಿಕಾರಿಗಳು ತಮ್ಮ ಮೇಲಿನ ಆಪಾದನೆಯಿಂದ ಮುಕ್ತರಾಗಿ ಹೊಸ ಜೀವನವನ್ನು ಪ್ರಾರಂಭಿಸುವ ಲಕ್ಷಣಗಳಿವೆ. ಕ್ರೀಡಾಪಟುಗಳಿಗೆ ಅವಕಾಶಗಳು ಹೆಚ್ಚಾಗಿ ಪ್ರಸಿದ್ಧಿಗೆ ಬರುವ ಸಾಧ್ಯತೆ ಇದೆ. ವೃತ್ತಿ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮ ನಡೆನುಡಿಗಳಿಂದ ಪಾಲುದಾರಿಕೆ ವ್ಯವಹಾರದಲ್ಲಿ ಉತ್ತಮ ಗೌರವ ಪಡೆಯುವಿರಿ. ಬೇರೆಯವರ ಸಲಹೆಗಳನ್ನು ಒಪ್ಪಿಕೊಳ್ಳುವುದಕ್ಕೆ ಮುನ್ನ ಪರಿಶೀಲನೆ ಮಾಡುವುದು ಅಗತ್ಯ. ವಿವಾಹ ಆಕಾಂಕ್ಷಿಗಳಿಗೆ ಪುಷ್ಟಿ ದೊರೆತು ಸಂಬಂಧ ಕೂಡಿಬರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಬಂಧುಗಳ ನಡುವೆ ಅತಿಯಾದ ಮಾತು ಬೆಳೆದು ವೈಮನಸ್ಯ ತಲೆದೋರಬಹುದು.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಯಾವುದೇ ಕೆಲಸ ಕಾರ್ಯಗಳನ್ನು ಮಾಡುವಾಗ ಅತಿಯಾದ ಆತುರ ಬೇಡ. ಸಂಗಾತಿಗೆ ಪಿತ್ರಾರ್ಜಿತ ಆಸ್ತಿ ಒದಗಿಬರುವ ಸಾಧ್ಯತೆಗಳಿವೆ. ಎಲ್ಲರೊಡನೆ ವ್ಯವಹರಿಸುವಾಗ ಸಮಾಧಾನದಿಂದ ಇರುವುದು ಒಳ್ಳೆಯದು. ದೂರ ಪ್ರಯಾಣ ಮಾಡಿದ ಸುಖ ಅನುಭವ ನಿಮ್ಮದಾಗುತ್ತದೆ. ನಿಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಆತಂಕ ಎದುರಾಗಬಹುದು. ಧಾರ್ಮಿಕ ಆಚರಣೆಗಳ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ನಿರುದ್ಯೋಗಿಗಳಿಗೆ ಅವರ ಹಿಂದಿನ ಉದ್ಯೋಗದಾತರಿಂದ ಕರೆ ಬಂದು ಪುನಃ ಕೆಲಸ ಸಿಗುತ್ತದೆ. ಉದ್ಯೋಗದಾತರ ಜೊತೆ ಇದ್ದಂತಹ ಸಂಬಂಧ ಇದಕ್ಕೆ ಕಾರಣವಾಗುತ್ತದೆ. ನೀವು ಆರಂಭಿಸಬೇಕೆಂದು ಇರುವ ಯೋಜನೆಗಳ ಬಗ್ಗೆ ಕುಟುಂಬದವರೊಡನೆ ಮತ್ತು ತಜ್ಞರೊಡನೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದು ಬಹಳ ಉತ್ತಮ. ಹೊಸ ವಾಹನದ ಖರೀದಿ ಸಾಧ್ಯತೆ ಕಂಡುಬರುತ್ತಿದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಒತ್ತಡದ ಜೀವನದಿಂದ ಹೊರಬಂದು ಸಂತೋಷಪಡುವಿರಿ. ಬಾಲ್ಯ ಸ್ನೇಹಿತನ ಅನಿರೀಕ್ಷಿತ ಆಗಮನದಿಂದ ಖುಷಿಯಾಗುವಿರಿ. ಬೇರೆಯವರ ವ್ಯವಹಾರದಲ್ಲಿ ಭಾಗಿಯಾಗಲು ಹೋಗಿ ಮೋಸ ಹೋಗುವ ಸಾಧ್ಯತೆಗಳಿವೆ. ಹಿರಿಯರ ಆರೋಗ್ಯದಲ್ಲಿ ಎಚ್ಚರವಹಿಸುವುದು ಬಹಳ ಅಗತ್ಯ. ನಿಮ್ಮ ಕೆಲಸ ಕಾರ್ಯಗಳಲ್ಲಿ ಅನ್ಯರು ಹಸ್ತಕ್ಷೇಪ ಮಾಡಲು ಎಂದಿಗೂ ಅವಕಾಶ ಕೊಡಬೇಡಿ. ಆರ್ಥಿಕರಂಗದಲ್ಲಿ ಚೇತರಿಕೆಯ ಹಾದಿಯನ್ನು ಕಾಣುವಿರಿ. ಸಾಮಾಜಿಕ ಕಾರ್ಯಗಳತ್ತ ಮನಸ್ಸು ಹರಿಯುತ್ತದೆ.


ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಬಂಡವಾಳ ಹೂಡಿಕೆಗೆ ಆಲೋಚಿಸುತ್ತಿದ್ದ ನಿಮಗೆ ಈಗ ಕಾಲಕೂಡಿ ಬರುತ್ತದೆ. ನಿಮ್ಮ ನಿರೀಕ್ಷೆಯಷ್ಟು ಆದಾಯ ಹರಿದುಬರುತ್ತದೆ. ಚಿನ್ನ, ಬೆಳ್ಳಿ ವ್ಯಾಪಾರಸ್ಥರು ಹೊಸ ಶಾಖೆಗಳನ್ನು ತೆರೆಯಬಹುದು. ಹೊಸದಾಗಿದೆ ಕೆಲಸಕ್ಕೆ ಸೇರಿದವರಿಗೆ ಅಧಿಕಾರಿಗಳಿಂದ ಸೂಕ್ತ ಮಾರ್ಗದರ್ಶನ ದೊರೆತು ಕೆಲಸ ಹಗುರವೆನಿಸುತ್ತದೆ. ಕ್ಷಿಪ್ರ ವ್ಯವಹಾರಗಳು ಹೆಚ್ಚು ಫಲವನ್ನು ಕೊಡುತ್ತದೆ. ನಿಮ್ಮ ಮಾತು ಮತ್ತು ಆಕರ್ಷಕ ವ್ಯಕ್ತಿತ್ವದಿಂದಾಗಿ ಎಲ್ಲರನ್ನೂ ಆಕರ್ಷಿಸುವಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ವಿಪರೀತ ಕೆಲಸದ ಒತ್ತಡದ ನಡುವೆಯೂ ಮಾನಸಿಕ ಸ್ಥಿರತೆಯು ನಿಮ್ಮದಾಗಲಿದೆ. ಸಹವರ್ತಿಗಳಲ್ಲಿ ಉತ್ಸಾಹವನ್ನು ತುಂಬಿ ಕೆಲಸ ಮಾಡಿಸುವಿರಿ. ಆಸ್ತಿ ಖರೀದಿ ಮಾಡುವ ಸಾಧ್ಯತೆಗಳು ಗೋಚರಿಸುತ್ತಿವೆ. ವ್ಯವಹಾರ ವಿಸ್ತರಣೆಗಾಗಿ ದೂರ ಪ್ರಯಾಣದ ಸಾಧ್ಯತೆಗಳಿವೆ. ಯಾವುದೇ ಮುಲಾಜಿಗೆ ಒಳಗಾಗದೆ ವ್ಯವಹಾರ ನಡೆಸುವುದರಿಂದ ನಿಮ್ಮ ವ್ಯವಹಾರ ಅಭಿವೃದ್ಧಿಯಾಗುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ನಿಮ್ಮ ಸಂಗಾತಿಯಿಂದ ಉತ್ತಮ ಆರ್ಥಿಕ ಸಹಕಾರ ದೊರೆಯುತ್ತದೆ. ಗೃಹಾಲಂಕಾರ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆ ಇದೆ. ಬಡ್ಡಿ ವ್ಯವಹಾರವನ್ನು ಮಾಡುವವರಿಗೆ ಹಿನ್ನಡೆ ಇರುತ್ತದೆ. ವಿದ್ಯಾರ್ಥಿಗಳಿಗೆ ಬೇಕಾದ ಮಾರ್ಗದರ್ಶನ ಖಂಡಿತ ದೊರೆಯುತ್ತದೆ. ಕಾವ್ಯ ಬರಹಗಾರರಿಗೆ ಉತ್ತಮ ಪ್ರೋತ್ಸಾಹ ದೊರೆತು ಅವರ ಬರಹಗಳು ಪ್ರಕಟಗೊಳ್ಳುತ್ತವೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಹಿರಿಯರಿಂದ ಬರುವ ಸಲಹೆಗಳು ನಿಮಗೆ ಸಾಕಷ್ಟು ಅನುಕೂಲ ಮಾಡುತ್ತವೆ. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳ ಸಹಾಯದಿಂದ ಕಾರ್ಯ ಸಾಧನೆ ಆಗುವುದು. ಗೃಹ ನಿರ್ಮಾಣ ಮಾಡುವವರಿಗೆ ಬೇಡಿಕೆ ಬರುತ್ತದೆ. ವಸ್ತ್ರವಿನ್ಯಾಸಕಾರರ ವ್ಯವಹಾರದಲ್ಲಿ ವಿಸ್ತರಣೆಯಾಗುತ್ತದೆ. ಗೃಹಾಲಂಕಾರ ವಸ್ತುಗಳನ್ನು ತಯಾರಿಸುವವರಿಗೆ ಹೆಚ್ಚಿನ ಆದೇಶಗಳು ದೊರೆತು ಸಂತಸವಾಗುತ್ತದೆ. ನೆಚ್ಚಿನ ಒಡವೆಗಳನ್ನು ಕೊಳ್ಳುವ ಅವಕಾಶವಿದೆ.

ಪದಬಂಧ 2715



ಮೇಲಿನಿಂದ ಕೆಳಕ್ಕೆ

1. ನಮ್ಮ ನುಡಿಯ ನಾಡ ಸಂಭ್ರಮ 4
2. ಸೂರ್ಯನ ಪ್ರಕಾಶವನ್ನು ಹೊಂದಿದವ 4
3. ದೇವ ದಾನವರ ಸಂಗಮ 4
4. ನಾರಾಯಣನನ್ನು ಬಿಟ್ಟ ಮಧ್ಯ ಹಾದಿ 4
5. ಧರ್ಮಜನ ಬೆನ್ನ ಹಿಂದಿದ್ದ ಅನುಜರು 4
8. ನಾವು ನೆನಸಿದಂತೆ ಆಗಬೇಕೆಂಬ ನಮ್ಮ ಬಯಕೆ 3
10. ಹೆಣ್ಣುಗಂಡು ಕೊಟ್ಟು ತೆಗೆದುಕೊಂಡ ಹೆಮ್ಮೆಯ ಮಂದಿ 3
12. ತೂಕವಿಲ್ಲದ ಅಗ್ಗದ ಬೆಲೆಯ ಕಬ್ಬಿಣದ ರೇಕು 3
13. ಕೊನೆಯಿಲ್ಲದ್ದು 3
14. ರಾಷ್ಟ್ರ ರಾಷ್ಟ್ರಗಳ ನಡುವೆ ನಡೆವ ದೊಡ್ಡ ಸಮರ ಕೆಳಗಿನಿಂದ ಶುರುವಾಗಿದೆ 4
15. ಐಹಿಕಕ್ಕೆ ಸಲ್ಲದ ಆತ್ಮ ಚಿಂತನೆ 4
16. ಇನ್ನೇನು ಹೊರಡಲು ಸಿದ್ಧವಾಗಿ ನಿಂತಿರುವ ಪಾದ 4
17. ವಿಪರೀತವಾದ ಸಿಟ್ಟು 4
18. ಅಳುವುದಕ್ಕಿಂತ ಹಾಸ ಒಳ್ಳೆಯದಲ್ಲವೇ? 4

ಎಡದಿಂದ ಬಲಕ್ಕೆ

1. ದೇಶದ ತೂಕ ಹೆಚ್ಚಿಸುವ ಆಳ್ವಿಕೆ 4
3. ಆರಾಮದ ಪೀಠ 4
5. ನವರಸಗಳಲ್ಲಿ ಜಿಗುಪ್ಸೆಯ ಭಾವ 3
6. ಮುಳುಗಿಸದಿರು, ನೀರ ಮೇಲೆ ಹಾಯಿಸು ನಾವೆಯಂತೆ 3
7. ಕಾಡಿನ ರಾಜ 4
9. ಊರಿನಲ್ಲಿ ತೇರು ಸಂಚರಿಸುವ ರಸ್ತೆ 4
11. ವಿಧಿಯ ದೃಷ್ಟಿಯಲ್ಲಿ ಅದೃಷ್ಟಹೀನ 4
13. ಕೃಷ್ಣನ ಮೊಮ್ಮಗ ಪ್ರದ್ಯುಮ್ನನ ಮಗ 4
15. ನಮ್ಮ ನಿತ್ಯ ಬಳಕೆಯ ನುಡಿ 4
17. ಏನೂ ಇಲ್ಲವೆಂಬ ಕೊರತೆಯ ಸ್ಥಿತಿ 4
19. ಆಡುಮಾತಿನಲ್ಲಿ ಭಯ 3
20. ದಾಸ್ತಾನು ಸಂಗ್ರಹಿಸಿಟ್ಟ ಸ್ಥಳ ಹಿಂದುಮುಂದಾಗಿದೆ 3
21. ಮೊಸರಿನಿಂದ ಬೆಣ್ಣೆ ತೆಗೆಯಲು ಬಳಸುವ ಸಾಧನ 4
22. ಫಲಿತಾಂಶ ಪಡೆಯಲು ಪ್ರಯೋಗಕ್ಕೆ ಗುರಿಪಡಿಸು 4

ಪದಬಂಧ ಉತ್ತರ -2714

ಮೇಲಿಂದ ಕೆಳಕ್ಕೆ

1. ನಿರ್ವಾಚ 2.ರಜಕ 3.ಜಯಹೇ 4.ಧನಿಕ 7.ಲಹರಿ 9.ಸಂಹಾರ 10.ಸಿಡುಕು 11.ವರಸೆ 12.ಯಶೋದಾ 13.ಅಟವೀ 14.ಸುಧೀರ 16.ಮೀಸಲು 18.ಶೂದ್ರಕ 20.ಸರಸ 21.ತುರಗ 22.ಹಿಡಿತ 23.ರಜನಿ

ಎಡದಿಂದ ಬಲಕ್ಕೆ

1.ನಿರಾಧಾರ 3.ಜರಾಸಂಧ 5.ಜವರಾಯ 6.ಚಲದಂಕ 8.ಹೇಮಸಂಕಲೆ 10.ಸಿರಿಭೂವಲಯ 13.ಅರಕಾಸು 15.ಕುಡಿಮೀಸೆ 17.ದಾನವೀರಶೂರ 19.ಅಸಲುಮಾತು 22.ಹಿತಕರ 24.ರಸವಾಡಿ 25.ಸರ್ವಸಂಗ 26.ತಪಮುನಿ

ಕನ್ನಡದಲ್ಲಿ 'ಸಿಮೊನ್' ಹೊನಲು

ಎಸ್. ನಟರಾಜ ಬೂದಾಳು

ವಿಮರ್ಶೆ


'ಸ್ತ್ರೀಯಾಗಿ ಯಾರೂ ಹುಟ್ಟುವುದಿಲ್ಲ. ಅವರನ್ನು ಸ್ತ್ರೀಯರನ್ನಾಗಿ ರೂಪಿಸಲಾಗುತ್ತದೆ. ಹೆಣ್ಣುಮಕ್ಕಳಲ್ಲಿ ಸಾಮರ್ಥ್ಯವಿಲ್ಲವೆಂದಲ್ಲ. ಸಮಾಜ ಅವಳ ಚಲನೆಯನ್ನು ಕಟ್ಟಿಹಾಕಿದೆ. ಚರಿತ್ರೆಯ ವೈಫಲ್ಯಗಳಿಂದ ಹತಾಶರಾಗಬೇಕಿಲ್ಲ. ಇದು ಗಂಡಸರ ಲೋಕವೆಂದು ಸುಮ್ಮನಿರಬಾರದು. ಮಹಿಳೆಯರು ತಮಗಾಗಿ ಒಂದು ಖಾಲಿ ಹಾಳೆಯನ್ನು ಹುಡುಕಿಕೊಳ್ಳಬೇಕು. ಅದರೊಳಗೆ ಹೊಸಲೋಕದ ಹೆಜ್ಜೆಗುರುತುಗಳನ್ನು ಮೂಡಿಸಬೇಕು.'

ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಸಿಮೊನ್ ದ ಬೋವಾ ಆಡಿ ಬದುಕಿದ ಈ ಮಾತುಗಳು ಅನುರಣಿತವಾಗುತ್ತಲೇ ಇವೆ. ಸಿಮೋನ್ ದ ಬೋವಾ ಕೇವಲ ಸ್ತ್ರೀವಾದಿ ಚಿಂತಕಿಯಲ್ಲ. ಆಕೆ ಮಹಾನ್ ಮಾನವತಾವಾದಿ. ಹೇಳುವುದನ್ನು ಬದುಕಿ ತೋರಿದವಳು. ತತ್ವಶಾಸ್ತ್ರಕ್ಕೂ ಮಹತ್ವದ ಕಾಣಿಕೆ ನೀಡಿದವಳು. ಸ್ತ್ರೀವಾದದ ಹಲವು ಕವಲುಗಳಲ್ಲಿ ಅವಳದೂ ಒಂದು. ಇದು ಅವಳ ಮಾತು ಕಥನಗಳ ಅನುವಾದಿತ ಕೃತಿಯ ಈ ಹೊತ್ತಿನ ಪ್ರಸ್ತುತತೆ.

ಈ ಪುಸ್ತಕವನ್ನು ತಂದಿರುವ ಅಚ್ಚುಕಟ್ಟುತನ ಮೊದಲಿಗೆ ನಮ್ಮನ್ನು ಸೆಳೆಯುತ್ತದೆ. ಇದನ್ನು ತನ್ನದೇ ಪುಸ್ತಕವೆಂಬಂತೆ ಅಕ್ಕರಾಸ್ತೆಯಲ್ಲಿ ಅನುವಾದಿಸಿರುವ ವಿಕ್ರಮ ವಿಸಾಜಿ ಮತ್ತು ಅದನ್ನು ಅಷ್ಟೇ ಪ್ರೀತಿಯಿಂದ ಸಿದ್ಧಪಡಿಸಿ ನೀಡಿರುವ ಪ್ರಕಾಶಕ ಪಲ್ಲವ ವೆಂಕಟೇಶ್ ಅವರಿಗೆ ಅಭಿನಂದನೆಗಳು. ಸಿಮೊನ್ ದ ಬೋವಾ ಬರೆದ ನಾಲ್ಕು ಆತ್ಮಕಥೆಗಳ ಕೆಲವು ಭಾಗಗಳು, ಬಿಡಿ ಬಿಡಿ ನೆನಪುಗಳು, ಸಂದರ್ಶನಗಳು, ಪತ್ರಗಳು, ಪ್ರವಾಸ ಕಥನಗಳು, ಉಪನ್ಯಾಸಗಳು, ಭಾಷಣಗಳು ಮತ್ತು ಲೇಖನಗಳನ್ನು ಒಟ್ಟುಮಾಡಿ ಅನುವಾದಿಸಲಾಗಿದೆ.

ಸಿಮೊನ್ ದ ಬೋವಾ (1908-1986) ಚಿಂತನೆಗಳು ಮತ್ತು ಹೋರಾಟದ ದಾಖಲೆಗಳಾಗಿ ಇರುವ ಪ್ರಮುಖ ಕೃತಿಗಳೆಂದರೆ: 'ಮೆಮೈರ್ಸ್ ಆಫ್ ಎ ಡ್ಯೂಟಿಫುಲ್ ಡಾಟರ್', 'ದ ಪ್ರೈಮ್ ಆಫ್ ಲೈಫ್', 'ಫೋರ್ಸ್ ಆಫ್ ಸರ್ಕಮ್‌ಸ್ಟೆನ್ಸಸ್', 'ಆಲ್ ಸೆಡ್ ಅಂಡ್ ಡನ್' ಎಂಬ ಆತ್ಮಕಥೆಯ ನಾಲ್ಕು ಭಾಗಗಳು, 'ದಿ ಮಂದಾರಿನ್ಸ್', 'ಷಿ ಕೇಮ್ ಟು ಸ್ಟೇ' ಮುಂತಾದ ಕಾದಂಬರಿಗಳು, 'ದ ಸೆಕೆಂಡ್ ಸೆಕ್ಸ್', 'ದ ಲಾಂಗ್ ಮಾರ್ಚ್' ಮುಂತಾದ ಹೋರಾಟ ತತ್ವಚಿಂತನೆಯ ಕೃತಿಗಳು. ಇವೆಲ್ಲ ಬೋವಾ ಅವರ ಲೋಕಾನುಸಂಧಾನ ಮತ್ತು ಹೋರಾಟದ ಬದುಕನ್ನು ಮುಂದಿಡುತ್ತವೆ. ಪ್ರಸ್ತುತ ಕೃತಿಯಲ್ಲಿ ಬೋವಾ ಅವರ ಬದುಕಿನ ಪ್ರಮುಖ ಘಟನೆಗಳ ಜೊತೆಗೆ ಅವರ ಜೊತೆಗೆ ನಡೆಸಿದ ಕೆಲವು ಸಂದರ್ಶನಗಳನ್ನು ಮತ್ತು ಅವರು ಸಂಗಾತಿ ಸಾರ್ತ್ರ ಮತ್ತು ಪ್ರಿಯ ಗೆಳೆಯ ನೆಲ್ಸನ್‌ಗೆ ಬರೆದ ಕೆಲವು ಪತ್ರಗಳನ್ನು ದಾಖಲಿಸಿದೆ. ಇವೆಲ್ಲ ಅವರ ವ್ಯಕ್ತಿತ್ವದ ಘನತೆಯನ್ನು ಹಿಡಿದಿಟ್ಟಿವೆ.

ಸಿಮೊನ್ ದ ಬೋವಾ ಅವರ 'ದ ಸೆಕೆಂಡ್ ಸೆಕ್ಸ್' ಕನ್ನಡಕ್ಕೆ ಅನುವಾದಗೊಂಡಿದೆ. ಅದು ಕನ್ನಡದ ಈ ಹೊತ್ತಿನ ಚಿಂತನಾಕ್ರಮದ ಭಾಗವಾಗಿದೆ. ಬೋವಾ ಅವರ ಲೋಕಗ್ರಹಿಕೆಯು ಜೀವನ ಮೀಮಾಂಸೆಯ ಅನೇಕ ಪ್ರಮುಖ ನಿಲುವುಗಳನ್ನು ಮುನ್ನೆಲೆಗೆ ತರುವಂತಿದೆ. ಹೆಣ್ಣುಮಕ್ಕಳ ಹುಡುಕಾಟ, ಹೋರಾಟಗಳಿಗೆ ದೀರ್ಘಕಾಲೀನ ಇತಿಹಾಸವಿದೆ. ಈ ಹೋರಾಟಗಳಿಗೆ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳ ಸ್ಪಷ್ಟರೂಪ ದೊರಕಿದ್ದು ಪಾಶ್ಚಾತ್ಯದೇಶಗಳ ಚಿಂತಕ–ಚಿಂತಕಿಯರು ಮತ್ತು ಹೋರಾಟಗಾರರಿಂದ. ಅದರಲ್ಲಿ ಸಿಮೊನ್ ದ ಬೋವಾ ಅವರದು ದೊಡ್ಡ ಹೆಸರು.



ಸಿಮೊನ್ ದ ಬೋವಾ – ಮಾತು ಕಥನ
ಅನುವಾದ: ವಿಕ್ರಮ ವಿಸಾಜಿ
ಪ್ರ: ಪಲ್ಲವ ಪ್ರಕಾಶನ
ಸಂ: 8880087235
ಪು: 320 ₹300

ಈ ಅನುವಾದಿತ ಕೃತಿ ಬೋವಾ ಚಿಂತನೆಯ ಪ್ರಮುಖ ನಿಲುವುಗಳ ಸುವ್ಯವಸ್ಥಿತ ಸಂಪಾದನೆಯಂತಿದೆ. ಬೋವಾ ಪ್ರತಿಪಾದಿಸಿದ ನಿಲುವುಗಳನ್ನು ಅವರ ಮಾತುಗಳಲ್ಲಿ ಕೇಳುವುದಾದರೆ, 'ಮೊದಲನೆಯದಾಗಿ ಹೆಣ್ಣು ತನ್ನ ಮೇಲೆ ಅವಲಂಬಿತಳಾಗುವುದು ಮುಖ್ಯ. ಆದರೆ, ಪರಂಪರೆಯಿಂದಲೂ ಹೆಣ್ಣು ಯಾರ್ಯಾರದೋ ಆಸ್ತಿಯಾಗುವವಳೇ ಹೊರತು ಸ್ವಂತ ಆಸ್ತಿ ಆಗುವುದಿಲ್ಲ. ಒಬ್ಬ ಹೆಣ್ಣು ಮದುವೆಯಾದರೆ ಗಂಡ ಮತ್ತು ಮಕ್ಕಳ ಆಸ್ತಿಯಾಗುವಳು. ಆಗದೇ ಇರುವಾಗ ತಂದೆ ತಾಯಿಯ ಆಸ್ತಿಯಾಗುವಳು. ಯಾವುದೇ ಸಮಯದಲ್ಲಿ ಗಂಡ ಮತ್ತು ಮಕ್ಕಳು ಆಕೆಯಿಂದ ಸ್ಪಷ್ಟೀಕರಣ, ಸಹಾಯ ಕೇಳಬಹುದು. ಇದನ್ನು ಪೂರೈಸುವುದು ಆಕೆಯ ಕರ್ತವ್ಯ. ಆಕೆ ಕುಟುಂಬಕ್ಕೆ ಸಂಬಂಧಿಸಿದವಳು. ಸಮಾಜಕ್ಕೆ ಸಂಬಂಧಿಸಿದವಳು. ಆದರೆ ತನಗೆ ಮಾತ್ರ ಸಂಬಂಧಿಸಿದವಳಲ್ಲ.'

ಎರಡನೆಯದಾಗಿ, 'ಸ್ತ್ರೀಯರನ್ನೂ ಪುರುಷರನ್ನೂ ಸಂಪೂರ್ಣ ಮನುಷ್ಯರನ್ನಾಗಿಸುವುದು ಈ ಕಾಲದ ಅಗತ್ಯ. ಇಬ್ಬರ ನಡುವಿನ ಭೇದ ನಾಶವಾಗಬೇಕಿದೆ. ಸ್ತ್ರೀಯರ ಹೋರಾಟಕ್ಕೆ ಅದರದ್ದೇ ಆದ ಅನನ್ಯತೆ ಇದೆ. ಅಲ್ಲದೆ ಈ ಚಳವಳಿಯನ್ನು ಪುರುಷರ ಜೊತೆ ನಿಂತುಕೊಂಡು ಮಾಡಬೇಕಾದ ಅಗತ್ಯವಿದೆ. ಸ್ತ್ರೀವಾದಿ ಚಳವಳಿಗಳಿಂದ ಪುರುಷರನ್ನು ಪ್ರತ್ಯೇಕಿಸಿ ಇಡುವ ಬಗೆಗೆ ನನಗೆ ನಂಬಿಕೆಯಿಲ್ಲ. ಇದು ಒಂದು ನಿಲುವಾದರೆ, ಮಹಿಳೆಯರು ತಮ್ಮ ಹಣೆಬರಹವನ್ನು ತಾವೇ ಬರೆದುಕೊಳ್ಳಬೇಕು. ಯಾವ ಉದ್ಧಾರಕನಿಗಾಗಿಯೂ ಕಾಯಬೇಕಾಗಿಲ್ಲ ಎಂಬುದು ಇನ್ನೊಂದು ಗಟ್ಟಿಯಾದ ನಂಬುಗೆ.'

ಇವು ವಿಶ್ವದ ಎಲ್ಲ ಹೆಣ್ಣುಮಕ್ಕಳಿಗೆ ಸಿಮೊನ್ ಮಾಡುವ ಒತ್ತಾಯ. ಜೊತೆಗೆ ಅದಕ್ಕೆ ನಾನೇ ಸಾಕ್ಷಿ ಎನ್ನುವಷ್ಟು ಪ್ರಾಮಾಣಿಕವಾದ ನಡೆ. ಫ್ರೆಂಚ್ ಯೋಚನಾಕ್ರಮದಲ್ಲಿಯೇ ಇಂತಹ ಮೊದಲ ನಡೆ ನಮ್ಮದು ಎಂಬ ಸಣ್ಣ ಅಹಮಿಕೆಯೊಂದು ಇದ್ದೇ ಇರುತ್ತದೆ. ನಮ್ಮ ಬಂಗಾಳಿಗಳ ಹಾಗೆ! ಬೋವಾ ತಾನು ಬದುಕಿ ತೋರಿಸುತ್ತೇನೆ ನೋಡಿ ಎಂಬಂತೆ ನಡೆದವರು. ಜೊತೆಗೆ ಸಾರ್ತ್ರರ ಬೌದ್ಧಿಕಸಾಂಗತ್ಯ ಮತ್ತು ಅವರು ನಿರಂತರ ಎಚ್ಚರದಿಂದ ಕಾಪಾಡಿಕೊಂಡ ಸ್ವಾತಂತ್ರ್ಯ ಇವೆರಡೂ ಒಬ್ಬ ಹೋರಾಟಗಾರ್ತಿಯ ಪ್ರಾಥಮಿಕ ಅಗತ್ಯಗಳಂತಿದ್ದವು. ಇಲ್ಲಿಯ ಪಠ್ಯ ಜೋಡಣೆಯಲ್ಲಿ ಈ ಸಂಗತಿಗಳನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಲಾಗಿದೆ ಎಂಬುದು ಮೆಚ್ಚುಗೆಯ ಸಂಗತಿಯಾಗಿದೆ.

ಬೋವಾ ಅವರ ಬದುಕಿನ ದೃಷ್ಟಿಕೋನವನ್ನು ಪ್ರತಿಬಿಂಬಿಸುವ ಅನೇಕ ಸಂಗತಿಗಳು ಇಲ್ಲಿ ಚರ್ಚಿಸಲ್ಪಟ್ಟಿವೆ. ಶ್ರದ್ಧಾವಂತ ಕ್ಯಾಥೊಲಿಕ್ ಕುಟುಂಬದಲ್ಲಿ ಬೆಳೆದ ಬೋವಾ ಕಾಲ್ಪನಿಕ ಪೊಳ್ಳು ನಂಬಿಕೆಗಳು ರಾಜಕೀಯದ್ದಾಗಿರಲಿ, ಧಾರ್ಮಿಕತೆಯದ್ದಾಗಿರಲಿ, ಸಾಮಾಜಿಕವಾದದ್ದಾಗಿರಲಿ ಅವುಗಳನ್ನು ತೀವ್ರವಾಗಿ ಪ್ರತಿರೋಧಿಸಿದವರು.

ಇಲ್ಲಿ ಸೇರ್ಪಡೆಯಾಗಿರುವ ಸಿಮೊನ್ ಬದುಕಿನ ಸಣ್ಣ ವಿವರಗಳು ಆಸಕ್ತಿ ಹುಟ್ಟಿಸುವಂತಿವೆ. ಅಂಥವುಗಳನ್ನು ಹೆಕ್ಕಿ ನೀಡಿರುವುದರಿಂದ ಈ ಪುಸ್ತಕದ ಅಂದ ಮತ್ತೂ ಹೆಚ್ಚಿದೆ. ಚಿಕ್ಕಪುಟ್ಟ ಗಲ್ಲಿಗಳು, ಚೌಕಗಳು, ಸಂತೆಯ ಪ್ರದೇಶಗಳು, ನದಿ ದಡಗಳಲ್ಲಿ ಸದಾ ತಿರುಗುವುದು, ಗಿಜಿಗಿಜಿ ಎನ್ನುವ ಸಣ್ಣ ಹೋಟಲುಗಳಲ್ಲಿ ತಿನ್ನುವುದು, ಫ್ರೆಂಚರ ಆರೋಪಿತ ಸಭ್ಯತೆಯನ್ನು ಬೇಕೆಂದೇ ದಾಟುವುದು ಇವೆಲ್ಲ ಬೋವಾ ಯಾವುದೂ ಅಮುಖ್ಯವಲ್ಲ ಎಂಬ ನಿಲುವನ್ನು ಬದುಕಿದ ಸಾಕ್ಷಿಯಾಗಿವೆ.

ಅನುವಾದದ ಬಗೆಗೆ ಹೇಳಲೇಬೇಕಾದ ಎರಡು ಮಾತುಗಳಿವೆ. ಮೊದಲನೆಯದಾಗಿ ಅನುವಾದವನ್ನು ಪುಟ್ಟ ಪುಟ್ಟ ವಾಕ್ಯಗಳನ್ನಾಗಿ ಮಾಡಿವುದರಿಂದ ಓದಿನ ಆಯಾಸ ಉಂಟಾಗುವುದಿಲ್ಲ. ಎರಡನೆಯದಾಗಿ ಇದೊಂದು ಅನುವಾದದಂತಿರದೆ ಮೂಲಲೇಖಕರ ನೇರ ಮಾತುಕತೆಯಂತಿದೆ. ಅನುವಾದಕರು ಪಕ್ಕಕ್ಕೆ ಸರಿದು ನಿಂತಿದ್ದಾರೆ. ಇದೊಂದು ಸೂಕ್ಷ್ಮ ಸಂಗತಿ. ಓದುಗರನ್ನೂ ಕೇಳಿಸಿಕೊಳ್ಳಬಯಸುವುದಾದರೆ ಇದು ಮಾದರಿಕ್ರಮ.

ನೂರು ಕಥೆ, ನೂರಾರು ತಿವಿತ


ಅಭಿಲಾಷ್ ಪಿ.ಎಸ್.

ಒಳನೋಟ

ಇಲ್ಲಿ ಯಾವ ಕಥೆಗಳಿಗೂ ಶೀರ್ಷಿಕೆಯಿಲ್ಲ! ಕಥೆಯ ಸಂಖ್ಯೆಯೇ ಇವಕ್ಕೆ ನಾಮಧೇಯ. ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿಯೇಕೆ ಎನ್ನುವಂತೆ ಇಲ್ಲಿ ಅರ್ಧ ಪುಟದಲ್ಲೇ ಹೇಳಬೇಕಾಗಿರುವುದನ್ನು ಹೇಳಿ, ತಿವಿಯಬೇಕಾಗಿರುವುದನ್ನು ತಿವಿದು ಮುಗಿಯುವ ಕಥೆಗಳಿವೆ. ಆಗೊಮ್ಮೆ ಈಗೊಮ್ಮೆ ಮೂರ್ನಾಲ್ಕು ಪುಟಗಳಷ್ಟು ಬೆಳೆದ ಕಥೆಗಳೂ ಇವೆ. ಒಂದರ್ಥದಲ್ಲಿ ಒಂದಿಷ್ಟು ಪಂಚತಂತ್ರ, ಪುರಾಣ, ಇತಿಹಾಸ, ಉಪನಿಷತ್ ಎಲ್ಲವನ್ನೂ ತಮ್ಮದೇ ಕಲ್ಪನೆಯಲ್ಲಿ ಹದವಾಗಿ ಹುರಿದು, ಸಮಕಾಲೀನ ವಸ್ತು, ವಿಷಯಗಳನ್ನು ಕಥಾ ಸಂಕಲನದಲ್ಲಿ ಹಿಡಿದಿಟ್ಟು ಒಗ್ಗರಣೆ ಹಾಕಿ ಕೊಟ್ಟಿದ್ದಾರೆ ಪ್ರೊ.ಕೆ.ಈ. ರಾಧಾಕೃಷ್ಣ.

ಈ ಘಾಟು ಒಮ್ಮೊಮ್ಮೆ 'ಯೋಚನೆ'ಯ ಕೆಮ್ಮು ತರಿಸುತ್ತದೆ. ಅಂದಹಾಗೆ ಈ ಒಗ್ಗರಣೆ ಡಬ್ಬಿಯ ಹೆಸರು 'ಒಂದು ಮತ್ತು ನೂರು ಕಥೆಗಳು'. ಇದರೊಳಗೆ ಘಾಟು ಹೆಚ್ಚಿಸುವ, ಚಿಟಿಕೆಯಷ್ಟೇ ಹಾಕಿದರೂ ಖಾರ ಹೆಚ್ಚಿಸುವ ಒಂದಿಷ್ಟು ಮಸಾಲೆಗಳಿವೆ. ಮತ್ತಷ್ಟು ತಡಕಾಡಿದರೆ ಆರು ಮೂಲೆಗಳಲ್ಲಿ ಅಡಗಿ ಕುಳಿತ ಗಾಂಧೀಜಿ ಎದ್ದು ಕುಳಿತು ಕಥೆ ಹೇಳಲು ಆರಂಭಿಸುತ್ತಾರೆ. ಪಂಚತಂತ್ರದ ಪ್ರಾಣಿಪಕ್ಷಿಗಳು ಗೂಡು ಮಾಡಿಕೊಂಡಿವೆ. ಪುರಾಣ–ಇತಿಹಾಸದ ಘಮಲೂ ಇಲ್ಲಿದೆ.

ಹಾಗೆಂದು ಇದು ಮಕ್ಕಳ ಕಥೆಯೇ? ಹೌದು... ಅಲ್ಲ... ಎನ್ನುವ ಎರಡೂ ಉತ್ತರ ಓದಿದ ಬಳಿಕ ಎದುರಿಗಿರುತ್ತದೆ. ಸಾಮಾನ್ಯವಾಗಿ ಹೇಳುವ ಮಾತು, ಅನ್ನ ಬೆಂದಿದೆಯೇ ಎನ್ನುವುದನ್ನು ತಿಳಿಯಲು ಒಂದಕ್ಕಿ ಕಾಳು ನೋಡಿದರೆ ಸಾಕು. ಇಲ್ಲೂ ಅಷ್ಟೇ. ನರಿಯ ಗುಂಪೊಂದು ಕಾಡಿನ ರಾಜರುಗಳಾಗಲು ಸಿಂಹ, ಹುಲಿಯ ಬಣ್ಣ ಹಚ್ಚಿದ 'ಒಂದನೆಯ ಕಥೆ'. ಈ ಕಥೆಯನ್ನೊಮ್ಮೆ ವಿಧಾನಸೌಧ, ಸಂಸತ್‌ನಲ್ಲಿ ಕುಳಿತಿರುವ ನಮ್ಮನ್ನಾಳುವವರಿಗೆ ಹೇಳೋಣ ಎಂದೆನಿಸಿದರೆ, ಅವರ ಬಾಯಿಯಿಂದ ನಮಗೆಲ್ಲರಿಗೂ ಈ ಕಥೆ ಹೇಳಿಸಿದರೆ ಸೂಕ್ತ ಎಂದು ಮತ್ತೊಮ್ಮೆ ಎನಿಸಿಬಿಡುತ್ತದೆ. ಮಗದೊಮ್ಮೆ ಮಕ್ಕಳಿಗೊಂದು ನೀತಿಪಾಠದಂತೆ ಅನಿಸಿಬಿಡುತ್ತದೆ. ಹೀಗಾಗಿಯೇ ಇಲ್ಲಿ ನೂರು ಮತ್ತೊಂದು ಕಥೆ ಇದ್ದರೂ, ನೂರಾರು ತಿವಿತಗಳು ಇರುವುದು ಓದಿನ ಕ್ಷಣಕ್ಷಣಕ್ಕೂ ಅರಿವಿಗೆ ಬರುತ್ತದೆ.



ಒಂದು ಮತ್ತು ನೂರು ಕಥೆಗಳು
ಲೇ: ಕೆ.ಈ. ರಾಧಾಕೃಷ್ಣ
ಪ್ರ: ದೇಸಿ ಪುಸ್ತಕ
ಸಂ: 9448439998
ಪು: 348 ₹350

ಶೀರ್ಷಿಕೆ ಇಲ್ಲದ ಕಥೆಗಳೇ ಎಂದೊಮ್ಮೆ ಆಶ್ಚರ್ಯವಾಗಿ ನಿಮಿಷದೊಳಗೆ ಓದಿ ಮುಗಿಸಿದಾಗ, ಇವುಗಳಿಗೆ ಶೀರ್ಷಿಕೆಯ ಅಗತ್ಯವೂ ಇಲ್ಲ ಎನಿಸುತ್ತದೆ. ಆದರೆ ನೂರ ಒಂದನೆಯ ಕಥೆ ಸ್ವಲ್ಪ ಭಿನ್ನ. ಇಲ್ಲಿ ಶೀರ್ಷಿಕೆ ಸಂಖ್ಯೆಯ ರೂಪ ಪಡೆಯದೆ ಅಕ್ಷರ ರೂಪಕ್ಕೆ ಮರಳಿದೆ. 'ನೂರ ಒಂದನೆಯ ಕಥೆ' ವೆಂಕಪ್ಪ–ಕಿಟ್ಟಪ್ಪನ ನಡುವೆ ನಡೆಯುವ ಶರೀರ ಒಗೆಯುವ ಸಂಭಾಷಣೆಯ ಕಥೆ. ಈ ಕೃತಿಯಲ್ಲಿ ಹೇಗೆ ಪ್ರತಿ ಕಥೆಗೂ ಹಲವು ಆಯಾಮಗಳಿವೆಯೋ ಅದೇ ರೀತಿ ಈ ಕಥೆಗೂ ಇವೆ. ಇಲ್ಲಿ 'ಒಗೆದರೆ' ಎನ್ನುವ ಅಕ್ಷರ ಚಿಗುರಿನಂತೆ ಒಂದಕ್ಕೊಂದು ಬೆಳೆದು ಒಳಾರ್ಥ ಕಲ್ಪಿಸುತ್ತಾ 'ಅ–ಕ್ಷರ' ಪ್ರಪಂಚವನ್ನೇ ತೆರೆದಿದೆ.

ಸಂಕ್ಷಿಪ್ತತೆ ಇಲ್ಲಿ ದೊಡ್ಡ ಕಾದಂಬರಿಯ ಕೆಲಸ ಮಾಡಿ ಸುಮ್ಮನೆ ಕುಳಿತಿದೆ. ಇಲ್ಲಿನ ಎಲ್ಲ ಕಥೆಗಳೂ ವೈಯಕ್ತಿಕ ಮತ್ತು ಸಾಮಾಜಿಕ ತಿಳಿವಳಿಕೆಯನ್ನು ಮೂಡಿಸುತ್ತಾ ಮುನ್ನಡೆಯುತ್ತವೆ. ಒಂದಲ್ಲಾ ಒಂದು ಪ್ರಶ್ನೆಯನ್ನು ನಮ್ಮ ಮುಂದಿಡುತ್ತಾ ಸಾಗುತ್ತವೆ. ಮಕ್ಕಳಿಗೆ ಓದಿ ಹೇಳುವ ಮುನ್ನ ನಾವೊಮ್ಮೆ ಓದಿ ಬದಲಾಗಬೇಕಾಗದ ಅವಶ್ಯಕತೆ ಇರುವುದನ್ನೂ ಅವುಗಳು ಅರಹುತ್ತವೆ.

ಕಾಡಿದ ಲೋಕಸುಂದರಿಯರು

10ನೇ ಪುಟದಿಂದ...

ಬೆಂಗಳೂರಿನಲ್ಲಿ ಪ್ರತಿಭಟನೆಯ ಕಾವು ಏರುತ್ತಿದ್ದಂತೆ ವಿಶ್ವ ಸುಂದರಿ ಸಂಘಟನೆಯ ಮುಖ್ಯಸ್ಥರು ಗಾಬರಿಯಾದರು. ಆದರೆ ಪಟೇಲರು ಇದ್ಯಾವುದಕ್ಕೂ ಜಗ್ಗಲಿಲ್ಲ. 'ದ್ರೌಪದಿಯ ವಸ್ತ್ರಾಪಹರಣವಾದಾಗ, ಸೀತೆಯನ್ನು ರಾವಣ ಅಪಹರಿಸಿದಾಗ ನಿಮ್ಮ ಸಂಸ್ಕೃತಿ ಎಲ್ಲಿ ಅಡಗಿತ್ತು' ಎಂದು ಕೆಣಕಿದರು.

ಸಚಿವೆ ಲೀಲಾದೇವಿ ಆರ್. ಪ್ರಸಾದ್, 'ವಿಶ್ವ ಸುಂದರಿ ಸ್ಪರ್ಧೆ ಅಶ್ಲೀಲ ಎನ್ನುವವರು ಬೇಲೂರು ಶಿಲಾಬಾಲಿಕೆಗೆ ಉಡುಪು ತೊಡಿಸಿ'ಎಂದು ಸವಾಲು ಹಾಕಿದರು. 'ಈ ಸ್ಪರ್ಧೆಯನ್ನು ನಾವು ನಡೆಸದಿದ್ದರೆ, ಅಂತರರಾಷ್ಟ್ರೀಯ ಮಟ್ಟದ ಸಮಾವೇಶಗಳನ್ನು ನಡೆಸುವ ಸಾಮರ್ಥ್ಯ ಭಾರತಕ್ಕೆ ಇಲ್ಲ ಎಂಬ ಸಂದೇಶ ರವಾನೆಯಾಗುತ್ತದೆ' ಎಂದು ಅಮಿತಾಬ್ ಬಚ್ಚನ್ ಆತಂಕ ವ್ಯಕ್ತಪಡಿಸಿದರು.

ಈ ನಡುವೆ ಪಟೇಲರು ದೆಹಲಿಯಲ್ಲಿ ಟಿ.ವಿ. ಸಂದರ್ಶನದಲ್ಲಿ 'ನನಗೆ ಮದಿರೆ ಮತ್ತು ಮಾನಿನಿಯರು ಇಷ್ಟ' ಎಂದು ಹೇಳಿಬಿಟ್ಟರು. ಅದು ದೇಶದಾದ್ಯಂತ ವಿವಾದವನ್ನು ಸೃಷ್ಟಿಸಿತು. ಪ್ರತಿಭಟನೆಗಳಿಂದ ನಿರ್ಮಾಣವಾಗಿದ್ದ ಉದ್ರಿಕ್ತ ಸ್ಥಿತಿ ರೋಮಾಂಚಕಕಾರಿ ತಿರುವು ಪಡೆಯಿತು. ಅಮಿತಾಬ್ ಬಚ್ಚನ್, ವರನಟ ರಾಜ್‌ಕುಮಾರ್ ನಿವಾಸಕ್ಕೆ ತೆರಳಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಅದನ್ನು ರಾಜ್‌ಕುಮಾರ್ ನಯವಾಗಿಯೇ ತಿರಸ್ಕರಿಸಿದರು.

ಬೃಹತ್ ವೇದಿಕೆ ನಿರ್ಮಾಣವಾಗುತ್ತಿದ್ದ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಸ್ಪರ್ಧೆಗೆ ಮೂರು ವಾರ ಇರುವಾಗ ಒಂದು ರಾತ್ರಿ ಕಿಡಿಗೇಡಿಗಳು ಸ್ಫೋಟಕಗಳನ್ನು ಸಿಡಿಸಿದರು. ಮಧುರೈನ ಟೈಲರ್ ಸುರೇಶ್ ಕುಮಾರ್ ಮನ ನೊಂದು ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಸ್ಪರ್ಧೆ ಸಂದರ್ಭದಲ್ಲಿ ಸ್ಟೇಡಿಯಂ ಮೇಲೆ ಬಾಂಬ್ ದಾಳಿಯಾಗಬಹುದು ಎಂದು ಗುಪ್ತಚರ ಸಂಸ್ಥೆಗಳು ವರದಿ ಸಲ್ಲಿಸಿದವು. ಸುಂದರಿಯರ ವಾಸ್ತವ್ಯಕ್ಕೆ ನಿಗದಿಯಾಗಿದ್ದ ವಿಂಡ್ಸರ್ ಮ್ಯಾನರ್ ಹೋಟೆಲ್ಲಿಗೆ ಮತ್ತು ಸ್ಟೇಡಿಯಂಗೆ ಪೊಲೀಸ್ ಕಾವಲು ಹಾಕಲಾಯಿತು.

ಸುಮಾರು 88 ದೇಶಗಳ ಸೌಂದರ್ಯ ರಾಣಿಯರು ಶೀಷೆಲ್ಸ್ ದ್ವೀಪದಲ್ಲಿ ಈಜುಡುಗೆ ಸೌಂದರ್ಯದ ಸ್ಪರ್ಧೆ ಪೂರೈಸಿಕೊಂಡು ಭಾರತಕ್ಕೆ ಬರುವ ಕಾರ್ಯಕ್ರಮ ನಿಗದಿಯಾಯಿತು. ಶೀಷೆಲ್ಸ್‌ಗೆ ಬೆಂಗಳೂರಿನ ಕೆಲವು ಪತ್ರಕರ್ತರು ಮತ್ತು ಅಧಿಕಾರಿಗಳು ತೆರಳಬೇಕಿತ್ತು. ಅವರು ತರಾತುರಿಯಲ್ಲಿ ಪಾಸ್‌ಪೋರ್ಟ್ ಸಿದ್ಧಪಡಿಸಿಕೊಂಡು ವಿಮಾನ ಪ್ರಯಾಣಕ್ಕೆ ತುದಿಗಾಲ ಮೇಲೆ ನಿಂತಿದ್ದರು. ಆದರೆ ಬೆಂಗಳೂರಿನ ಉದ್ರಿಕ್ತ ಸ್ಥಿತಿ ಹಿನ್ನೆಲೆಯಲ್ಲಿ ಸಂಘಟಕರು ಅವರ ವಿಮಾನದ ಟಿಕೆಟ್ ರದ್ದುಪಡಿಸಿ, ಹೊರಟು ನಿಂತವರಿಗೆ ನಿರಾಸೆ ಉಂಟುಮಾಡಿದರು.

ಸ್ಪರ್ಧೆಗೆ 11 ದಿನಗಳು ಇರುವಾಗ ಸೌಂದರ್ಯ ರಾಣಿಯರು ಪೊಲೀಸ್ ಸರ್ಪಗಾವಲಿನಲ್ಲಿ ವಿಮಾನ ನಿಲ್ದಾಣದಿಂದ ವಿಂಡ್ಸರ್ ಮ್ಯಾನರ್ ಹೋಟೆಲ್ಲಿಗೆ ಆಗಮಿಸಿದರು. ಅವರಿಗೆ ತಿಲಕವಿಟ್ಟು ಆರತಿಯೆತ್ತಿ ಸ್ವಾಗತಿಸಲಾಯಿತು.

ದೀಪಾವಳಿ ವಿಶೇಷ ಕಾರ್ಯಕ್ರಮದ ಮೂಲಕ ವಿದೇಶಿ ಸುಂದರಿಯರಿಗೆ ಭಾರತೀಯ ಪರಂಪರೆಯನ್ನು ಪರಿಚಯಿಸಲಾಯಿತು. 'ಮಿಸ್ ಫೋಟೋಜೆನಿಕ್', 'ಮಿಸ್ ಪರ್ಸನಾಲಿಟಿ' ಮುಂತಾದ ಪೂರ್ವಭಾವಿ ಈವೆಂಟುಗಳು ರೆಸಾರ್ಟ್ ಮತ್ತಿತರ ತಾಣಗಳಲ್ಲಿ ನಡೆಯತೊಡಗಿದವು. ದತ್ತಿ ನಿಧಿ ಸಂಗ್ರಹದ ನೆಪದಲ್ಲಿ ದುಬಾರಿ ಬೆಲೆಯ ಟಿಕೆಟ್‌ಗಳನ್ನು ನಿಗದಿಪಡಿಸಲಾಗಿತ್ತು. ಬೆಂಗಳೂರಿನ ಗಣ್ಯರು, ಉದ್ಯಮಿಗಳು ಮತ್ತು ಶ್ರೀಮಂತರು ತಮ್ಮ ಮನೆಗಳಿಂದ ಏಕಾಏಕಿ ಕಣ್ಮರೆಯಾಗಿ ಈ ತಾಣಗಳಲ್ಲಿ ತರಹೇವಾರಿ ಪೋಷಾಕುಗಳಲ್ಲಿ ಕಾಣಿಸಿಕೊಂಡರು.

ಬೆಂಡು-ಬತ್ತಾಸು, ಜಿಲೇಬಿ-ಮೈಸೂರು ಪಾಕ್ ಅಂಗಡಿಗಳು; ಗಿರಗಿರನೆ ತಿರುಗುವ ತೊಟ್ಟಿಲುಗಳೊಂದಿಗೆ ಜಾತ್ರೆಗಳನ್ನು ಹೋಲುವ ಕಾರ್ನಿವಲ್ ಕಾರ್ಯಕ್ರಮದ ಟಿಕೆಟ್ಟಿಗೆ ಭಾರಿ ಬೇಡಿಕೆ ಉಂಟಾಗಿತ್ತು. ಯಾವುದಾದರೂ ಒಂದು ದೇಶದ ಸುಂದರಿಯೊಂದಿಗೆ ರಾತ್ರಿ ಔತಣ ನಡೆಸುವ ಚಾರಿಟಿ ಡಿನ್ನರ್ ಕಾರ್ಯಕ್ರಮವಂತೂ ಆಕರ್ಷಕವಾಗಿತ್ತು. ಆದರೆ ಇದು ವಿವಾದವನ್ನು ಸೃಷ್ಟಿಸಿತು. ಆಗ ಅತಿಥಿಗಳು ತಮ್ಮ ಪತ್ನಿಯರೊಂದಿಗೆ ಭಾಗವಹಿಸುವಂತೆ ತಾಕೀತು ಮಾಡಲಾಯಿತು. ಆದರೆ ಅವರು ನಿಜವಾಗಿಯೂ ಅವರ ಪತ್ನಿಯರೇ ಎಂದು ಖಚಿತಪಡಿಸಿಕೊಳ್ಳುವ ವ್ಯವಸ್ಥೆ ಇರಲಿಲ್ಲ. ಸ್ಪರ್ಧೆಯ ದಿನ ಸಮೀಪಿಸುತ್ತಿದ್ದಂತೆ ಉನ್ಮಾದದ ಸ್ಥಿತಿ ನಿರ್ಮಾಣವಾಗತೊಡಗಿತು.

ಕೊನೆಗೂ ಸ್ಪರ್ಧೆ ಬಂದೇ ಬಿಟ್ಟಿತು. ಸುಪ್ರೀಂ ಕೋರ್ಟ್ ಕೂಡ ಹಸಿರು ನಿಶಾನೆ ತೋರಿತು. ಪೊಲೀಸರ ಸರ್ಪಗಾವಲಿನಲ್ಲಿ ಚಿನ್ನಸ್ವಾಮಿ ಸ್ಟೇಡಿಯಂ ಏಳು ಸುತ್ತಿನ ಕೋಟೆಯಾಗಿತ್ತು. 10 ಸಾವಿರ ಪೊಲೀಸರು ಸುತ್ತುವರಿದಿದ್ದರು. 1600 ಪ್ರತಿಭಟನಾಕಾರರನ್ನು ಬಂಧಿಸಲಾಗಿತ್ತು. ಚಿನ್ನಸ್ವಾಮಿ ಸ್ಟೇಡಿಯಮ್ಮಿನ ಬೃಹತ್ ವೇದಿಕೆಯಲ್ಲಿ ಕಣ್ಣು ಕೋರೈಸುವ ಬಣ್ಣ ಬಣ್ಣದ ಬೆಳಕಿನಲ್ಲಿ ಸುಂದರಿಯರ ಮೆರವಣಿಗೆಯೊಂದಿಗೆ ರಾತ್ರಿ ಗಂಧರ್ವ ಲೋಕವೇ ಸೃಷ್ಟಿಯಾಗಿತ್ತು. ಕೂಚುಪುಡಿ, ಭರತನಾಟ್ಯ, ಮೋಹಿನಿಯಾಟ್ಟಂ, ಯಕ್ಷಗಾನ, ಕಳರಿಪಯಟ್, ನಾದಸ್ವರ, ಪಂಚವಾದ್ಯ ಕಲಾ ಪ್ರಕಾರಗಳು ಮತ್ತು ಮಲ್ಲಿಕಾ ಸಾರಾಭಾಯ್, ಪ್ರಭುದೇವ್, ಜೂಹಿ ಚಾವ್ಲಾ, ಪೂಜಾ ಭಾತ್ರಾ, ಭಾನುಪ್ರಿಯಾ ಮತ್ತು ಶೋಭನಾ ಅವರ ನೃತ್ಯ ರೂಪಕಗಳು ಭಾರತೀಯ ಸಂಸ್ಕೃತಿಯನ್ನು ಬಿಂಬಿಸಿದವು.

'ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ವೈವಿಧ್ಯಮಯ ಭಾರತೀಯ ಸಂಸ್ಕೃತಿಯ ದಿಗ್ದರ್ಶನವನ್ನು ಪ್ರಪಂಚದ ಎರಡೂವರೆ ಶತಕೋಟಿ ಟಿ.ವಿ. ವೀಕ್ಷಕರಿಗೆ ನೀಡುತ್ತಿದ್ದೇವೆ' ಎಂದು ಸಂಘಟಕರು ಪ್ರಕಟಿಸಿದರು. ದೇಶ ವಿದೇಶಗಳ ಕಾರ್ಪೊರೇಟ್, ಜಾಹೀರಾತು ಮತ್ತು ಫ್ಯಾಶನ್ ಲೋಕದ ಕುಳಗಳು, ಗಣ್ಯ ವ್ಯಕ್ತಿಗಳು ಮತ್ತು ಅಂತರರಾಷ್ಟ್ರೀಯ ಮಾಧ್ಯಮ ಪ್ರತಿನಿಧಿಗಳಿಂದ ಸಭಾಂಗಣ ತುಂಬಿತ್ತು. ಮಾಜಿ ವಿಶ್ವ ಸುಂದರಿ ಐಶ್ವರ್ಯಾ ರೈ, ಪರಮೇಶ್ವರ್ ಗೋದ್ರೇಜ್, ಕ್ರಿಕೆಟ್ಟಿಗ ಸನತ್ ಜಯಸೂರ್ಯ, ನಟ ಅಮೀರ್ ಖಾನ್ ಸೇರಿದಂತೆ 11 ತೀರ್ಪುಗಾರರ ಮಂಡಳಿಯ ತೀರ್ಪಿನ ಅನ್ವಯ ಗ್ರೀಸ್‌ನ ಹದಿನೆಂಟರ ತರುಣಿ ಸರ್ವಾಂಗ ಸುಂದರಿ, ಸರ್ವಗುಣ ಸಂಪನ್ನೆ ಐರಿನ್ ಸ್ಕ್ಲಿವಾ ಅವರ ಮುಡಿಗೆ ವಿಶ್ವ ಸುಂದರಿ ಕಿರೀಟವನ್ನು ತೊಡಿಸಲಾಯಿತು.



ವಿಶ್ವ ಸುಂದರಿ ಸ್ಪರ್ಧೆಯ ಆಯೋಜನೆಗೆ ಬೆನ್ನುಲುಬಾಗಿ ನಿಂತಿದ್ದ ಜೆ.ಎಚ್.ಪಟೇಲ್ ಹಾಗೂ ಅಮಿತಾಬ್ ಬಚ್ಚನ್

'ಅಹಿತಕರ ಘಟನೆಗಳಿಲ್ಲದೆ ಬೆಂಗಳೂರಿನಲ್ಲಿ ವಿಶ್ವ ಸುಂದರಿ ಸ್ಪರ್ಧೆ ಸುಸೂತ್ರವಾಗಿ ನಡೆಯಿತು' ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ನಿಟ್ಟುಸಿರು ಬಿಟ್ಟವು. ಮಾರನೆಯ ದಿನ ಬೆಳಿಗ್ಗೆ ನೂತನ ವಿಶ್ವ ಸುಂದರಿಯ ಪತ್ರಿಕಾಗೋಷ್ಠಿ ನಿಗದಿಯಾಯಿತು. ಸಂಘಟಕರಿಗೆ ಕೊನೇ ಗಳಿಗೆಯಲ್ಲಿ ಒಂದು ವಿಶೇಷ ಪ್ಲ್ಯಾನ್ ಹೊಳೆಯಿತು. ಅದರ ಪ್ರಕಾರ ವಿಂಡ್ಸರ್ ಮ್ಯಾನರ್ ಹೋಟೆಲ್ಲಿನ ಮಹಿಳಾ ಸಿಬ್ಬಂದಿಯೊಬ್ಬರು ತರಾತುರಿಯಲ್ಲಿ ತಮ್ಮ ಮನೆಯಿಂದ ಕಾಂಜೀವರಂ ರೇಷ್ಮೆ ಸೀರೆಯನ್ನು ತಂದು ವಿಶ್ವ ಸುಂದರಿಗೆ ಸಡಿಲ ಸಡಿಲವಾಗಿ ಉಡಿಸಿ, ಇಷ್ಟಗಲ ಕುಂಕುಮವನ್ನು ಇಟ್ಟು ಪತ್ರಿಕಾಗೋಷ್ಠಿಗೆ ಕರೆದುಕೊಂಡು ಬಂದರು.


ಲೋಕ ಸುಂದರಿ ಸಾಕ್ಷಾತ್ ಗ್ರೀಕ್ ದೇವತೆಯಂತೆ ಕಂಗೊಳಿಸುತ್ತಾ ವಿಶ್ವ ಮನ್ನಣೆ ಪಡೆಯುವುದರ ಜೊತೆಗೆ ಭಾರತೀಯ ಸಂಸ್ಕೃತಿ ವಕ್ತಾರರ ಮನಸ್ಸನ್ನೂ ತಣಿಸಿದರು. ಅಂದು ಸಂಜೆ ಸೌಂದರ್ಯ ರಾಣಿಯರನ್ನು ಬೆಂಗಳೂರು ಒಲ್ಲದ ಮನಸ್ಸಿನಿಂದ ಬೀಳ್ಕೊಟ್ಟಿತು. ಭ್ರಾಮಕ ಲೋಕವನ್ನು ಸೃಷ್ಟಿಸಿದ್ದ ವಿಶ್ವ ಸುಂದರಿ ಸ್ಪರ್ಧೆಗೆ ತೆರೆ ಬಿದ್ದಿತು. ಇದರಲ್ಲಿ ತೊಡಗಿಕೊಂಡಿದ್ದ ಪತ್ರಕರ್ತರು, ಅಧಿಕಾರಿಗಳು ಮತ್ತಿತರರಿಗೆ ಸಹಜಸ್ಥಿತಿಗೆ ಮರಳಲು ಕೆಲವು ದಿನಗಳೇ ಬೇಕಾದವು. 21ನೇ ಶತಮಾನದ ಆರಂಭದಲ್ಲಿ ಬೆಂಗಳೂರು ಒಂದು ಜಾಗತಿಕ ಬ್ರ್ಯಾಂಡ್ ಆಗಲು ಈ ಸ್ಪರ್ಧೆ ಮುನ್ನುಡಿಯನ್ನೂ ಬರೆಯಿತು.

ಮೊದಲ ಓದು

ಮಿಡಿಯುವ ಸಂಬಂಧಗಳ ತಂತು

ಚಡಗ ಪ್ರಶಸ್ತಿಗೂ ಪಾತ್ರವಾಗಿರುವ ದವನ ಸೊರಬ ಅವರ 'ಪರವಶ' ಕಾದಂಬರಿ ಮಲೆನಾಡಿನ ಸಂಸ್ಕೃತಿಯನ್ನು ಕಟ್ಟಿಕೊಡುವ ವಿಶಿಷ್ಟ ಕೃತಿ. ಅಲ್ಲಿನ ಬದುಕಿನ ವಾಸ್ತವಿಕ ಬಿಂಬಗಳೂ ಕಾದಂಬರಿಯಲ್ಲಿ ಒಡಮೂಡಿವೆ. ಈ ಬೃಹತ್ ಕಥಾನಕದಲ್ಲಿ ಸುಮಾರು 60 ಪಾತ್ರಗಳು ಬಂದು ಹೋದರೂ ಕೇಂದ್ರ ಪ್ರತಿಮೆ ಮಾತ್ರ ಜುಮಕಿ ಜಲಪಾತವೇ ಆಗಿದೆ. ಮೂರು ಮನೆತನಗಳ ಕಥೆ ಶಿವಮೊಗ್ಗ ಜಿಲ್ಲೆಯ ಸಾಗರ, ತಾಳಗುಪ್ಪ ಮತ್ತು ಜೋಗದ ಸುತ್ತ ಬೆಳೆಯುತ್ತಾ ಥಾಯ್ಲೆಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾವರೆಗೆ ವಿಸ್ತರಿಸುತ್ತದೆ. ಜೇಡವೊಂದು ಬಲೆ ಹೆಣೆಯುವಂತೆ ಈ ಕಥಾನಕದಲ್ಲಿ ಸಂಬಂಧಗಳ ಜಾಲವನ್ನೇ ಸೃಷ್ಟಿಸಿದ್ದಾರೆ ಲೇಖಕಿ. ಪಾತ್ರಗಳ ಸೃಷ್ಟಿಯಲ್ಲಿ ದವನ ಅವರು ವಹಿಸಿದ ಮುತುವರ್ಜಿ ಅನನ್ಯವಾದುದು. ಪ್ರಾದೇಶಿಕ ಭಾಷೆಯನ್ನು ತುಂಬಾ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ.

ಕಾದಂಬರಿಯ ವಸ್ತುವಿನ ಕುರಿತು ಮುನ್ನುಡಿಯಲ್ಲಿ ಚರ್ಚಿಸಿರುವ ಓ.ಎಲ್. ನಾಗಭೂಷಣಸ್ವಾಮಿ ಅವರು, 'ಇಲ್ಲಿ ಎಲ್ಲರೂ ಪರವಶರೇ. ಬೇರೆಯವರ ಇಚ್ಛೆಗೋ ಆಜ್ಞೆಗೋ ವಶವಾದವರು. ಇಲ್ಲವೆ ತಮ್ಮದೇ ಆದರ್ಶಕ್ಕೆ ವಶವಾದವರು. ಇಡೀ ಬದುಕಿನ ಸಮತೋಲನವನ್ನು ಕಾಪಾಡುತ್ತಿರುವ ಉಡಿದಾರದಷ್ಟು ಸೂಕ್ಷ್ಮ ತಂತು ಎಲ್ಲರನ್ನೂ ಕಟ್ಟಿ, ತೂಗಿ, ಕಳಚಿ ಆಡಿಸುತ್ತಿದೆ' ಎಂದಿದ್ದಾರೆ. ವಿಷಯಗಳ ಆಳಕ್ಕೆ ಇಳಿದು ವಿವರ ಸಂಗ್ರಹಿಸುವ ತಾಳ್ಮೆಯಿರುವ ದವನ ಅವರಿಂದ ಇಂತಹ ಇನ್ನಷ್ಟು ಹೊಸತನದ ಕಾದಂಬರಿಗಳನ್ನು ನಿರೀಕ್ಷಿಸಬಹುದು.



ಪರವಶ
ಲೇ: ದವನ ಸೊರಬ
ಪ್ರ: ಸಾಹಿತ್ಯ ನಂದನ
ಸಂ: 080-23354619
ಪು: 424 ₹350

ಕೊರತೆ ತುಂಬುವ ರಂಗ ವಿಮರ್ಶೆ


ಕಥೆಗಾರ್ತಿ, ರಂಗಾಸಕ್ತ ಲೇಖಕಿ ವೈ.ಕೆ. ಸಂಧ್ಯಾ ಶರ್ಮ ಅವರು ಬರೆದ 57 ನಾಟಕಗಳ ವಿಮರ್ಶಾ ಸಂಕಲನವೇ ಈ ಕೃತಿ. ಅಂದಹಾಗೆ ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿದ್ದ ರಂಗ ವಿಮರ್ಶೆ ಲೇಖನಗಳ ಗುಚ್ಛ ಕೂಡ ಈ ಪುಸ್ತಕದಲ್ಲಿದೆ.

ಇಲ್ಲಿ ವಿಮರ್ಶೆಗೊಳಗಾದ ಎಲ್ಲ ನಾಟಕಗಳೂ ಮಹತ್ವದ್ದೇ ಆಗಿವೆ.

ಕನ್ನಡದಲ್ಲಿ ನಾಟಕ ಪ್ರಯೋಗಗಳ ವಿಮರ್ಶೆ ಇನ್ನೂ ಅಷ್ಟಾಗಿ ಬೆಳೆದಿಲ್ಲ. ಈ ಕೊರತೆಯನ್ನು ತುಂಬುವ ಪ್ರಯತ್ನದಲ್ಲಿರುವ ಸಂಧ್ಯಾ ಅವರು, ರಂಗಭೂಮಿಯ ಕುರಿತು ತಮಗಿರುವ ಆಳವಾದ ಆಸಕ್ತಿಯಿಂದ ಪ್ರಯೋಗಗಳನ್ನು ತುಂಬಾ ಸೊಗಸಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಪ್ರತೀ ನಾಟಕದ ಸನ್ನಿವೇಶದ ಸೂಕ್ಷ್ಮತೆಯನ್ನು ವಿವರಿಸಿರುವ ಲೇಖಕಿ ಪಾತ್ರಧಾರಿಗಳ ಹೆಸರು ಉಲ್ಲೇಖಿಸಿಯೇ ಅಭಿಪ್ರಾಯ ಮಂಡಿಸಿದ್ದಾರೆ. ಪ್ರದರ್ಶನಗಳಲ್ಲಿ ಸುಧಾರಣೆ ಕಾಣಬೇಕಾದ ಅಂಶಗಳನ್ನು ಸಲಹೆಯ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಹಾಗಾಗಿ ರಂಗಕರ್ತೃಗಳು, ಕಲಾವಿದರು ಯಾರಿಗೂ ಚುಚ್ಚದ ರೀತಿ ಬರಹದಲ್ಲಿ ಸಮತೋಲನ ಕಾಯ್ದುಕೊಂಡಿದ್ದಾರೆ ಲೇಖಕಿ. ಹಾಗಂತ ದೋಷಗಳ ಕುರಿತು ಅವರೇನೂ ಮೌನ ವಹಿಸಿಲ್ಲ. ಕೇವಲ ಎರಡೇ ಪಾತ್ರಗಳಲ್ಲಿ ನಡೆಯುವ 'ಅಕ್ಷಯಾಂಬರ'ದಿಂದ ಹಿಡಿದು ಹತ್ತಾರು ಪಾತ್ರಗಳ ಜನಪದ ಕಥಾನಕ 'ಸಿರಿ'ಯವರೆಗೆ ಲೇಖಕಿ ಸಮಾನ ದೃಷ್ಟಿಯಿಟ್ಟು ವಿಮರ್ಶಿಸಿದ್ದಾರೆ. ಹವ್ಯಾಸಿಗಳಿಂದ ಹಿಡಿದು ವೃತ್ತಿಪರ ತಂಡಗಳ ಪ್ರದರ್ಶನವನ್ನೂ ವಿಮರ್ಶೆಯ ಒರೆಗೆ ಹಚ್ಚಿದ್ದಾರೆ. ಅಲ್ಲಲ್ಲಿ ನಾಟಕದ ಕಥೆಯ ತರ್ಕದ ಚರ್ಚೆ ನಡೆಸಿದ್ದಾರೆ.

ನಾಟಕ ವಿಮರ್ಶಿಸುವುದು ಸಮಯ ಹಾಗೂ ತಾಳ್ಮೆ ಬೇಡುವ ಕೆಲಸ. ಆದರೆ, ಸಂಧ್ಯಾ ಅವರು ಪದಗಳ ಇತಿಮಿತಿಯಲ್ಲಿ, ಸಮಯದ ಚೌಕಟ್ಟಿನಲ್ಲಿ ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಇದು ರಂಗ ಅಭ್ಯಾಸಿಗಳಿಗೆ, ರಂಗ ತಂಡಗಳಿಗೆ ಸುಧಾರಣೆಯ ಮಾರ್ಗದರ್ಶಿಯೂ ಹೌದು. ಸಮಕಾಲೀನ ಕನ್ನಡದ ರಂಗಭೂಮಿ ಹಾದು ಬಂದಿರುವ ದಾರಿಯ ದಾಖಲೀಕರಣವಾಗಿಯೂ ಈ ಕೃತಿಯನ್ನು ನೋಡಬಹುದು.




ರಂಗಾಂತರಂಗ (ನಾಟಕ ವಿಮರ್ಶೆಗಳು)
ಲೇ: ವೈ.ಕೆ. ಸಂಧ್ಯಾ ಶರ್ಮ
ಪ್ರ: ಭಾರತೀ ಪ್ರಕಾಶನ
ಸಂ: 9448413188
ಪು: 228 ₹200

ಉಪಯುಕ್ತ ಮಾಹಿತಿಗಳ ಆಕರ ಗ್ರಂಥ

ಎಸ್. ಶ್ರೀಕಂಠಶಾಸ್ತ್ರೀ ಅವರು ನಮ್ಮ ದೇಶ ಕಂಡಿರುವ ಶ್ರೇಷ್ಠ ಇತಿಹಾಸಕಾರರಲ್ಲಿ ಪ್ರಮುಖರು. ಅವರ ಸಂಶೋಧನ ಪ್ರಬಂಧಗಳು, ಗ್ರಂಥಗಳು ಇಂದಿಗೂ ನಮ್ಮ ಸಂಸ್ಕೃತಿಯನ್ನು, ಇತಿಹಾಸವನ್ನು ಅರಿಯಲು ನೆರವಾಗುತ್ತಿವೆ. ಅವರ 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ'ಯ ಕನ್ನಡ ಅನುವಾದವೇ 'ಕರ್ನಾಟಕ ಇತಿಹಾಸದ ಆಕರಗಳು.' ಇಂಗ್ಲಿಷ್‌ನಲ್ಲಿ ಮೊದಲಿಗೆ ಈ ಕೃತಿ ಪ್ರಕಟವಾದದ್ದು 1940ರಲ್ಲಿ. ಈಗ ಈ ಕೃತಿಯ ಲಿಪ್ಯಂತರ ಮತ್ತು ಅನುವಾದವನ್ನು ಎಚ್.ಎಸ್. ಗೋಪಾಲರಾವ್ ಅವರು ಮಾಡಿದ್ದಾರೆ.

ಆರ್.ಸಿ. ಮಜುಂದಾರ್ ಅವರ ಮಾತುಗಳು ಈ ಕೃತಿಯನ್ನು ಚೆನ್ನಾಗಿ ಪರಿಚಯಿಸಿವೆ: 'ಇದು ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲಾ ಆಕರಗಳ ಸಂಗ್ರಹಿತ ಉಲ್ಲೇಖವಾಗಿದ್ದು, ಬಹಳ ಉಪಯುಕ್ತ ಮಾಹಿತಿ ಮತ್ತು ಆಸಕ್ತಿದಾಯಕ ಗ್ರಂಥವಾಗಿದೆ. ಇದು ಕರ್ನಾಟಕ ಇತಿಹಾಸದ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ' ಈ ವಿಷಯದಲ್ಲಿನ ಸಂಶೋಧನೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸುತ್ತದೆ. ಸಂಗ್ರಹಿತ ಉಲ್ಲೇಖಗಳನ್ನು ಬಹಳ ಎಚ್ಚರಿಕೆಯಿಂದ ಆಯ್ಕೆ ಮಾಡಿ, ವಿಮರ್ಶಾತ್ಮಕವಾಗಿ ಸಂಪಾದಿಸಲಾಗಿದೆ.'

ಸುದೀರ್ಘವಾದ 26 ಪುಟಗಳ ಪೀಠಿಕೆಯಲ್ಲಿ ಕರ್ನಾಟಕದ ಭೌಗೋಳಿಕ ಪರಿಚಯ, ರಾಜಕೀಯ ಇತಿಹಾಸ, ಸಾಹಿತ್ಯ ಮತ್ತು ಕುಶಲ ಕಲೆಗಳು, ಧರ್ಮ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಜೊತೆಗೆ ರಾಜ್ಯವನ್ನಾಳಿದ ವಂಶಾವಳಿಗಳ ಪಟ್ಟಿ, ಪ್ರಮುಖ ನಾಣ್ಯಗಳ ಮಾದರಿಯ ವಿವರಗಳಿದ್ದು ಇವು ಸಾಮಾನ್ಯ ಓದುಗನಿಗೂ ಆಸಕ್ತಿ ಹುಟ್ಟಿಸುತ್ತವೆ. ಕನ್ನಡ ಮಾತ್ರವಲ್ಲದೆ, ತೆಲುಗು, ತಮಿಳು, ಸಂಸ್ಕೃತ, ಗ್ರೀಕ್, ಚೀನಿ, ಪರ್ಷಿಯನ್ ಮತ್ತು ಮರಾಠೀ ಆಕರಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕನ್ನಡದ್ದೇ ಸ್ವತಂತ್ರ ಕೃತಿ ಎನ್ನುವಂತೆ ಗೋಪಾಲರಾವ್ ಅವರ ಅನುವಾದವಿದೆ.




ಕರ್ನಾಟಕ ಇತಿಹಾಸದ ಆಕರಗಳು–ಸಂಪುಟ 1
ಲೇ: ಎಸ್.ಶ್ರೀಕಂಠಶಾಸ್ತ್ರೀ
ಅ:ಎಚ್.ಎಸ್. ಗೋಪಾಲ ರಾವ್
ಪ್ರ: ದಿವ್ಯ ಪ್ರಕಾಶನ
ಸಂ: 9945002444
ಪು: 394 ₹450

ಕಪ್ಪುಮಣ್ಣಿನಲ್ಲಿ ಅರಳಿದ ರೈತ ಕಥೆ

ಕಸುವುಳ್ಳ ಕಪ್ಪುಮಣ್ಣಿನ ಹೊಲದಲ್ಲಿ ದುಡಿದುಡಿದು ಅಲ್ಲಿನ ಮಣ್ಣಿನಲ್ಲಿಯೇ ಸಾವಯವವಾಗಿ ಬೆರೆತು ಹೋಗಬಹುದಾಗಿದ್ದ ರೈತನೊಬ್ಬನ ಬದುಕಿನ ಹಾಡು ಈ 'ಹಸಿರು ಟಾವೆಲ್'. ಸೂಡಿ ಗ್ರಾಮದ ಕೂಡ್ಲೆಪ್ಪ ಗುಡಿಮನಿ ಎಂಬ ಕೃಷಿಋಷಿಯ ಜೀವನಗಾಥೆ ಮೂಲಕ ಬಯಲುಸೀಮೆಯ ಜನಬದುಕಿನ ಕಥನವನ್ನೂ ಕಟ್ಟಿಕೊಟ್ಟಿದ್ದಾರೆ ಕಥೆಗಾರ ಟಿ.ಎಸ್.ಗೊರವರ. ಕಾಡ ಕುಸುಮದಂತೆ ಅರಳಿ, ಸುಗಂಧ ಬೀರಿ ಅಲ್ಲಿಯೇ ಕಳೆದುಹೋಗಬಹುದಾಗಿದ್ದ ಕಥೆಯನ್ನು ಹೆಕ್ಕಿತಂದು, ಓದುಗರು ಅದರ ಪರಿಮಳವನ್ನು ಆಸ್ವಾದಿಸುವಂತೆ ಮಾಡಿರುವುದು ಈ ಕೃತಿಯ ಹೆಗ್ಗಳಿಕೆ.

ಬಯಲುಸೀಮೆಯ ರೈತರದು ಅಲೆಗಳ ಅಬ್ಬರವಿಲ್ಲದೆ ಮಂದ್ರವಾಗಿ ಹರಿಯುವ ಹೊನಲಿನಂತಹ ಜೀವನ. ಮೇಟಿ ವಿದ್ಯೆಯೇ ಅವರ ಜೀವಾಳ. ಜಗಕೆಲ್ಲ ತಾವು ಅನ್ನದಾತರು ಎನ್ನುವ ಅಹಮಿಕೆ ಅಲ್ಲಿಲ್ಲ. ಎಲ್ಲರೊಳಗೊಂದಾಗಿ ಬದುಕು ಸಾಗಿಸುವ ವಿವೇಕ ತಾನೇ ತಾನಾಗಿ ಇಲ್ಲಿನ ರೈತರ ರಕ್ತದಲ್ಲಿ ಹರಿಯುತ್ತದೆ. ಅಂತಹ ರೈತರ ಪ್ರತಿನಿಧಿಯಾಗಿ ಕೂಡ್ಲೆಪ್ಪ ಅವರ ಕಥೆ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ. ಕಾವ್ಯಾತ್ಮಕ ಭಾಷೆಯಿಂದ ಕಥೆ ಸೀದಾ ಎದೆಯೊಳಗೆ ಇಳಿಯುತ್ತದೆ.

ಇದು ಕೇವಲ ಕೂಡ್ಲೆಪ್ಪ ಅವರ ವ್ಯಕ್ತಿಕಥೆಯಾಗಿರದೆ, ಆ ಭಾಗದ ರೈತರ ಹೋರಾಟ ಕಥನವೂ ಆಗಿದೆ. ಬಯಲುಸೀಮೆಯ ದುಡಿಮೆ, ಪ್ರೀತಿ, ಜಗಳ, ಬಾಂಧವ್ಯ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ. ಸಾರ್ವಜನಿಕ ಜೀವನಕ್ಕೆ ಕಾಲಿಡಲು ಕೂಡ್ಲೆಪ್ಪ ತೆಗೆದುಕೊಂಡ ಪ್ರತಿಜ್ಞೆ, ನರಗುಂದದ ರೈತ ಬಂಡಾಯ, ಲಂಕೇಶ್ ಪತ್ರಿಕೆ ಪ್ರಭಾವ, ಇದರಿಂದ ಅಲ್ಲಲ್ಲಿ ಹುಟ್ಟಿಕೊಂಡ ರೈತ ಸಂಘಗಳ ಪ್ರಾಬಲ್ಯ, ಸರ್ಕಾರಿ ಕಚೇರಿಗಳಲ್ಲಿ ಲಂಚಾವತಾರದ ಕುಣಿತ... ಹೀಗೆ ವಿವಿಧ ಅಧ್ಯಾಯಗಳಲ್ಲಿ ಕಥನ ಸಾಗುತ್ತದೆ. ಕೃತಿಯ ಮುಖಪುಟದಲ್ಲಿ ರೇಖೆಯಾಗಿ ಮೂಡಿಬಂದ ಕೂಡ್ಲೆಪ್ಪ ಹಸಿರು ಟಾವೆಲ್ ಹಾಕಿಕೊಂಡು ಕೊನೆಗೊಮ್ಮೆ ಇಡೀ ಕಥೆಯನ್ನು ಕಣ್ಣಲ್ಲೇ ಹರಿಬಿಡುತ್ತಾರೆ ಎನ್ನುವಂತೆ ಭಾಸವಾಗುತ್ತದೆ.



ಹಸಿರು ಟಾವೆಲ್
ರೈತನೊಬ್ಬನ ಜೀವನ ಕಥನ
ಲೇ: ಟಿ.ಎಸ್.ಗೊರವರ
ಪ್ರ: ಸಂಗಾತ ಪುಸ್ತಕ
ಸಂ: 9341757653
ಪು: 108 ₹120

ಸಮಾಜದ ಹುಣ್ಣಿಗೆ ಬೇಂದ್ರೆ ‘ರಂಗ ಕನ್ನಡಿ’

ಡಿ.ಎಸ್.ಚೌಗಲೆ

ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ರಚಿಸಿ ಆಡುವ ಕಾಲಘಟ್ಟದಲ್ಲಿ ಬೇಂದ್ರೆಯವರು ವರ್ತಮಾನೋತ್ತರ ನಾಟಕಗಳನ್ನು ರಚಿಸಿದ್ದು ವಿಶೇಷ. ‘ತಿರುಕರ ಪಿಡುಗು’ ನಾಟಕದ ರಚನಾ ಕಾಲ 1924. ‘ಉದ್ಧಾರ’ ನಾಟಕ ರಚನೆಯಾದುದು 1946ರಲ್ಲಿ. ವೃತ್ತಿರಂಗಭೂಮಿಯ ಪಠ್ಯ ಮತ್ತು ಪ್ರಯೋಗ ಪರಂಪರೆಯನ್ನು ಮುರಿದು ಚೆಲ್ಲಿ ಪ್ರಯೋಗಶೀಲ ರಂಗಪಠ್ಯವನ್ನು ಬೇಂದ್ರೆಯವರು ರಚಿಸಿದ್ದಾರೆ. ಅವರ ಚಿಂತನಾ ಶಕ್ತಿಯನ್ನು, ಸೃಜನಶೀಲ ಮನೋಧೋರಣೆಯನ್ನು ಉತ್ತುಂಗದಲ್ಲಿಟ್ಟು ನೋಡಬೇಕಾಗುತ್ತದೆ. ಭಾರತ ಭೌತಿಕವಾಗಿ ಬದಲಾಗಿದೆ. ಆದರೆ ಅಂತರಂಗದಿಂದ ಬದಲಾಗಿಲ್ಲ. ಅದಿನ್ನೂ ಪುರಾಣ ಮತವಾಗಿದೆಯೆಂಬುದನ್ನು ಇವೆರಡು ನಾಟಕಗಳು ಹೇಳುತ್ತವೆ. ಈ ಕೃತಿಗಳನ್ನು ಸಂಪಾದನೆ ಮಾಡಿ ಓದುಗರ ಕೈಗೆ ದೊರೆಯುವಂತೆ ಮಾಡಿದವರು ವಾಮನ ಬೇಂದ್ರೆಯವರು.

‘ತಿರುಕರ ಪಿಡುಗು’ ಏಕಾಂಕ ನಾಟಕ. ಅಂದಿನ ಕಾಂಗ್ರೆಸ್ ತನ್ನ ಚಟುವಟಿಕೆಗಳಿಗಾಗಿ ನಿಧಿ ಸಂಗ್ರಹಿಸುತ್ತಿತ್ತು (ಹಾಗೆಯೇ ಬಗೆಬಗೆಯ ತಿರುಕತ್ವಗಳಿದ್ದವು). ಈ ಘಟನೆ ಬೇಂದ್ರೆಯವರಿಗೆ ನಾಟಕ ರಚಿಸಲು ಪ್ರೇರಣೆಯಾಯಿತು. ಅಸಂಗತ ರೂಪದಲ್ಲಿ ಮನುಷ್ಯನ ಮನದ ವ್ಯಾಪಾರಗಳನ್ನು ಶೋಧಿಸುವ ಯತ್ನವನ್ನು ಬೇಂದ್ರೆಯವರು ಈ ನಾಟಕದಲ್ಲಿ ಮಾಡಿದರು. ಸಿರಿವಂತರು ಹೃದಯ ವೈಶಾಲ್ಯ ಬೆಳೆಸಿಕೊಳ್ಳಬೇಕು. ತಿರುಕುತನ ಕಳೆದು, ಅದರಲ್ಲಿ ತೊಡಗಿದವರ ಕೈಗೊಂದು ಉದ್ಯೋಗ ದೊರಕಬೇಕು. ಇದು ನಾಟಕದ ಆಶಯ. 1924ರಲ್ಲಿ ಬಿ.ಎಂ.ಶ್ರೀ ಅವರ ಎದುರು ಬೇಂದ್ರೆ ಈ ನಾಟಕವನ್ನು ಓದಿದ್ದರು. ಅಂದಿನ ಈ ನಾಟಕ ಪಠ್ಯದ ಅಭಿವಾಚನ ಪರಿಣಾಮಕಾರಿಯಾಗಿತ್ತು ಎಂದು ವಾಮನ ಬೇಂದ್ರೆ ವಿವರಿಸಿದ್ದಾರೆ.

> ಬೇಂದ್ರೆ ಅವರ ‘ತಿರುಕರ ಪಿಡುಗು’, ‘ಉದ್ಧಾರ’ ಎರಡೂ ಸ್ವಾತಂತ್ರ್ಯಪೂರ್ವದ ವರ್ತಮಾನೋತ್ತರ ನಾಟಕಗಳು. ಗಾಢ ಮೌಲಿಕ ಆಶಯದ ಈ ನಾಟಕಗಳು ಪಿಡುಗು ಕಳೆದುಕೊಳ್ಳುವ ಸಾಮಾಜಿಕ ಸ್ಥಿತ್ಯಂತರಕ್ಕಾಗಿ ಹಂಬಲಿಸುತ್ತವೆ.

ಇದೊಂದು ವೈಚಾರಿಕ ನಾಟಕ. ಇದರ ಆಶಯವು ನಿರಂತರ ಕಾಡುವಂಥದ್ದು. ತಿರುಕತನದ ಹಿನ್ನೆಲೆ, ಸ್ವರೂಪ ಬಹುವಿಧ. ಧರ್ಮ, ದೇವರು, ದೇಶಾಭಿಮಾನ, ಬಡತನ ಹೆಸರಿನ ಹಿನ್ನೆಲೆಯ ಅನಾಥ ಪ್ರಜ್ಞೆ-ತಿರುಕತ್ವಕ್ಕೆ ಎಳೆಸುತ್ತದೆ. ಬಹುದೊಡ್ಡ ಪ್ರಮಾಣದಲ್ಲಿ ದೇವರು, ಧರ್ಮ, ದೇಶವೆಂಬ ಪದಗಳು ಚಾಲ್ತಿಯಲ್ಲಿರುವ ಇಂದಿನ ಕಾಲದ ಮನೋಧೋರಣೆ ಸಹ ಈ ನಾಟಕದಲ್ಲಿ ಬಿಂಬಿತಗೊಂಡಿದೆ. ರಾಮ ಜನ್ಮಭೂಮಿಯಲ್ಲಿ ಮಂದಿರ ಕಟ್ಟಲು ಚಂದಾ ಎತ್ತುವ ಪ್ರಸಂಗಗಳು ನಮ್ಮ ನಡುವೆಯೇ ಇದೆಯಲ್ಲ?

ಎರಡು ಗಂಟೆ ಅವಧಿಯ ನಾಟಕದ ಕಥೆಯಲ್ಲಿರುವುದು ಬೆಳಿಗ್ಗೆ 7ರಿಂದ 10.30ರ ನಡುವಿನ ಸನ್ನಿವೇಶ. ಇಲ್ಲಿ ನಾಯಕ ನಿತ್ಯ ಬದುಕಿನಲ್ಲಿ ವೇಳಾಪಟ್ಟಿ ಪ್ರಕಾರ ನಡೆದುಕೊಳ್ಳುವವನು. ಆದರೆ ಬೆಳ್ಳಂಬೆಳಗಿನಿಂದ ಬುಡಬುಡಿಕೆ, ಜಂಗಮ, ಆಚಾರ್ಯ, ಬ್ರಾಹ್ಮಣ, ವಿಧವೆ, ದಾಸ, ವಾರದ ಹುಡುಗ, ದೇಶ ಸೇವಕ - ಹೀಗೆ ಬೇಡಲು ಬಂದವರು ಅವನ ವೇಳಾಪಟ್ಟಿಗೆ ಅಡಚಣೆ ಉಂಟುಮಾಡುತ್ತಾರೆ. ಈ ತಿರುಕತನಕ್ಕೆ ರೊಚ್ಚಿಗೆದ್ದ ನಾಯಕ ‘ಭಿಕ್ಷುಕೋತ್ಪಾದನೆ ಸಂಘ’ ಸ್ಥಾಪನೆ ಘೋಷಿಸುತ್ತಾನೆ.

‘ದಯವೇ ಧರ್ಮದ ಮೂಲವಯ್ಯಾ’, ‘ದಯೆ ಇರಲಿ ಸಕಲ ಜೀವ ಜಾತಿಗಳಲ್ಲಿ’ ಎಂಬ ಧರ್ಮಬೋಧನೆಯಿಂದ ದೇಶದಲ್ಲಿ ಬಡತನ ಬೆಳೆದಿದೆಯೇ ಹೊರತು ಬೇರೆ ಏನು ಲಾಭವಾಗಿಲ್ಲ. ದಾನದಿಂದ ಜನಾಂಗ ಬಡವಾಗುತ್ತದೆ ಮತ್ತು ದುಡಿತದಿಂದ ಈ ದೇಶ ಸಮೃದ್ಧವಾಗುತ್ತದೆ ಎಂಬುದು ಈ ನಾಟಕಕಾರರ ದರ್ಶನ’ ಎಂದು ವಾಮನ ಹೇಳಿದ್ದಾರೆ.



ದ.ರಾ. ಬೇಂದ್ರೆ ಅವರ ‘ಸಾಯೋ ಆಟ’ ನಾಟಕವನ್ನು ನಟನ ತಂಡ ಪ್ರದರ್ಶಿಸಿದಾಗ...

ಶರಣರು ಕಾಯಕ (ದುಡಿಮೆ) ಮತ್ತು ದಾಸೋಹಕ್ಕೆ ಮಹತ್ವ ನೀಡಿದವರು. ಈ ವಚನಗಳ ಸಾಲನ್ನೇ ಉದ್ಧರಿಸಿ ಈ ಧೋರಣೆಯ ಹಿಂದಿರುವ ಮಾನವ ಪ್ರೀತಿ, ಕರುಣೆ ಮತ್ತು ಹಸಿವಿನ ನರಳುವಿಕೆಯನ್ನು ವಾಮನರು ಮರೆತಂತೆ ತೋರುತ್ತದೆ. ವರ್ತಮಾನದಲ್ಲಿ ಹಸಿವಿನಿಂದ ಸಾಯುವವರ ಸಂಖ್ಯೆಯೂ ದೊಡ್ಡದಿದೆ. ಹೀಗಿದ್ದಾಗ ದಯೆಯಿಂದ ಬಡತನ ಬೆಳೆದಿದೆ ಎಂಬ ವಾಮನರ ವಿಚಾರವನ್ನು ಒಪ್ಪಲು ಸಾಧ್ಯವಿಲ್ಲ. ಹಸಿದವನಿಗೆ ಅನ್ನ ನೀಡುವುದು ಮಾನವ ಧರ್ಮದ ಮೂಲ ಬೀಜಮಂತ್ರವಾಗಿದೆ. ದಯೆ, ದಾನಾದಿಗಳು ಮತ್ತು ಮಾನವ ಪ್ರೀತಿಯು ಎಲ್ಲ ಧರ್ಮಗಳಲ್ಲಿವೆ.

ಈ ನಾಟಕದಲ್ಲಿ ಬೇಂದ್ರೆಯವರ ಆಡುನುಡಿ ರಂಗಪಠ್ಯವನ್ನು ಹೆಚ್ಚು ಸಿರಿವಂತಗೊಳಿಸಿದೆ. ‘ನಿದ್ಯಾಗಿಂದೆದ್ದರ ನದ್ಯಾಗ ಮುಳುಗಿ ಎದ್ದಾಂಗ ಅಂತ ತಿಳಕೊಂಡೀರೇನು?’, ‘ನೀ ಮರಾಠೀ ಹಾಡು, ಕನ್ನಡ ಹಾಡು, ಯಾವ ಭಾಷಾ ಆದ್ರೇನು? ತಿರಕೊಂಬೋದು ಸುಳ್ಳೇನು? ಸಾಗು ಮುಂದಕ. ಇನ್ನು ಮ್ಯಾಲೆ ‘ತಿರಕರಾರೂ ಇಲ್ಲಿ ಬರಬಾರದು' ಅಂತ ಬೋರ್ಡ್ ಹಚ್ಚಸಾವ ಇದ್ದೇನ.' ಈ ಬಗೆಯ ಭಾಷೆಯ ಸೊಗಡು ನಾಟಕದುದ್ದಕ್ಕೂ ಇದೆ. ಕೈ ಒಡ್ಡುವ ವಿವಿಧರಂಗೀ ವ್ಯಕ್ತಿತ್ವಗಳನ್ನು ಅಣಕವಾಡಿ ನಾಟಕ ವಿಡಂಬನೆಯಾಗಿ ಅರಳುತ್ತದೆ.

*** *** ***

‘ಉದ್ಧಾರ’ ನಾಟಕವು 1995ರ ತನಕ ಮೂರು ಆವೃತ್ತಿಗಳನ್ನು ಕಂಡಿದೆ. ನಾಟಕ ಆರು ಪ್ರವೇಶಗಳನ್ನು ಹೊಂದಿದೆ. ಬೇಂದ್ರೆಯವರು ‘ಉದ್ಧಾರ’ ಎಂಬೀ ಏಕಾಂಕ ದೃಶ್ಯವು ‘ಸಾಮಾಜಿಕ ಸಮಸ್ಯೆಯ ಅವಿದ್ಧ ಪ್ರಯೋಗ’ ಎಂದು ಕರೆದಿದ್ದಾರೆ.

ಇದು ಸ್ವಾತಂತ್ರ್ಯಪೂರ್ವದಲ್ಲಿ ಬರೆದ ನಾಟಕ. ಹಿಂದೂ ಪರಿಕಲ್ಪಿತ ವ್ಯವಸ್ಥೆ ನೈತಿಕ ಅಧಃಪತನಕ್ಕೀಡಾದುದನ್ನು ನಾಟಕ ಹೇಳುತ್ತದೆ. ಇಂದಿನ ದಲಿತ ಪರಿಭಾಷೆಯ ತಳಸಮುದಾಯಗಳ ಸಮಸ್ಯೆಗಳು, ಮಂದಿರ ಪ್ರವೇಶ ಮತ್ತು ನಿರ್ಮಾಣವು ಇಲ್ಲಿನ ಕೇಂದ್ರವಾಗಿದೆ. ಮೂರ್ತಿ ಭಗ್ನಗೊಳಿಸುವ ಖೂಳರು ಯಾವುದೇ ಜಾತಿ, ಕೋಮಿನಲ್ಲಿರಬಹುದು ಎಂಬುದನ್ನು ನಾಟಕ ಧ್ವನಿಸುತ್ತದೆ.

ಹಾಗೇ ನೋಡಿದರೆ ಇಲ್ಲಿ ಮುಖ್ಯ ಪಾತ್ರಗಳೆಂಬುವು ಇಲ್ಲ. ಆದರೆ ಪಾತ್ರಗಳ ಹಲವು ಧಾರೆಗಳಿವೆ. ಸಿದ್ಧಪ್ಪನಂಥವರು ಪರಂಪರೆಯ ಹಿಂದಿರುವವರು. ಅರಬಣ್ಣ, ದುರುಗಪ್ಪರು ಅಸ್ಪೃಶ್ಯ ಮುಂದಾಳುಗಳು, ಕೋದಂಡರಾಯ ನ್ಯಾಯವಾದಿ ಮತ್ತು ಸುಧಾರಕ ಮನೋಧೋರಣೆಯವರು. ಅಸ್ಪೃಶ್ಯರಿಗೆ ನ್ಯಾಯ ಕೊಡಿಸಲು ಹಾತೊರೆಯುವ ಕಳಕಳಿಯ ವ್ಯಕ್ತಿ. ವಿಘ್ನೇಶ್ವರ ಭಟ್ಟರು ಪುರಾಣವಾದಿ ಸಂಪ್ರದಾಯವಾದಿ, ಅಷ್ಟೇ ಅಲ್ಲ ರಾಯರ ಮನೆ ಪುರೋಹಿತ. ಸ್ಪರ್ಶಾನಂದರು ಒಬ್ಬ ಅಸ್ಪೃಶ್ಯರ ಉದ್ಧಾರಕ. ವೀರಭದ್ರಪ್ಪನವರು ವ್ಯಾಪಾರಿ - ಹೀಗೆ ಗ್ರಾಮವ್ಯವಸ್ಥೆಯ ಇನ್ನಿತರ ಪಾತ್ರಗಳು ನಾಟಕದ ಆಶಯವನ್ನು ಗಟ್ಟಿಗೊಳಿಸಿವೆ.

ಅಸ್ಪೃಶ್ಯರು ಸಹಕಾರ ಸಂಘ ಸ್ಥಾಪಿಸಿಕೊಂಡಿರುತ್ತಾರೆ. ಅವರಿಗೆ ದೇಗುಲಕ್ಕೊಂದು ಜಾಗ ಬೇಕಿರುತ್ತದೆ. ಸ್ಥಳವೊಂದು ಅಖೈರುಗೊಂಡು ಮನವಿ ಮಾಡಿದರೆ ಸರ್ಕಾರ ಯೋಜನೆಯನ್ನು ತಿರಸ್ಕರಿಸುತ್ತದೆ. ಏತನ್ಮಧ್ಯೆ ಭೈರವೇಶ್ವರ ಮೂರ್ತಿಯನ್ನು ಧ್ವಂಸಗೊಳಿಸಿದ ಬಾತಮಿ ಎಲ್ಲೆಡೆ ಕಾಳ್ಗಿಚ್ಚಿನಂತೆ ಹರಡುತ್ತದೆ. ಸಮಾಜದ ಹಿರಿಯರು ನಿಷ್ಕ್ರಿಯರು. ಆದರೆ ಕ್ರಿಯಾಶೀಲರಾದ ಕೋದಂಡರಾಯರು ಅಸ್ಪೃಶ್ಯರಿಗೆ ಭೈರವೇಶ್ವರ ಗುಡಿಯನ್ನು ನೀಡಲು ಮುಂದಾಗುತ್ತಾರೆ. ಆದರೆ ಸಂಪ್ರದಾಯವಾದಿಗಳಾದ ರುದ್ರಯ್ಯ, ವಿಘ್ನೇಶ್ವರ ಭಟ್ಟ, ಅಹೋಬಲಾಚಾರ್ಯರು ರಾಯರ ನಿಲುವಿಗೆ ವಿರೋಧ ವ್ಯಕ್ತಪಡಿಸುತ್ತಾರೆ.

ಅಸ್ಪೃಶ್ಯರು ಕೂಡ ಕೋದಂಡರಾಯರ ದಾರಿಗೆ ಅಡ್ಡವಾಗುವರು. ಆದರೆ ರಾಯರು ಸುಧಾರಣಾವಾದಿಗಳು. ಅವರು ಮುನ್ನುಗ್ಗುವರು. ದೇಗುಲ ಪ್ರವೇಶವನ್ನು ಠರಾಯಿಸಿಯೆ ಮುಂದೆ ಹೆಜ್ಜೆಯಿಡುವರು. ಆದರೆ ದುರಂತವೊಂದು ಘಟಿಸಿಬಿಡುತ್ತದೆ. ಜನ ಸಮುದಾಯದ ಕಾಲ್ತುಳಿತಕ್ಕೆ ರುದ್ರಯ್ಯ, ವಿಘ್ನೇಶ್ವರ ಭಟ್ಟ ಅಸುನೀಗುತ್ತಾರೆ. ಅವರು ಅಸ್ಪೃಶ್ಯರನ್ನು ವಿರೋಧಿಸುತ್ತಿದ್ದರು. ಗರ್ಭಗುಡಿ ಹೊಸ್ತಿಲಲ್ಲೇ ಕೊನೆಯುಸಿರೆಳೆಯುವರು. ವಿಚಿತ್ರವೆಂದರೆ ಹಾವು ಕಚ್ಚಿ ದುರಗಪ್ಪನೂ ಸಾಯುವನು. ಹೀಗೆ ನಾಟಕವು ಹಲವು ತಿರುವುಗಳನ್ನು ಪಡೆದು ದುರಂತದಲ್ಲಿ ಕೊನೆಗೊಳ್ಳುತ್ತದೆ.

ಪಂಚಮರ ಅಸ್ಪೃಶ್ಯ ವಿಷಯವನ್ನು ಇಟ್ಟುಕೊಂಡು ಬೇಂದ್ರೆಯವರು ನಾಟಕ ರಚಿಸಲು ಗಾಂಧೀಜಿಯವರ ದಲಿತೋದ್ಧಾರ ಚಿಂತನೆ ಪ್ರೇರಣೆಯೇ? ನಾಟಕದಲ್ಲಿ ಅಸ್ಪೃಶ್ಯತೆ ನಿರ್ಮೂಲನೆ ಮತ್ತು ಉದ್ಧಾರಗಳ ಚರ್ಚೆ, ಜಿಜ್ಞಾಸೆಯಿದೆ. ಇಂಥ ಅನಿಷ್ಟ ಆಚರಣೆಯ ವಿರೋಧದ ಸಮಸ್ಯೆ ‘ಉದ್ಧಾರ’ ನಾಟಕದ ಅಭಿವ್ಯಕ್ತಿಯಾಗಿದೆ.


1945ರಲ್ಲಿದ್ದ ಈ ಸಮಸ್ಯೆ ಇಂದು 21ನೆಯ ಶತಮಾನದಲ್ಲಿಯೂ ಬದಲಾಗಿಲ್ಲ! ಆದಕಾರಣ ಬೇಂದ್ರೆ ಅವರ ನಾಟಕ ‘ಉದ್ಧಾರ’ದ ಸಂಕೀರ್ಣ ವಸ್ತುವು ಸಾರ್ವಕಾಲಿಕವಾದುದು ಎಂದೆನಿಸುತ್ತದೆ. ಉದಾಹಣೆಗೆ...

ರಾಯರು-(ಏರುತ್ತಿರುವ ದನಿಯಲ್ಲಿ) ಏನ್ ರುದ್ರಯ್ಯನವರ, ಪಾಡಿನ ಹದ ಮೀರಿ ಎಲ್ಲಾ ಹಣ್ಣು ಆಗಿಬಿದ ಹಣ್ಣು! ಇಲ್ಲಿ ನೋಡ್ರಿ: ‘ಬೆಳಗಾಂವಿ ಜಿಲ್ಲೆಯ ಎಷ್ಟೋ ಹಳ್ಳಿಗಳಲ್ಲಿ ದೇವಾಲಯಗಳೊಳಗಿನ ಮೂರ್ತಿಗಳನ್ನು ಭಂಗಗೊಳಿಸಿದ್ದಾರೆ. ಯಾವ ಖೂಳರು ಈ ಕೆಲಸ ಮಾಡಿರುವರೋ ಇನ್ನೂ ತಿಳಿದಿಲ್ಲ’ (ಹಂಗಿಸುವ ದನಿಯಲ್ಲಿ) ಭಟ್ಟರ, ಎಚ್ಚರ ಅದನೋ, ಏನು ತೂಕಡಿಸಲಿಕ್ಕೆ ಹತ್ತೀರೋ? ದೇವರ ಶಿರಚ್ಛೇದ ಆಗಿದೆಯಂತೆ! ಶಿರಚ್ಛೇದ! ಒಡೆದವರು ಖೂಳರೋ, ಒಡೆದರೂ ಎಚ್ಚರವಿಲ್ಲದ ನಾವು ಮೂರ್ಖರೋ, ನನಗಿದು ತಿಳಿಯದ್ಹಾಂಗಾಗೇದ. ಹೊಟ್ಟೆಗೆ ಹಾಕಲಾರದವರು ಮಕ್ಕಳನ್ನು ಹಡೆಯೋದೂ, ದೇವರ್ನ ಕಾಯಲಾರದವರು ಗುಡಿಗುಂಡಾರ ಕಟ್ಟಸೋದೂ ಎರಡೂ ಅಷ್ಟೇ ಅವಿವೇಕ.- ಎಂಥ ಬೀಜದ ನುಡಿಗಟ್ಟು!

ರಾಯರು-(ಮರುಕದಿಂದ) ಭಟ್ರ, ಏನು ಬುನಾದಿಯೋ, ಏನು ಅನಾದಿಯೋ, ಈ ಗತಿಗೆಟ್ಟ ದೇವರ್ನ ಕಾಯೋ ಹಾದಿ ಯಾವುದೂ ಅಂತೀನಿ! ದೇವರ ಹೆಸರಿನ್ಯಾಗ ಕೊಬ್ಬಿದ ಭಟ್ಟರು, ಆಚಾರ್ಯರು, ಜಂಗಮರು, ತಮ್ಮ ಎದೀ ಕೊಟ್ಟಿ ಕಟ್ಟೀ ದೇವರ ಮೂರ್ತಿಗಳನ್ನು ಕಾಪಾಡೋದು ಕರ್ತವ್ಯವಲ್ಲ...? (ಉದ್ಧಾರ ನಾಟಕ-ಪುಟ, 18-19)


ಲೇಖಕರ ನುಡಿಯಲ್ಲಿ ಬೇಂದ್ರೆಯವರು ನಾಟಕಕ್ಕೆ ಒಂದು ಗಂಭೀರ ಪ್ರವೇಶಿಕೆ ನೀಡಿದ್ದಾರೆ. ‘ಸಮಾಜದ ಚಿತ್ರವನ್ನು ರಂಜನೆಗಾಗಿ ಇಡುವುದೊಂದು ರೀತಿಯಾದರೆ, ಸಮಾಜದೊಳಗಿನ ತೊಡಕುಗಳನ್ನು ಬೋಧಕ್ಕಾಗಿಯೂ ಪ್ರಚೋದನಕ್ಕಾಗಿಯೂ ಇಡುವುದೊಂದು ರೀತಿ’. ಬೇಂದ್ರೆಯವರ ಇನ್ನೊಂದು ಮಾತೂ ಇಷ್ಟವಾಯಿತು. ಅದು: ‘ನಾಟಕಗಳಲ್ಲಿ ಪಕ್ಷಕಟ್ಟಿ ಹೋರಾಡುವುದಕ್ಕಿಂತ ಪ್ರೇಕ್ಷಕರ ಅಂತಃಕರಣ-ವಿವೇಕಗಳು ಜಾಗೃತವಾಗುವಂತೆ ಪಕ್ಷ-ಪ್ರತಿಪಕ್ಷಗಳನ್ನು ಚಿತ್ರಿಸುವುದೊಳಿತು...’ ಎಂಬುದು. ರಂಗಪ್ರಯೋಗದ ಸಾರ್ಥಕತೆ ಇಲ್ಲಿಯೇ ಜನ್ಮತಾಳುವುದು.

ರಂಗಭಾಷೆ ಬಲು ಗಟ್ಟಿ ಮತ್ತು ಆಡು ಸೊಗಡಿನದ್ದು, ಪಾತ್ರದನ್ವಯ ಅದು ಸ್ವಭಾವ ಪಡೆದು ಹರಳುಗಟ್ಟಿದೆ. ‘ಹೇಳಿ ಕೇಳಿ ಹೊಲೇರು, ಕೊಲೆಗೂ ಹೇಸದವರು. ಧರ್ಮಕ್ಕ ಆಸಿಮಿಸಿ ಮಾಡತೇವ್ರೆ? ಇನ್ನಮ್ಯಾಗ ನೀವ ಗಟ್ಟಿ ಅದೀರೋ ಇಲ್ಲೋ ನೋಡಿಕೊಳ್ರಿ..' -ದುರುಗಪ್ಪನ ನುಡಿ. ಹಾಗೆಯೇ ಹಾರುವ, ಲಿಂಗವಂತ, ಭಟ್ಟ, ಸ್ವಾಮಿಗಳ ಇನ್ನಿತರ ಸವರ್ಣೀಯರ ಭಾನಗಡಿಗಳನ್ನು ಅವರು ನಿಷ್ಠುರವಾಗಿ ಲೇವಡಿ ಮಾಡಿದ್ದಾರೆ. **ಹಯವದನ** - (ಅಣಕಿಸುವ ದನಿಯಲ್ಲಿ) ‘ಹಿಂಗಾದರ ಈಗ ನರಳಿದ್ದರ ಮುಂದ ನರಳಬೇಕು. ಗೋಪಿಚಂದನದ ಭುಜಾ ಭಸ್ಮಕ್ಕ ತಿಕ್ಕಬೇಕು; ಹೊಲೆಯರ ಪಾದಧೂಳಿ ನೆಕ್ಕಬೇಕು. ಆಗಲಿ ಕುಲಕೋಟಿ ಉದ್ದಾರ!’ ಹೀಗೆ ಆಡುವ ಮಾತುಗಳು ನಾಟಕದ ಗಾಢ ಮೌಲಿಕ ಆಶಯಗಳ ಸಾಮರ್ಥ್ಯವನ್ನು ಅಭಿವ್ಯಕ್ತಿಸುತ್ತವೆ.



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಗಣಿತದಲ್ಲಿ ಗರ್ದಿ ಗಮ್ಮತ್ತು

ಸಂಖ್ಯೆಗಳಲ್ಲಿ ಸೌಂದರ್ಯ

ದೊಡ್ಡಾಟ: ಸಂಖ್ಯಾ ಬಾಗಿಲು ಪರದೆ.

ಸೌಂದರ್ಯ ಎಂಬುವುದು ನೋಡುಗರ ಕಣ್ಣಿನಲ್ಲಿ ಇದೆ ಎಂಬ ಮಾತಿದೆ. ಸಂಖ್ಯೆಗಳಲ್ಲೂ ಅಂಥ ಸೌಂದರ್ಯವನ್ನು ಕಾಣಬಹುದು. ನೀವೆಲ್ಲ ಬಾಗಿಲಿಗೆ ಹಾಕಿರುವ ಬಾಗಿಲು ಪರದೆಯನ್ನು ನೋಡಿರಬಹುದು. ಅದನ್ನು ನೂಲಿನಿಂದ ಹೆಣೆದಿರುತ್ತಾರೆ. ಆದರೆ ಇಲ್ಲಿ ಅಂತಹದೇ ಪರದೆಯನ್ನು ಅಂಕಿಗಳಿಂದ ಹೆಣೆಯಲಾಗಿದೆ. ಎರಡೂ ಭಾಗಗಳ ಅಂಕಿಗಳ ಮೊತ್ತವನ್ನು ಕೂಡಿಸಿ ನೋಡಿದರೆ ಮೊತ್ತ ಮಾತ್ರ ಒಂದೇ. ಕೂಡಿಸಿ ನೋಡಿ.

```
1 2 3 4 5 6 7 8 9        9 8 7 6 5 4 3 2 1
1 2 3 4 5 6 7 8            8 7 6 5 4 3 2 1
1 2 3 4 5 6 7                7 6 5 4 3 2 1
1 2 3 4 5 6                    6 5 4 3 2 1
1 2 3 4 5                        5 4 3 2 1
1 2 3 4                            4 3 2 1
1 2 3                                3 2 1
1 2                                    2 1
1                                        1
```

ಸಣ್ಣಾಟ: ಗುಣಿಸು- ಇಂದಿನ ದಿನಾಂಕ ನೋಡು

4016003
X 7
____
28-11-2021



ಶಬ್ದಗಳೊಡನೆ ಸರಸ

ಇಲ್ಲಿ ಕೊಟ್ಟಿರುವ 15 ಪದಗಳಲ್ಲಿ ಸೂಕ್ತವಾದ 3 ಪದಗಳನ್ನು ಆಯ್ದು, ಒಂದು ಸಂಯುಕ್ತ ಪದ ಮಾಡಿ. ಹೀಗೆ ಒಟ್ಟು 5 ಪದಗಳನ್ನು ಮಾಡಲು ಪ್ರಯತ್ನಿಸಿ.

ಉದಾ:
ಪುಷ್ಪ + ಕವಿ + ಮಾನ = ಪುಷ್ಪಕವಿಮಾನ

1__________
2__________
3__________
4__________
5__________

ಪುಷ್ಪ	ರಾಜ	ರುಚಿ
ಆಹಾ	ಜಗ	ಮನ
ರವಿ	ಹನಿ	ಜ್ಞಾನಿ
ಗುರು	ದನಿ	ಕವಿ
ಯಮ	ಮಾನ	ನಗ

ಪದ - ಹಿಗ್ಗು

1. ಅವು 2. ಆಕೆ 3. ಇವೆ 4. ಎರೆ 5. ಉರ 6. ಒಟ್ಟು 7. ಓಡು 8. ಅಂಜು

1		ಕ		
2		ಲಾ		
3		ದ		
4		ರು		
5		ಗ್ಗ		
6		ರಿ		
7		ದಾ		
8		ರೈ		



ಅದಲು ಬದಲು ಕಂಚಿ ಕದಲು

1. ಕಾಳಗಬಗೆ = ______
2. ಸಂಸದ ತಕ್ಷಣ = ______
3. ಕುಡ ಬಿಗಿಸು = ______
4. ರವಿ ಚಾದ ಹಣ = ______

ಟ್ವೆಂಟಿ – 20 ಮ್ಯಾಚ್

ಕವಿ ಕಾವ್ಯನಾಮ ಹೊಂದಿಸಿ


1. ರನ್ನ	A. ಸಿದ್ಧಯ್ಯ ಪುರಾಣಿಕ
2. ನೃಪತುಂಗ	B. ನಂದಳಿಕೆ ಲಕ್ಷ್ಮೀನಾರಾಯಣಪ್ಪ
3. ಅಭಿನವಪಂಪ	C. ಹಲಸಂಗಿ ಚನ್ನಬಸಪ್ಪ
4. ಶಿವಕವಿ	D. ಅಮೋಘವರ್ಷ
5. ಕುಮಾರವ್ಯಾಸ	E. ಬೆಟಗೇರಿ ಕೃಷ್ಣ ಶರ್ಮ
6. ಮುದ್ದಣ್ಣ	F. ರತ್ನಪ್ಪ ಮುಧೋಳ
7. ಕವಿಶಿಷ್ಯ	G. ನಾರಾಣಪ್ಪ (ಕೋಳಿವಾಕ)
8. ಮಧುರಚೆನ್ನ	H. ಹರಿಹರ
9. ಆನಂದಕಂದ	I. ನಾಗಚಂದ್ರ
10. ಕಾವ್ಯಾನಂದ	J. ಪಂಜೆ ಮಂಗೇಶರಾಯ

ಭಾರತೀಯ ಮಹಾನ್ ವ್ಯಕ್ತಿಗಳಿಗೂ ಅವರ ಬಿರುದುಗಳಿಗೂ ಹೊಂದಿಸಿ

1. ರಾಷ್ಟ್ರಪಿತ	A ಲಾಲ ಬಹಾದ್ದೂರ್ ಶಾಸ್ತ್ರಿ
2. ಲೋಕಮಾನ್ಯ	B ಬಾಲಗಂಗಾಧರನಾಥ ತಿಲಕ್
3. ಸರದಾರ	C ಜಯಪ್ರಕಾಶ ನಾರಾಯಣ
4. ಪಂಜಾಬ್ ಸಿಂಹ	D ಗಾಂಧೀಜಿ
5. ಗುರುದೇವ	E ವಲ್ಲಭಬಾಯಿ ಪಟೇಲ್
6. ಭಾರತದ ಕೋಗಿಲೆ	F ಜವಾಹರಲಾಲ್ ನೆಹರು
7. ಲೋಕನಾಯಕ	G. ಸುಭಾಷ್ ಚಂದ್ರ ಭೋಸ್
8. ನೇತಾಜಿ	H ಲಾಲಾ ಲಜಪತರಾಯ್
9. ಪಂಡಿತ	I ರವೀಂದ್ರನಾಥ ಟ್ಯಾಗೋರ್
10. ಶಾಂತಿದೂತ	J ಸರೋಜಿನಿ ನಾಯ್ಡು

ಡಿಂಗ್ಲ ಚಿಕ್ಕು ಕೇಶ್ರಸ್ಪು ಕಥೆಯ — ಪಶ್ಚಾತ್ತಾಪ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಆತ ಒಬ್ಬ ಪ್ರಸಿದ್ಧ ಯುವ ಚಿತ್ರಕಲಾವಿದ. ತಾನು ರಚಿಸುವ ಕಲಾಕೃತಿಗಳು ಇನ್ನೂ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗಬೇಕು ಎಂದು ದುರಾಸೆಯಿಂದ ತಪ್ಪು ದಾರಿ ಹಿಡಿಯುತ್ತಾನೆ



ಹಣದ ಆಸೆಯಿಂದ ತನ್ನ ದೇಶದ ನೋಟುಗಳ ಚಿತ್ರಬರೆದು ಚಲಾವಣೆ ಮಾಡಲು ಮುಂದಾಗುತ್ತಾನೆ. ಮೂಲ ನೋಟುಗಳಿಗಿಂತಲೂ ಅತ್ಯಾಕರ್ಷಕವಾಗಿ ಚಿತ್ರಿಸುತ್ತಾನೆ




ಹೀಗೆ ನಕಲಿ ಹಣ ಚಲಾವಣೆಯಲ್ಲಿ ಯಶಸ್ವಿಯಾಗುತ್ತಾನೆ. ಒಮ್ಮೆ ಮನೆಯ ಪಕ್ಕದಲ್ಲೇ ಒಬ್ಬ ತರಕಾರಿ ಮಾರುವವಳ ಹತ್ತಿರ ಅದೇ ನೋಟು ಬಳಸಿ ವ್ಯಾಪಾರ ಮಾಡುತ್ತಾನೆ



ಆ ನೋಟು ಕ್ರಮೇಣ ಬಣ್ಣ ಕಳೆದುಕೊಳ್ಳುತ್ತದೆ. ಆ ನೋಟಿನ ಮೂಲ ಹುಡುಕುತ್ತಾ ಬಂದ ಪೊಲೀಸರು ಕಲಾವಿದನನ್ನು ಬಂಧಿಸಿ ಜೈಲಿಗೆ ಹಾಕುತ್ತಾರೆ. ಅಲ್ಲಿಯೂ ಕಲಾಕೃತಿ ರಚಿಸುತ್ತಾನೆ



ಜೈಲಿನ ಹೊರಗೆ ನಡೆದ ಪ್ರದರ್ಶನಗಳಲ್ಲಿ ಈ ಕಲಾವಿದನ ಕಲಾಕೃತಿಗಳು ಅತಿ ಹೆಚ್ಚು ಬೆಲೆಗೆ ಮಾರಾಟವಾಗಿ ಅಭಿಮಾನಿಗಳೂ ಹೆಚ್ಚುತ್ತಾರೆ



ಜೈಲಿನಿಂದ ಬಿಡುಗಡೆ ವೇಳೆ ಕಲಾಕೃತಿಗಳ ಮಾರಾಟದ ಹಣವನ್ನು ಅಧಿಕಾರಿಗಳು ಕೊಡುತ್ತಾರೆ. ಕಲಾವಿದ ನಾನು ಖೋಟಾ ನೋಟು ಬರೆದೇ ಸಮಯ ಹಾಳುಮಾಡಿದೆ ಎಂದು ಪಶ್ಚಾತ್ತಾಪಪಡುತ್ತಾನೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು: 1. ಕಾಡಿಗೆ, 2. ಕಾಪಾಡು, 3. ಬಾಳೆಲೆ, 4. ಸನ್ಮಾನ, 5. ಬಳ್ಳಾರಿ, 6. ಒಗ್ಗಟ್ಟು, 7. ಹೆಗ್ಗಣ, 8. ಹಾರಿಸು

ಅದಲು ಬದಲು ಕಂಚಿ ಕದಲು: 1. ಗರತಿಯ ತವರು, 2. ಕುಟ್ಟಿದ ಅಕ್ಕಿ, 3. ಹಗರಣ, 4. ಆಪಾದನೆ ಗೊಂದಲ ಗಣಿತ: ಸಂಕಲನ 8 + 2 = 10, ವ್ಯವಕಲನ 12-2 = 10, ಗುಣಾಕಾರ 5 X 2 = 10, ಭಾಗಾಕಾರ 20/2 = 10

ಟ್ವೆಂಟಿ-20 ಮ್ಯಾಚ್: 1-E, 2-D, 3-M, 4-C, 5-B, 6-T, 7-S, 8-F, 9-G, 10-O, 11-J, 12-Q, 13-R, 14-L, 15-P, 16-I, 17-H, 18-N, 19-K, 20-A.

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಭಾರ್ಗವಿ ಎನ್., ವಿಜಯಪುರ (ದೇವನಹಳ್ಳಿ)



ನರೇನ್ ಮಹಾದೇವ, ಕೊಳ್ಳೇಗಾಲ



ಪ್ರೀತಿ ಇಟಗಿ, ಮೈಲೇಶ್ವರ (ವಿಜಯಪುರ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಎಫ್‌ಐಎಚ್ ಜೂನಿಯರ್ ಹಾಕಿ ವಿಶ್ವಕಪ್: ಪೋಲೆಂಡ್ ಎದುರು ಭರ್ಜರಿ ಗೆಲುವು

ಎಂಟರ ಘಟ್ಟಕ್ಕೆ ಭಾರತ ಲಗ್ಗೆ

ಭುವನೇಶ್ವರ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟಿತು.

ಶನಿವಾರ ಇಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 8-2ರಿಂದ ಪೋಲೆಂಡ್ ವಿರುದ್ಧ ಜಯಭೇರಿ ಬಾರಿಸಿತು. ಗುಂಪು ಹಂತದ ಮೊದಲ ಪಂದ್ಯದಲ್ಲಿ ಭಾರತವು 4-5ರಿಂದ ಫ್ರಾನ್ಸ್ ವಿರುದ್ಧ ಆಘಾತ ಅನುಭವಿಸಿತ್ತು. ಎರಡನೇ ಪಂದ್ಯದಲ್ಲಿ 13-1ರಿಂದ ಕೆನಡಾ ವಿರುದ್ಧ ಭರ್ಜರಿ ಜಯ ಸಾಧಿಸಿತ್ತು.

ಇದೀಗ ಮೂರನೇ ಹಣಾಹಣಿಯಲ್ಲಿ ತಂಡದ ಉಪನಾಯಕ ಸಂಜಯಕುಮಾರ್ (4ನಿ, 58ನಿ), ಅರೈಜಿತ್ ಸಿಂಗ್ ಹುಂಡಾಲ (8ನಿ,60ನಿ) ಮತ್ತು ಸುದೀಪ್ ಚಿಮಾಕೊ (24ನಿ, 40ನಿ) ಅವರು ತಲಾ ಎರಡು ಗೋಲು ಗಳಿಸಿ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

ಉತ್ತಮ್ ಸಿಂಗ್ (34ನೇ ನಿ) ಮತ್ತು ಶ್ರದ್ಧಾನಂದ ತಿವಾರಿ (38ನಿ) ಕೂಡ ತಂಡದ ಗೋಲು ಗಳಿಕೆ ಹೆಚ್ಚಲು ತಮ್ಮ ಕಾಣಿಕೆ ನೀಡಿದರು. ಪಂದ್ಯದ ಆರಂಭದಿಂದಲೇ ಆಕ್ರಮಣಶೀಲ ಆಟವಾಡಿದ ತಂಡವು ಮೇಲುಗೈ ಸಾಧಿಸಿತು.

ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಭಾರತದ ಆಟಗಾರರು ಪ್ರಾಬಲ್ಯ ಮೆರೆದರು. ಕೊನೆಯ ಕ್ವಾರ್ಟರ್‌ನಲ್ಲಿ ಪ್ರತಿ ಹೋರಾಟ ತೋರಿದ ಪೋಲೆಂಡ್ ತಂಡವು ಎರಡು ಗೋಲು ಗಳಿಸುವಲ್ಲಿ ಯಶಸ್ವಿಯಾಯಿತು. ವೋಸಿಚ್ ರುಕೊವಸ್ಕಿ (50ನಿ) ಮತ್ತು ರಾಬರ್ಟ್ ಪಾವ್ಲಾಕ್ (54ನಿ) ಗೋಲು ಗಳಿಸಿದರು.

ಡಿಸೆಂಬರ್ 1ರಂದು ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಹೋದ ಸಲದ ರನ್ನರ್ಸ್ ಅಪ್ ಬೆಲ್ಜಿಯಂ ತಂಡವನ್ನು ಭಾರತವು ಎದುರಿಸಲಿದೆ.

ಬೆಲ್ಜಿಯಂ ತಂಡವು ಎ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿ ಎಂಟರ ಘಟ್ಟಕ್ಕೆ ಪ್ರವೇಶಿಸಿದೆ.

ಡಿ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನ 3-1ರಿಂದ ಈಜಿಪ್ಟ್ ಎದುರು ಗೆದ್ದಿತು.

ಮನಮುಟ್ಟಿದ ಮನಪ್ರೀತ್ ಮಾತು: ಬಿ ಗುಂಪಿನ ಮೊದಲ ಪಂದ್ಯದಲ್ಲಿ ಆಘಾತ ಅನುಭವಿಸಿದ್ದ ಭಾರತ ತಂಡಕ್ಕೆ ಸೀನಿಯರ್ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಅವರು ನೀಡಿದ ಸಲಹೆಗಳು ಪ್ರೇರಣಾದಾಯಿಯಾದವು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಹಾಕಿ ತಂಡವನ್ನ ಮುನ್ನಡೆಸಿದ್ದ ಮನ್‌ಪ್ರೀತ್, ತಂಡದ ಆಟಗಾರರನ್ನು ಹುರಿದುಂಬಿಸಿದ್ದರು.

‘ನಿಮ್ಮ ಸಾಮರ್ಥ್ಯದಲ್ಲಿ ವಿಶ್ವಾಸವಿಡಿ. ಚೆನ್ನಾಗಿ ಆಡಿ ಎಂದಷ್ಟೇ ಹೇಳಿದ್ದೆ. ಈ ಹುಡುಗರಲ್ಲಿ ಹೋರಾಟ ಮನೋಭಾವ ತುಂಬಿದೆ. ಎರಡನೇ ಪಂದ್ಯದಿಂದ ಅವರು ಪುಟಿದೆದ್ದರು. ನಾವು ಅವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ’ ಎಂದು ಮನ್‌ಪ್ರೀತ್ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಭಾರತದ ಆಟಗಾರರ ಗೆಲುವಿನ ಸಂಭ್ರಮ–ಪಿಟಿಐ ಚಿತ್ರ

ಪ್ಯಾರಾ ಈಜು: ಏಷ್ಯನ್ ದಾಖಲೆ ಬರೆದ ನಿರಂಜನ್

ಬೆಂಗಳೂರು: ಭಾರತದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು 400 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ 12 ವರ್ಷಗಳ ಹಿಂದಿನ ದಾಖಲೆಯನ್ನು ಮೀರಿದ್ದಾರೆ.

ಜರ್ಮನ್ ಇಂಟರ್‌ನ್ಯಾಷನಲ್ ಕಪ್ ಚಾಂಪಿಯನ್‌ಷಿಪ್‌ನ ಎಸ್7 ವಿಭಾಗದ 400 ಮೀ, ಫ್ರೀಸ್ಟೈಲ್‌ನಲ್ಲಿ ಬೆಂಗಳೂರಿನ ನಿರಂಜನ್, 5 ನಿಮಿಷ 25.53 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ 2009ರಲ್ಲಿ ಜಪಾನ್‌ನ ಜುಂಪೆ ಕಿಮುರಾ (5:27.72) ನಿರ್ಮಿಸಿದ್ದ ದಾಖಲೆಯನ್ನು ಅಳಿಸಿ ಹಾಕಿದರು.



ನಿರಂಜನ್

ಎಂಎಂಎ: ರಿತುಗೆ ಸ್ಟ್ಯಾಂಪ್ ಸವಾಲು

ನವದೆಹಲಿ (ಪಿಟಿಐ): ಭಾರತದ ಮಾಜಿ ಕುಸ್ತಿಪಟು ರಿತು ಫೋಗಟ್ ಅವರು ಡಿಸೆಂಬರ್ 3ರಂದು ಸಿಂಗಪುರದಲ್ಲಿ ನಡೆಯಲಿರುವ ಮಿಕ್ಸ್ ಮಾರ್ಷಲ್ ಆರ್ಟ್ಸ್ ಫೈನಲ್‌ನಲ್ಲಿ ಥಾಯ್ಲೆಂಡ್‌ನ ಸ್ಟ್ಯಾಂಪ್ ಫೇರ್‌ಟೆಕ್ಸ್ ಅವರನ್ನು ಎದುರಿಸಲಿದ್ದಾರೆ.

48 ಕೆಜಿ ವಿಭಾಗದಲ್ಲಿ ರಿತು ಸ್ಪರ್ಧಿಸಿದ್ದಾರೆ. ಫೇಸ್ ಸ್ಟ್ಯಾಂಪ್ ಅವರು ಮಹಿಳೆಯರ ವಿಶ್ವ ಕಿಕ್ ಬಾಕ್ಸಿಂಗ್ ಮತ್ತು ವಿಶ್ವ ಮುಯ್ ಥಾಯ್ ಚಾಂಪಿಯನ್ ಆಗಿದ್ದಾರೆ.

ಬ್ಯಾಡ್ಮಿಂಟನ್: ಸಿಂಧುಗೆ ನಿರಾಸೆ

ಬಾಲಿ, ಇಂಡೊನೇಷ್ಯಾ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಸೋಲನುಭವಿಸುವುದರೊಂದಿಗೆ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಭಿಯಾನ ಅಂತ್ಯವಾಗಿದೆ.

ಥಾಯ್ಲೆಂಡ್‌ನ ಮಾಜಿ ವಿಶ್ವ ಚಾಂಪಿಯನ್ ರಚನೊಕ್ ಇಂತನಾನ್ ಎದುರಿನ ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ ಶನಿವಾರ ಸಿಂಧು 21-15, 9-21, 14-21ರಿಂದ ನಿರಾಸೆ ಅನುಭವಿಸಿದರು.

ಪುರುಷರ ಡಬಲ್ಸ್ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ 16-21, 18-21ರಿಂದ ಇಂಡೊನೇಷ್ಯಾದ ಮಾರ್ಕಸ್ ಫೆರ್ನಾಲ್ಡಿ ಗಿಡಿಯೊನ್ ಮತ್ತು ಕೆವಿನ್ ಸಂಜಯ ಸುಕಮುಲಿಯೊ ಎದುರು ಎಡವಿದರು.



ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಕಾರ್ತಿಕಾ ಪದ್ಮಕುಮಾರ್ ಮತ್ತು ಪ್ರಣೀತ್ ರೆಡ್ಡಿ

ಈಜು: ಸಂದೇಶ್, ಪಾರ್ಥಗೆ ಚಿನ್ನ

ಮಂಗಳೂರು: ಕರ್ನಾಟಕದ ಸಂದೇಶ್ ತಿಂಗಳಾಯ್ ಅವರು ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗಳಿಸಿದರು.

ಸಂತ ಅಲೋಷಿಯಸ್ ಈಜುಕೊಳದಲ್ಲಿ ಎರಡನೇ ದಿನವಾದ ಶನಿವಾರ ನಡೆದ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ 50 ಮೀಟರ್ಸ್ ಫ್ರೀಸ್ಟೈಲ್ ‘ಇ’ ಗುಂಪು ವಿಭಾಗದಲ್ಲಿ (29.90 ಸೆಕೆಂಡು) ಅವರು ಈ ಸಾಧನೆ ಮಾಡಿದ್ದಾರೆ. ಇದೇ ವಿಭಾಗದ ‘ಸಿ’ ಗುಂಪಿನಲ್ಲಿ ಕರ್ನಾಟಕದ ಪಾರ್ಥ್ ವಾರಣಾಸಿ (25. 41 ಸೆಕೆಂಡು) ಚಿನ್ನದ ಸಾಧನೆ ಮಾಡಿದರು.

ಫಲಿತಾಂಶ: ಪುರುಷರು: 50 ಮೀ. ಫ್ರೀಸ್ಟೈಲ್: ‘ಜೆ’ ಗುಂಪು: ಬಿ.ಆರ್. ಗೋಪಾಲ್ ರಾವ್ (ಕರ್ನಾಟಕ)–1, ಕಾಲ: 48:22, ಸುಂದರಂ ಬಸವಪ್ಪ (ಕರ್ನಾಟಕ)–2, ಗುಂಪು ‘ಐ’:ಥಾಮಸ್ ಪಿ.ಟಿ(ಕೇರಳ)–1, ಕಾಲ: 36;50, ತೊಕ್ಚೊಂ ಅರುಣ್‌ಕುಮಾರ್ ಸಿಂಗ್(ಮಣಿಪುರ)–2, ಸಪಮ್ಮ ಮಹೇಂದ್ರೊ ಸಿಂಗ್(ಮಣಿಪುರ)–3,

ಮಹಿಳೆಯರು: 50 ಮೀ. ಫ್ರೀಸ್ಟೈಲ್; ಗುಂಪು ‘ಐ’: ಸೀತಾ ರಾವ್ (ಕರ್ನಾಟಕ)–1, ಕಾಲ:58:36, ಪುಷ್ಪಾ ಭಟ್ (ಮಹಾರಾಷ್ಟ್ರ)–2, ಲಲಿತಾ ವಿಜಯರಾಘವನ್ (ಕರ್ನಾಟಕ)–3. ಗುಂಪು ‘ಎಚ್’: ಸುನೀತಾ ರಾವ್ ಅಗರವಾಲ್ (ಕರ್ನಾಟಕ)–1, ಎಡ್ನಾ ಶರ್ಮಾ (ದೆಹಲಿ)–2. ಲೀಲಾ ಚವ್ಹಾಣ್–(ಗುಜರಾತ್) 3, ಗುಂಪು ‘ಎನ್’ : ಸುಪ್ರೀಯಾ ಚಿಟ್ಬಾ(ಕರ್ನಾಟಕ)–1, ಸಮೃದ್ಧ ಆಳ್ವ(ಕರ್ನಾಟಕ)– 2, ಅನುರಾಧಾ ಎಸ್(ಕರ್ನಾಟಕ)–3



ಸಂದೇಶ್ ತಿಂಗಳಾಯ್

ಪುಣೆ ರೇಸ್

ಜುಕ್ಕರೆಲ್ಲಿ ಡರ್ಬಿ ಗೆಲ್ಲುವ ನಿರೀಕ್ಷೆ

ಪುಣೆ ಡರ್ಬಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜುಕ್ಕರೆಲ್ಲಿ ಡರ್ಬಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹೆಲ್‌ಬೆಂಟ್ 1, ಜುಬಿಲೆಂಟ್ ಜರ್ನಿ 2, ಕರ್ದಾಶಿಯನ್ 5
2ನೇ ರೇಸ್: ಜೈಂಟ್ ಸ್ಟಾರ್ 4, ಆರ್ಕೇಡಿಯಾ 2, ಮೆಜೆಸ್ಟಿಕ್ ವಾರಿಯರ್ 3
3ನೇ ರೇಸ್: ದಿ ಅವೇಕನಿಂಗ್ 2, ಸಾವರಿನ್ ಮಾಸ್ಟರ್ 3, ಎಕ್ಸಲೇಟರ್ 4
4ನೇ ರೇಸ್: ಐರನ್ ಏಜ್ 1, ಸೇಂಟ್ ಆಂಡ್ರ್ಯೂಸ್ 4
5ನೇ ರೇಸ್: ಫಾಸ್ಟ್ ರೈನ್ 9, ಟಗ್ರಿಯೊ 4, ಎಕ್ಸೋಟಿಕ್ 2
6ನೇ ರೇಸ್: ಡ್ರಾಗೊನೆಸ್ 6, ಪ್ರೆಸಿಡೆನ್ಶಿಯಲ್ 2, ಲಿಟ್ 7
7ನೇ ರೇಸ್: ಲವ್ ವಾರಿಯರ್ 3, ಇಂಡಿಯನ್ ಕ್ರೌನ್ 2, ಹಿಲಾಡ್ 6
8ನೇ ರೇಸ್: ಜುಕ್ಕರೆಲ್ಲಿ 11, ಕ್ವೀನ್ ಓ ವಾರ್ 12, ಸ್ಟಾರ್ ಈಸ್ ಬಾರ್ನ್ 1
9ನೇ ರೇಸ್: ಲಾರ್ಡ್ ಬೈರೊನ್ 5, ಕಮಾಂಡ್‌ಮೆಂಟ್ 4, ಐರಾ 2
10ನೇ ರೇಸ್: ಮೊನಾರ್ಕಿ 2, ಸ್ಪಿರಿಟ್ ಬೇ 8, ಲಾ ಪೆರೆಗ್ರಿನಾ 14

ಉತ್ತಮ ಬೆಟ್: ದಿ ಅವೇಕನಿಂಗ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	6,7,8,9,10	2,3,4	4,5,6	8,9,10

ಟೆನಿಸ್ ಟೂರ್ನಿ: ಕಾರ್ತಿಕಾ, ಪ್ರಣೀತ್‌ರೆಡ್ಡಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಶ್ರೇಯಾಂಕದ ಪ್ರಣೀತ್ ರೆಡ್ಡಿ ಮತ್ತು ಕಾರ್ತಿಕಾ ಪದ್ಮಕುಮಾರ್ ಅವರು ಎಫ್‌ಎಸ್‌ಎ ಎಐಟಿಎ ಸಿಎಸ್7 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಫಾರ್ಚುನ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ಫೈನಲ್‌ನಲ್ಲಿ ಪ್ರಣೀತ್ 6-3, 6-1ರಿಂದ ರುಹಾನ್ ಕೊಮಂದೂರ್ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಐದನೇ ಶ್ರೇಯಾಂಕದ ಕಾರ್ತಿಕಾ 7-6 (2), 6-4ರಿಂದ ಎಂಟನೇ ಶ್ರೇಯಾಂಕದ ರಿತಿಶಾ ಚೌಧರಿ ಅವರನ್ನು ಸೋಲಿಸಿದರು.

ವಿಶ್ವ ಟಿಟಿ ಚಾಂಪಿಯನ್‌ಷಿಪ್: ಮಣಿಕಾ ಮಿಂಚು

ಕ್ವಾರ್ಟರ್‌ಫೈನಲ್‌ಗೆ ಭಾರತ ತಂಡಗಳು

ಹ್ಯೂಸ್ಟನ್ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತದ ಮಹಿಳಾ ಡಬಲ್ಸ್ ಮತ್ತು ಮಿಶ್ರ ವಿಭಾಗದ ತಂಡಗಳು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ಪ್ರವೇಶಿಸಿವೆ.

ಮಹಿಳಾ ಡಬಲ್ಸ್‌ನ 16ರ ಘಟ್ಟದ ಸೆಣಸಾಟದಲ್ಲಿ ಶುಕ್ರವಾರ, ಕರ್ನಾಟಕದ ಅರ್ಚನಾ ಕಾಮತ್ ಮತ್ತು ಮಣಿಕಾ ಬಾತ್ರಾ ಜೋಡಿಯು 11-4, 11-9, 6-11, 11-7ರಿಂದ ಹಂಗರಿಯ ಡೋರಾ ಮದಾರಜ್ ಮತ್ತು ಜಾರ್ಜಿನಾ ಪೋಟಾ ಅವರನ್ನು ಪರಾಭವಗೊಳಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಮಣಿಕಾ ಹಾಗೂ ಜಿ.ಸತ್ಯನ್ ಅವರು ಪ್ರೀ-ಕ್ವಾರ್ಟರ್‌ಫೈನಲ್‌ನಲ್ಲಿ ಅಮೆರಿಕಾ–ಚೀನಾ ಜೋಡಿಯಾದ ಕ್ಯಾನಲ್ ಜ್ಯಾ ಹಾಗೂ ವಾಂಗ್ ಮಾನ್ಯೂ ಎದುರು ಗೆದ್ದು ಎಂಟರಘಟ್ಟ ಪ್ರವೇಶಿಸಿದರು.

ಭಾರತದ ಜೋಡಿಯು 15-17, 10-12, 12-10, 11-6 11-7ರಿಂದ ಜಯ ಒಲಿಸಿಕೊಂಡಿತು.